ಸಂಪುಟ 6 ಸಂಚಿಕೆ 3
೧೭—೧೧—'೫೭

ಜನಶಕ್ತಿ

ಪ್ರಗತಿಶೀಲ ಕನ್ನಡ ವಾರಪತ್ರಿಕೆ
ಪುಟ ೧೦ ಬೆಲೆ: ೧೩ ನ. ಪೈಸೆ

ಕರ್ನಾಟಕ ರೈತ ಸಮ್ಮೇಳನ ಯಶಸ್ವಿಯಾಗಲಿ

ನವಂಬರ್ 16 ಮತ್ತು 17 ರಂದು ಕರ್ನಾಟಕದ ರೈತರ ಪ್ರಥಮ ಪ್ರಾಂತ ಸಮ್ಮೇಳನ ನಡೆಯಲಿದೆ. ಈ ಸಮ್ಮೇಳನವು ನಾಡಿನ ರೈತರ ಆಸಕ್ತಿಯನ್ನು ಕುತೂಹಲವನ್ನು ಕೆರಳಿಸಿದೆ. ರೈತರ ಮುಂದಿರುವ ಸಮಸ್ಯೆಗಳನ್ನು ಚರ್ಚಿಸಿ ಒಂದು ಪ್ರಾಂತೀಯ ರೈತ ಸಂಘಟನೆಯನ್ನು ಸ್ಥಾಪಿಸಲು ಈ ಸಮ್ಮೇಳನವನ್ನು ಕರೆಯಲಾಗಿದೆ. ಈ ಉದ್ದಿಶ್ಯವು ಸಫಲವಾಗಿ ಸಮ್ಮೇಳನ ಯಶಸ್ವಿಯಾಗಲೆಂದು ನಾವು ಹಾರೈಸುತ್ತೇವೆ.

ಕರ್ನಾಟಕ ಪ್ರಾಂತ ರಚನೆಯಾದ ನಂತರ ಇದೇ ಮೊದಲ ಬಾರಿಗೆ ನಮ್ಮ ನಾಡಿನ ರೈತ ಪ್ರತಿನಿಧಿಗಳು ಸೇರಲಿದ್ದಾರೆ. ಐದು ಆಡಳಿತಗಳಲ್ಲಿ ಹರಿದು ಹಂಚಲ್ಪಟ್ಟ ಕನ್ನಡ ಭೂಮಿ ಒಂದಾದ ನಂತರ ನಡೆಯುವ ಈ ಸಮ್ಮೇಳನ ಬಹಳ ಮಹತ್ವದಿಂದ ಕೂಡಿದೆ. ಬೇರೆ ಬೇರೆ ಪ್ರದೇಶದ ರೈತರ ವಿವಿಧ ಸಮಸ್ಯೆಗಳು, ಭೂ ಸಂಬಂಧಗಳು, ಭೂ ಶಾಸನಗಳು, ವ್ಯವಸಾಯ ಪದ್ಧತಿಗಳು ಮುಂತಾದುವುಗಳನ್ನೂ ವಿವಿಧ ಭಾಗಗಳಲ್ಲಿ ರೈತರು ನಡಿಸುತ್ತಿರುವ ಹೋರಾಟಗಳನ್ನೂ ತಿಳಿದುಕೊಂಡು ಈ ಚಳುವಳಿಗೆ ಕೇಂದ್ರೀಕೃತ ನಾಯಕತ್ವ ಕೊಡುವುದು ಬಹಳ ಅವಶ್ಯವಾಗಿದೆ.

ವಿವಿಧ ಪ್ರದೇಶಗಳ ಪರಿಸ್ಥಿತಿ ಭಿನ್ನವಾಗಿದ್ದರೂ ರೈತರ ಮುಂದಿರುವ ಮೂಲ ಸಮಸ್ಯೆ ಎಲ್ಲ ಕಡೆಗಳಲ್ಲೂ ಒಂದೇ ಆಗಿದೆ. ಭೂ ಮಾಲಿಕರ ದಬ್ಬಾಳಿಕೆ, ಅಧಿಕ ಪ್ರಮಾಣದ ಗೇಣಿ, ತೆರಿಗೆಗಳ ಹೊರೆ ಸಾಲದ ಭಾರ, ಅಧಿಕಾರಿಗಳ ಲಂಚಗೂಳಿತನ ಸಾರ್ವತ್ರಿಕವಾಗಿ ರೈತರನ್ನು ಪೀಡಿಸುತ್ತಿದೆ. ಈ ಶೋಷಣೆಯನ್ನು ಕೊನೆಗಾಣಿಸಿ ಉಳುವವನೇ ಭೂಮಿಯ ಒಡೆಯನಾಗುವಂತೆ ಮಾಡುವುದು ರೈತ ಚಳುವಳಿಯ ಮೂಲ ಗುರಿಯಾಗಿದೆ.

"ರೈತರೇ ದೇಶದ ಬೆನ್ನೆಲುಬು",—"ರೈತರೇ ಭೂಮಿಯ ಒಡೆಯರಾಗಬೇಕು" ಎಂಬ ಘೋಷಣೆಗಳನ್ನು ಆಡಳಿತ ಪಕ್ಷವು ಹೇಳುತ್ತಿದ್ದರೂ ವಾಸ್ತವವಾಗಿ ಸರಕಾರದ ಧೋರಣೆಯಿಂದ ರೈತರ ಪರಿಸ್ಥಿತಿ ದಿನೇ ದಿನೇ ಕೆಡುತ್ತಿರುವುದನ್ನು ನಾವು ನೋಡುತ್ತೇವೆ. ಬಡತನ ದಾರಿದ್ರ್ಯದಲ್ಲಿ ನರಳುತ್ತಿರುವ ರೈತಾಪಿವರ್ಗ ಜಮೀನ್ದಾರರ ಮತ್ತು ಸಾಹುಕಾರರ ಕಪಿಮುಷ್ಟಿಯಲ್ಲಿ ಸಿಲುಕಿಕೊಳ್ಳುತ್ತಿದೆ. ಸರಕಾರದ ಶಾಸನಗಳ ಅನುಕೂಲತೆಗಳೂ ದುಡಿಯುವ ರೈತನಿಗೆ ದೊರೆಯುವುದು ದುರ್ಲಭವಾಗಿದೆ. ಈ ದಲಿತ ರೈತವರ್ಗದ ಸಂಘಟನೆ ಸಮಾಜದ ಅಭಿವೃದ್ಧಿಗೂ, ಪ್ರಜಾಪ್ರಭುತ್ವ ಚಳುವಳಿಗೂ ಅತ್ಯಂತ ಮಹತ್ವದ್ದಾಗಿದೆ.

ಎನ್. ಎಲ್. ಉಪಾಧ್ಯಾಯ

ಈ ಸಮ್ಮೇಳನದ ಮುಂದೆ ಅನೇಕ ಮಹತ್ವದ ಪ್ರಶ್ನೆಗಳಿವೆ. ರಾಜ್ಯದ ಎಲ್ಲ ಭಾಗಗಳಿಗೂ ಅನ್ವಯಿಸುವ ಏಕರೀತಿಯ ಗೇಣಿ ಶಾಸನವನ್ನು ತರಲು ಮೈಸೂರು ಸರಕಾರ ಜತ್ತಿ ಸಮಿತಿಯನ್ನು ರಚಿಸಿ, ಅದರ ವರದಿಯು ಈಗ ಪ್ರಕಟಿಸಲ್ಪಟ್ಟಿದೆ. ಪ್ರಾಂತಾದ್ಯಂತ ಒಂದೇ ರೀತಿಯ ಶಾಸನವಿರಬೇಕೆಂಬುದನ್ನು ಸ್ವಾಗತಿಸುವುದಾದರೂ ಅದು ಯಾವ ರೀತಿಯ ಶಾಸನವಿರಬೇಕೆಂಬುದನ್ನು ಕೂಲಂಕುಷವಾಗಿ ಪರಾಮರ್ಶಿಸುವುದಗತ್ಯ. ಜತ್ತಿ ಸಮಿತಿಯ ವರದಿಯಲ್ಲಿ ಮಾಡಿರುವ ಶಿಫಾರ್ಸುಗಳು ಸಂಘಟಿತ ರೈತರ ತೀವ್ರ ಟೀಕೆಗೆ ಗುರಿಯಾಗಿರುವುದರಲ್ಲಿ ಆಶ್ಚರ್ಯವೇನಿಲ್ಲ. ಕರ್ನಾಟಕ ಪ್ರಾಂತ ರೈತ ಸಂಘಟನಾ ಸಮಿತಿಯು ಇದರ ಬಗ್ಗೆ ರಚನಾತ್ಮಕ ಟೀಕೆ ಮಾಡಿ, ಸೂಕ್ತ ತಿದ್ದುಪಡಿಗಳನ್ನು ಸೂಚಿಸಿರುತ್ತದೆ. ಇತರ ರೈತ ಸಂಘಟನೆಗಳೂ, ರೈತಸಮ್ಮೇಳನಗಳೂ ಈ ವರದಿಯನ್ನು ಚರ್ಚಿಸಿ ಅಭಿಪ್ರಾಯ ವ್ಯಕ್ತಪಡಿಸಿರುತ್ತದೆ. ಗೇಣಿ ಹಕ್ಕಿನ ಭದ್ರತೆ, ಗೇಣಿಯ ಪ್ರಮಾಣ, ಪರಮಾವಧಿ ಹಿಡುವಳಿಯ ಪ್ರಮಾಣ ಮುಂತಾದ ಅಂಶಗಳ ಬಗ್ಗೆ ಜತ್ತಿ ಸಮಿತಿಯ ಶಿಫಾರ್ಸುಗಳು ಅಸಮರ್ಪಕವೂ ನಿರಾಶಾದಾಯಕವೂ ಆಗಿದ್ದು ಹಲವು ರೀತಿಯಲ್ಲಿ ರೈತರಿಗೆ ಹಾನಿಕಾರಕವಾಗಿರುತ್ತದೆ. ಗೇಣಿ ರೈತರಿಗೆ ಶಾಶ್ವತ ಗೇಣಿ ಹಕ್ಕಿರಬೇಕೆಂದೂ, ಗೇಣಿಯ ಪ್ರಮಾಣವು ಉತ್ಪತ್ತಿಯ $\frac{1}{6}$ ನೇ ಭಾಗವಿರಬೇಕೆಂದೂ ಎಲ್ಲ ರಾಜಕೀಯ ಪಕ್ಷಗಳನ್ನೊಳಗೊಂಡ ಯೋಜನಾ ಮಂಡಳಿಯ ಭೂಸುಧಾರಣಾ ಸಮಿತಿಯು ಒಪ್ಪಿಕೊಂಡಿದ್ದರೂ ಜತ್ತಿ ಸಮಿತಿಯು ಅದಕ್ಕೆ ವಿರೋಧವಾಗುವ ಅಭಿಪ್ರಾಯ ವ್ಯಕ್ತಪಡಿಸಿರುತ್ತದೆ. ಪರಮಾವಧಿ ಹಿಡುವಳಿಯ ಬಗ್ಗೆಯೂ ಜತ್ತಿ ಸಮಿತಿಯ ಶಿಫಾರ್ಸು ಸರ್ವಪಕ್ಷ ಭೂಸುಧಾರಣಾ ಸಮಿತಿಯ ಶಿಫಾರ್ಸಿಗೆ ವಿರುದ್ಧವಾಗಿದೆ. ರೈತರಿಗೆ ಜಮೀನು ಕೊಡಿಸುವುದರ ಬದಲು ಜಮೀನ್ದಾರರಿಗೆ ಜಮೀನು ಪಡೆಯಲು ಹೆಚ್ಚಿನವಕಾಶ ಜತ್ತಿ ಸಮಿತಿಯ ವರದಿಯಲ್ಲಿದೆ. ಪರಮಾವಧಿ ಹಿಡುವಳಿ ಆದಾಯದ ಆಧಾರದ ಮೇಲಿರಬೇಕೇ ಅಥವಾ ವಿಸ್ತೀರ್ಣದ ಆಧಾರದ ಮೇಲಿರಬೇಕೇ ಎಂಬುದನ್ನು ಸಮ್ಮೇಳನವು ಚರ್ಚಿಸಿ, ಈ ಎಲ್ಲಾ ವಿಷಯಗಳ ಬಗ್ಗೆಯೂ ರೈತರ ಹಿತವನ್ನು ಗಮನಿಸಿ ತೀರ್ಮಾನಿಸಬೇಕಾಗಿದೆ. ಪರಮಾವಧಿ ಮಿತಿಯನ್ನು ನಿರ್ಧರಿಸುವ ಉದ್ದಿಶ್ಯ ಆದಷ್ಟು ಹೆಚ್ಚು ಜಮೀನು ರೈತರಿಗೆ ಹಂಚಲು ದೊರೆಯಬೇಕೆಂಬುದಾಗಿರುತ್ತದೆ. ಈ ಮೂಲಭೂತ ವಿಚಾರವನ್ನು ಗಮನದಲ್ಲಿಡುವುದು ಅಗತ್ಯ.

ಜಮೀನ್ದಾರರು ಈಗಾಗಲೇ ಜತ್ತಿ ಸಮಿತಿಯ ಕೆಲವು ಶಿಫಾರ್ಸುಗಳ ವಿರುದ್ಧ ಬಿರುಸಾದ ಪ್ರಚಾರ ನಡೆಸಿದ್ದಾರೆ. ಸರಕಾರ ತರಲಿರುವ ಶಾಸನವು ಈ ವರದಿಗಿಂತಲೂ ಪ್ರತಿಗಾಮಿಯಾಗಿ ಭೂಮಾಲಿಕರ ಪರವಾಗಿರಬೇಕೆಂದು ಅವರು ಒತ್ತಾಯ ತರುತ್ತಿದ್ದಾರೆ. ಯಾವುದೇ ರೀತಿಯ ಸುಧಾರಣೆಗೂ ಜಮೀನ್ದಾರರು ಪ್ರತಿಭಟನೆ ಸೂಚಿಸುವುದು ವಾಡಿಕೆಯಾಗಿದೆ. ಯಾವ ಸಣ್ಣ ಸುಧಾರಣೆಯಾದರೂ ಅದನ್ನು ತೀವ್ರ ವಿರೋಧಿಸಿ ತಮಗನುಕೂಲವಾದ ರೀತಿಯಲ್ಲಿ ಶಾಸನದಲ್ಲಿ ತಿದ್ದುಪಡಿಗಳನ್ನು ತರಲು ಜಮೀನ್ದಾರರು ಹಿಂದೆ ಸಹ ಪ್ರಯತ್ನಿಸಿದ್ದಾರೆ; ಈಗಲೂ ಮಾಡುತ್ತಿದ್ದಾರೆ. ಅವರು ವಿರೋಧಿಸುತ್ತಿದ್ದರೆಂದುದರಿಂದಲೇ ಈ ವರದಿಯು ರೈತರ ಬೇಡಿಕೆಯನ್ನೀಡೇರಿಸುವದೆಂದು ಭಾವಿಸುವುದು ತಪ್ಪಾದೀತು. ಸರಕಾರ ತರಲಿರುವ ಶಾಸನವು ರೈತರ ನ್ಯಾಯವಾದ ಬೇಡಿಕೆಗಳನ್ನೊಳಗೊಂಡಿರಬೇಕೆಂದು ಸಮ್ಮೇಳನವು ಒತ್ತಾಯ ಪಡಿಸಬೇಕಾಗಿದೆ.

ಇದಲ್ಲದೆ ರೈತರ ಮುಂದೆ ಇತರ ಸಮಸ್ಯೆಗಳೂ ಇವೆ. ದೇಶದಲ್ಲಿ ಆಹಾರದಭಾವ ತೀವ್ರವಾಗಿದೆ. ಹೆಚ್ಚು ಆಹಾರ ಬೆಳೆಸಿರೆಂದು ಸರಕಾರ ಹೇಳುತ್ತಿದ್ದರೂ ಉತ್ಪಾದನೆ ಸಾಕಷ್ಟಾಗುತ್ತಿಲ್ಲ. ಅದಕ್ಕೆ ಬೇಕಾದ ಪ್ರೋತ್ಸಾಹವಾಗಲಿ, ಅನುಕೂಲತೆಗಳಾಗಲಿ ರೈತರಿಗೆ ಸಿಗುತ್ತಿಲ್ಲ. ಪ್ರಾಂತದ ಹಲವು ಭಾಗಗಳಲ್ಲಿ ಆಹಾರ ಅಭಾವ ಪರಿಸ್ಥಿತಿ ಇದೆ. ಬೆಲೆಗಳ ಏರಿಕೆಯಿಂದ ಹೆಚ್ಚಿನ ರೈತರಿಗೂ ತೊಂದರೆಯಾಗಿದೆ. ರೈತರಿಗೆ ಬೇಕಾದ ವಸ್ತುಗಳು ಕಡಿಮೆ ಬೆಲೆಗೆ ರೈತರಿಗೆ ಸಿಗುವಂತೆ ಸರಕಾರ ಮಾಡಿ ಹೆಚ್ಚು ಉತ್ಪಾದನೆಗೆ ಅವಕಾಶ ಕಲ್ಪಿಸಿಕೊಡಬೇಕಾಗಿದೆ. ಧಾನ್ಯಗಳ ಬೆಲೆಯನ್ನೂ ನಿಗದಿ ಮಾಡಿ ಎಲ್ಲರಿಗೂ ನ್ಯಾಯ ದೊರಕುವಂತಾಗಬೇಕಾಗಿದೆ.

ಈಗ ಸರಕಾರ ಕೊಡುವ ಸಾಲ ಮತ್ತಿತರ ಸವಲತ್ತುಗಳು ಕೆಲವೇ ಶ್ರೀಮಂತರ ಕೈಗೆ ಹೋಗುತ್ತಿದೆ. ಇದು ರೈತರಿಗೆ ಸಿಗುವಂತಾಗಬೇಕು. ಬಹುಭಾಗ ರೈತರು ಸಾಲದಲ್ಲಿ ಮುಳುಗಿದ್ದಾರೆ. ಲಕ್ಷಾಂತರ ರೈತರು ಸಾಹುಕಾರರಿಂದ ಪಡೆದ ಸಾಲವನ್ನು ತೀರಿಸಲು ಸಾಧ್ಯವಾಗದೆ ತಮ್ಮ ಆಸ್ತಿಯನ್ನೆಲ್ಲ ಕಳಕೊಂಡು ನಿರ್ಗತಿಕರಾಗುತ್ತಿದ್ದಾರೆ. ಸಾಲ ಪರಿಹಾರದ ಬಗ್ಗೆಯೂ, ಸುಲಭ ದರದಲ್ಲಿ ದುಡಿಯುವ ರೈತನಿಗೆ ಸಾಲ ದೊರೆಯುವಂತೆಯೂ ಸರಕಾರ ಕ್ರಮ ತೆಗೆದುಕೊಳ್ಳುವಂತೆ ಒತ್ತಾಯ ಪಡಿಸಬೇಕಾಗಿದೆ.

ಸಮಾಜ ವಿಕಾಸ ಯೋಜನೆ, ರಾಷ್ಟ್ರೀಯ ವಿಸ್ತರಣ ಯೋಜನೆ ಮತ್ತಿತರ ಪಂಚವಾರ್ಷಿಕ ಯೋಜನೆಗೆ ಸಂಬಂಧಿಸಿದ ಯೋಜನೆಗಳಲ್ಲಿ ಮಿತಿಮೀರಿ ಹಣ ಪೋಲಾಗುತ್ತಿದ್ದು ರೈತರಿಗೆ ಅದರ ಲಾಭ ದೊರೆಯುತ್ತಿಲ್ಲ. ಈ ಸವಲತ್ತುಗಳು ರೈತರಿಗೆ ಸಿಗುವಂತಾಗಬೇಕಾಗಿದೆ.

ನಮ್ಮ ರಾಜ್ಯದಲ್ಲಿ ಲಕ್ಷಾಂತರ ಎಕರೆ ಜಮೀನು ಬಂಜರು ಬಿದ್ದಿದೆ. ಈ ಜಮೀನನ್ನು ಸರಕಾರವು ಕೂಡಲೇ ಜಮೀನಿಲ್ಲದ ರೈತರಿಗೂ, ಬಡ ರೈತರಿಗೂ ಹಂಚುವಂತೆ ಒತ್ತಾಯ ತರುವುದಗತ್ಯ.

ಇದರ ಜತೆಗೆ ಸರಕಾರ ಮೇಲಿಂದ ಮೇಲೆ ಹೊಸ ತೆರಿಗೆಗಳನ್ನು ರೈತರ ಮತ್ತು ಜನತೆಯ ಮೇಲೆ ಹೇರುತ್ತಿದೆ. ಈ ತೆರಿಗೆಗಳು ಹೆಚ್ಚಾಗಿ ಬಡವರ ಮೇಲೆಯೇ ಬೀಳುತ್ತಿದ್ದು ಅವರ ಜೀವನಮಟ್ಟ ದಿನೇದಿನೇ ಇಳಿಯುತ್ತಿದೆ. ಇದನ್ನು ಪ್ರತಿಭಟಿಸುವುದು ರೈತರ ಕರ್ತವ್ಯವಾಗಿದೆ.

ಗೇಣಿ ಶಾಸನವನ್ನು ಜಾರಿಗೆ ತರುವುದರಲ್ಲೂ ಇನ್ನಿತರ ವಿಷಯಗಳಲ್ಲೂ ಸರಕಾರ ಲಂಚಕೋರ ಅಧಿಕಾರಿಗಳನ್ನೇ ಮತ್ತು ಕಾಂಗ್ರೆಸ್ಸಿಗರನ್ನೇ ಅವಲಂಬಿಸುತ್ತಿದೆ. ಇದನ್ನು ತಡೆಯಲು ಆಡಳಿತದಲ್ಲಿ ಎಲ್ಲ ಪಕ್ಷಗಳ ಮತ್ತು ರೈತ ಪ್ರತಿನಿಧಿಗಳ ಸಹಕಾರ ತೆಗೆದುಕೊಳ್ಳುವಂತೆ ಸಮ್ಮೇಳನವು ಒತ್ತಾಯಪಡಿಸುವುದಗತ್ಯ.

ನಮ್ಮ ನೆರೆ ಪ್ರಾಂತವಾದ ಕೇರಳದಲ್ಲಿ ರೈತರ ಹಿತ ರಕ್ಷಿಸುವ ಸರಕಾರವಿದ್ದು ಅದರ ಪ್ರಭಾವ ನಮ್ಮ ನಾಡಿನ ರೈತರ ಮೇಲೂ ಬಿದ್ದಿದೆ. ಕೇರಳ ಸರ್ಕಾರವನ್ನು ಅಭಿನಂದಿಸುವುದಲ್ಲದೆ ಅದರ ಸಾಧನೆಗಳಿಂದ ಈ ಸಮ್ಮೇಳನದ ತೀರ್ಮಾನಗಳಿಗೆ ತುಂಬಾ ಸಹಾಯಕವಾಗುವುದು ಖಂಡಿತ.

ಇದಲ್ಲದೆ ಸಮ್ಮೇಳನವು ನಮ್ಮ ಪ್ರಾಂತದಲ್ಲಿ ಬಲವಾದ ರೈತಸಂಘಟನೆಯನ್ನು ಕಟ್ಟಲು ಹೆಚ್ಚು ಗಮನ ಕೊಡಬೇಕಾಗಿದೆ. ಈಗ ನಮ್ಮಲ್ಲಿ ಈ ಸಂಘಟನೆಯಿಲ್ಲದಿರುವುದು ತುಂಬಾ ಶೋಚನೀಯವಾಗಿದೆ. ಈಗಲೂ ದಕ್ಷಿಣ ಕನ್ನಡ ಜಿಲ್ಲೆ, ಕೊಡಗು, ಕೋಲಾರ, ಗುಲ್ಬರ್ಗ, ಬೆಂಗಳೂರು ತುಮಕೂರು ಮುಂತಾದ ಕಡೆಗಳಲ್ಲಿ ರೈತ ಸಂಘಟನೆಗಳಿವೆ. ಹಾಸನ ಮತ್ತಿತರ ಕಡೆಗಳಲ್ಲಿ ಕೆಲಸ ಆರಂಭವಾಗಿದೆ. ಕಾರವಾರ, ಬೆಳಗಾಂ, ಬಿಜಾಪುರ ಮುಂತಾದ ಜಿಲ್ಲೆಗಳಲ್ಲಿ ಬಲವಾದ ಸಂಘಟನೆಗಳಿಲ್ಲ. ಅನೇಕ ಹೋರಾಟಗಳು ನಡೆದಿವೆ. ಅಲ್ಲಿ

(ಕೊನೇ ಪುಟ ನೋಡಿ)

"ಕಾರ್ಷಿಕ ಉತ್ಪತ್ತಿ ಹೆಚ್ಚಾಗಬೇಕಾದರೆ ಉಳುವವನೇ ಹೊಲದ ಒಡೆಯನಾಗಬೇಕು"

—ಶ್ರೀ ಎಸ್. ಕೆ. ಡೇ.

ಭಾರತದ ಸಮಾಜ ವಿಕಾಸ ಸಚಿವ ಶ್ರೀ ಎಸ್.ಕೆ. ಡೇ, ತಾ|| 5ರಂದು ಬೆಂಗಳೂರಲ್ಲಿ ಪತ್ರಿಕಾ ಸಮ್ಮೇಳನದಲ್ಲಿ ಹೇಳಿದ ಮಾತಿದು! ಅವರಿಗೆ ನಮ್ಮ ಧನ್ಯವಾದಗಳು. "ಒಕ್ಕಲೆಬ್ಬಿಸುವುದು ಮಹಾಪರಾಧ" ಎಂದು ಪ್ರಧಾನಿ ನೆಹರೂರವರು ಹಲವು ಬಾರಿ ಹೇಳಿರುವುದನ್ನೂ ಕೇಳಿದ್ದೇವೆ. "ರಾಜ್ಯ ಸರಕಾರಗಳು ಭೂ ಸುಧಾರಣೆಗೆ ಸಾಕಷ್ಟು ಗಮನ ಕೊಡುತ್ತಿಲ್ಲ"ವೆಂದು ಯೋಜನಾ ಮಂತ್ರಿ ನಂದಾರವರು ಟೀಕಿಸಿರುವುದನ್ನು ಪತ್ರಿಕೆಗಳಲ್ಲಿ ಓದಿದ್ದೇವೆ. "ಆಹಾರ ಧಾನ್ಯಗಳ ಉತ್ಪಾದನೆ ಹೆಚ್ಚಿಸುವುದಕ್ಕೆ ಭೂ ಸುಧಾರಣೆ ಆಗಲೇಬೇಕು" ಎಂದು ಆಹಾರ ಮಂತ್ರಿ ಜೈನ್‌ರವರು ಮತ್ತೆ ಮತ್ತೆ ಹೇಳುತ್ತಿರುವುದನ್ನ ಕೇಳುತ್ತಿದ್ದೇವೆ. ಈಗ ನಮ್ಮ ರಾಜಧಾನಿಯಲ್ಲೆ ಸಮಾಜ ವಿಕಾಸ ಸಚಿವ ಡೇಯವರು ಹೇಳುತ್ತಾರೆ: "ಹೊಲವನ್ನು ಸಾಗುವಳಿ ಮಾಡುವವರ ಹಿತವನ್ನು ರಕ್ಷಿಸುವಂಥ ಪ್ರಗತಿಶೀಲ ಭೂಸುಧಾರಣಾ ಶಾಸನಗಳಾಗದೆ ದೇಶದಲ್ಲಿ ದೊಡ್ಡ ಪ್ರಮಾಣದಲ್ಲಿ ವ್ಯಾವಸಾಯಿಕ ಉತ್ಪಾದನೆ ಸಾಧ್ಯವಾಗಲಾರದು" ಎಂದು.

ಬರೀ ಮಾತು, ಭೂಮಾಲಿಕರ ಮನವೊಲಿಸುವ ಪ್ರಯತ್ನ, ಜಮಿನ್ದಾರರ ಹೃದಯ ಪರಿವರ್ತನೆಗೆ ಉಪದೇಶಗಳ ಸುರಿಮಳೆ—ಇವುಗಳ ಜೊತೆಯಲ್ಲೆ ಒಕ್ಕಲೆಬ್ಬಿಸುವುದಕ್ಕೆ ಧಾರಾಳ ಅವಕಾಶ, ಒಕ್ಕಲುತನ ಕಾಯಿದೆಗಳ ಸಮಾಕರಣದ ಹೆಸರಲ್ಲಿ ಗೇಣಿಯ ಪರಮಾವಧಿ ಪರಿಮಿತಿಯನ್ನು $\frac{1}{6}$ ರಿಂದ $\frac{1}{4}$ ಮತ್ತು $\frac{1}{5}$ಕ್ಕೆ ಏರಿಸುವ ಯೋಜನೆ, ಉಳುವವರಿಗೆ ಹೊಲದ ಒಡೆತನ ಕೊಡಿಸುವುದರ ಬದಲು ಸಾಗುವಳಿದಾರರಲ್ಲದ — ಮುಂದಕ್ಕೂ ಸಾಗುವಳಿದಾರರಲ್ಲದೆ ಉಳಿಯಬಲ್ಲ—ಭೂಮಾಲಿಕರನ್ನೇ "ಸ್ವಂತ ಸಾಗುವಳಿದಾರರು" ಎಂದು ಮುದ್ರೆಯೊತ್ತುವ ಪಿತೂರಿ ಇದೆಲ್ಲ ನಡೆಯುತ್ತಿರುವುದನ್ನು ಕೇಂದ್ರ ಸರಕಾರ ಏಕೆ ತಡೆಯುವುದಿಲ್ಲ? ಅಗತಕ್ಕ ಪ್ರಗತಿಶೀಲ ಶಾಸನವನ್ನು ಕೂಡಲೆ ಮಾಡುವಂತೆ ಏಕೆ ಕಡ್ಡಾಯ ಕ್ರಮ ವಹಿಸುವುದಿಲ್ಲ?

ಶ್ರೀ ಎಸ್ ಕೆ. ಡೇಯವರು ಮಾತಿನಲ್ಲಿ ಸಂಶಯಕ್ಕೇನೂ ಎಡೆ ಕೊಟ್ಟಿಲ್ಲ. "ಪ್ರಗತಿಶೀಲ ಶಾಸನ" ಎಂದರೆ ಏನೆಂದು ಸ್ಪಷ್ಟೀಕರಿಸಲು ಪತ್ರಿಕಾ ಪ್ರತಿನಿಧಿಗಳು ಕೇಳಿಕೊಂಡಾಗ ಶ್ರೀ ಡೇಯವರು ಉತ್ತರಿಸಿದರು: "ಉಳುವವನಿಗೆ ಹೊಲ; ಅಥವ ನಡುಗಾಲದ ಒಂದು ಹೆಜ್ಜೆಯಾಗಿ, ಉತ್ಪತ್ತಿಯಲ್ಲಿ ನ್ಯಾಯವಾದ ಭಾಗ ದೊರಕಿಸುವುದು. ಹೊಲವು ಉಳುವವನದಾಗಬೇಕು; ಮಧ್ಯವರ್ತಿಯೊಬ್ಬನಿರುವುದು ಮಹಾ ಪಾತಕ." ಮೈಸೂರಿನ ಮಂತ್ರಿಗಳೂ ಭೂಸುಧಾರಣೆಯನ್ನು ವಿರೋಧಿಸುವವರೂ ಈ ಮಾತುಗಳನ್ನು ಕಿವಿಗೊಟ್ಟು ಕೇಳಲಿ.

ಸಚಿವರು ಮುಂದುವರಿಸುತ್ತ, "ಈ ಕ್ಷೇತ್ರದಲ್ಲಿ ಕಾರ್ಯಸಾಧನೆಯನ್ನು ಪಾಳೆಯಗಾರ—ಬಂಡವಾಳಗಾರ - ಜಾತೀಯವಾದಿ ಬಣಗಳು ತಡೆಯುತ್ತಿವೆ. ನಾಳೆಯ ಮತ್ತು ನಿನ್ನೆಯ ಶಕ್ತಿಗಳ ಪರಸ್ಪರ ಬಲಾಬಲತೆಯ ಪ್ರಶ್ನೆಯಿದಾಗಿದೆ" ಎಂದರು. ಕೇರಳ ಸರಕಾರವೊಂದನ್ನು ಬಿಟ್ಟು ಮತ್ತೆಲ್ಲ ರಾಜ್ಯಸರಕಾರಗಳೂ ಕೇಂದ್ರ ಸರಕಾರವೂ ಈ ಪಾಳೆಯಗಾರ - ಬಂಡವಾಳಗಾರ - ಜಾತೀಯವಾದಿ ಬಣಗಳ, ಈ ಕಾಲಕಳೆದ ನಿನ್ನೆಯ ಶಕ್ತಿಗಳ, ಪ್ರಭಾವಕ್ಕೆ ಒಳಪಟ್ಟಿರುವುದರಿಂದಲೆ ಭೂಸುಧಾರಣೆ ಆಗಬೇಕೆನ್ನುವವರೇ ಅದನ್ನು ಮಾಡದಿರುವುದಕ್ಕೆ ಕಾರಣವೆಂದು ಇಷ್ಟರಲ್ಲೇ ಸ್ಪಷ್ಟವಾಗಿದೆ.

ದೇಶ-ವಿದೇಶ ಸುದ್ಧಿ - ಸಮಾಚಾರಗಳು

ಭಾರತಕ್ಕೆ ರೂಪಾಯಿ 60 ಕೋಟಿ ರಷ್ಯನ್ ಸಹಾಯ

ಭಾರತದಲ್ಲಿ ಕೈಗಾರಿಕೋದ್ಯಮಗಳನ್ನು ಸ್ಥಾಪಿಸಲು 50 ಕೋಟಿ ರೂಪಾಯಿ ಸಹಾಯ ಮಾಡಲು ರಷ್ಯಾ ಮುಂಬಂದಿದೆ. ತಾನೀಯುವ ಸಾಲದ ಹಿಂದೆ ಏನೊಂದೂ ಒತ್ತಾಯ ಹಾಗೂ ಒತ್ತಡ ಹಾಕಲು ರಷ್ಯ ಯತ್ನಿಸಲಿಲ್ಲ.

ನವೆಂಬರ್ ಒಂಭತ್ತರಂದು ಭಾರತ—ರಷ್ಯಾಗಳೊಳಗೆ ಈ ಬಗ್ಗೆ ಒಪ್ಪಂದವಾಗಿದೆ. ಎಲ್ಲಾ ಯಂತ್ರ ಸಲಕರಣೆಗಳು ರಷ್ಯಾದಿಂದ ಬಂದು ಇಲ್ಲಿ ಮುಟ್ಟಿದ ತರುವಾಯದಿಂದ ಆರಂಭವಾಗಿ 12 ವರುಷಗಳ ಅವಧಿಯಲ್ಲಿ ಸಾಲವನ್ನು ವರ್ಷಕ್ಕೆ ಶೇ. $2\frac{1}{2}$ ಸಹಿತ ಬಡ್ಡಿ ಸಲ್ಲಿಸಬೇಕಾಗುವುದು.

ಈ ಹಣಸಹಾಯವನ್ನು ಕಲ್ಲಿದ್ದಲು ಉದ್ಯಮ, ಭಾರೀ ಮೆಶೀನು ನಿರ್ಮಾಣ ಕ್ಷೇತ್ರಗಳಲ್ಲೂ, ಭೂತ ಕನ್ನಡಿ ನಿರ್ಮಾಣ ಕಾರ್ಖಾನೆ, ಮತ್ತು ಥರ್ಮಲ್ ಪವರ್ ಸ್ಟೇಷನ್ ಸ್ಥಾಪನೆಯಲ್ಲಿ ವ್ಯಯಿಸಲಾಗುವುದು. ಈ ಉದ್ಯಮದ ಬಗ್ಗೆ ವಿಶದವಾ ಯೋಜನೆಯ ವರದಿ ಹಾಗೂ ಸೋವಿಯತ್ ಯಂತ್ರತಜ್ಞರ ಬಗ್ಗೆ ಸಂಪೂರ್ಣ ತಿಳುವಳಿಕೆಯನ್ನು ಸೋವಿಯತ್ ರಷ್ಯಾ ಸಧ್ಯದಲ್ಲೇ ನೀಡುವುದೆಂದು ತಿಳಿಯಲಾಗಿದೆ.

ರಷ್ಯಾವನ್ನು ಬೈದು ಅಮೆರಿಕಾದಲ್ಲಿ ಭಿಕ್ಷೆ ಎತ್ತಿದರೂ ಟಿ.ಟಿ.ಕೆ.ಗೆ ಒಂದು ಚಿಕ್ಕಾಸೂ ದೊರೆಯಲಿಲ್ಲ. ಈಗ ಅದೇ ಟಿ.ಟಿ.ಕೆ.ಗೆ ಬೇಡವಾದ ರಷ್ಯಾ ನಮಗೆ ಸಹಾಯ ಮಾಡಲು ಮುಂದೆ ಬಂದಿದೆ.

ಲಕ್ನೋದ 500 ಪೋಲೀಸರ ಅನ್ನ ಸತ್ಯಾಗ್ರಹ !

ಲಖ್ನೋದ 500 ಪೋಲೀಸರು ಏಕಾಏಕಿ ಅನ್ನ ಸತ್ಯಾಗ್ರಹ ಹೂಡಿ, ಉಪವಾಸ ವ್ರತದ ಚರಿತ್ರೆಯಲ್ಲೇ ಕ್ರಾಂತಿ ವೆಸಗಿದ್ದಾರಲ್ಲಾ! ನಮ್ಮ ಪ್ರಬಲ ರಕ್ಷಣಾಂಗವಾದ, ಪ್ರತಿಪಕ್ಷಗಳು ಅನ್ನ ಸತ್ಯಾಗ್ರಹ–ಮುಷ್ಕರಗಳನ್ನು ಮಾಡುವಾಗ ಮುರಿಯಲು ಉಪಯೋಗಿಸುವ ಈ ಶಾಖೆಯೇ ಪ್ರತಿಪಕ್ಷದ ನಿದರ್ಶನವನ್ನು ಒಪ್ಪಿಕೊಂಡಂತಿದೆಯಲ್ಲಾ! ಅಥವಾ ನಮ್ಮ ಕಾಂಗ್ರೆಸ್ಸಿನ ಪಿತ ಗಾಂಧೀಜಿಯ ಉದಾಹರಣೆಯನ್ನು ನಾವು ಕೈಬಿಟ್ಟರೂ ಈ ಪೋಲೀಸರು ಒತ್ತಿಕೊಂಡಿರುವರೇ! ಹೀಗಿದ್ದರೆ ಗಾಂಧೀಜಿಯ ತತ್ವಗಳಿಗೆ ತಿಲಾಂಜಲಿಯಿತ್ತ ನಮಗೇ ಸಂಚಿಕಾರವೆಂದು ಯು. ಪಿ. ಯ ಕಾಂಗ್ರೆಸ್ ಸಂಕಾರ ಗಾಬರಿಗೊಂಡಿದೆ; ಅದರಲ್ಲೂ ಮುಖ್ಯವಾಗಿ ಯು. ಪಿ.ಯನ್ನು ಪೋಲೀಸು ರಾಜ್ಯವನ್ನಾಗಿ ಮಾರ್ಪಡಿಸಿ ಹೆಸರುಗಳಿಸಿದ ಮುಖ್ಯಮಂತ್ರಿ ಸಂಪೂರ್ಣಾನಂದರ ಆನಂದವೇ ಮಾಯವಾಗಿದೆಯೆಂದು ವದಂತಿ.

ಆದೂ ಯು. ಪಿ.ಯಲ್ಲಿ ಅನ್ನವಿಲ್ಲದೆ ಕ್ಷಾಮ ಪರಿಸ್ಥಿಯಿದ್ದು, ವಿರೋಧ ಪಕ್ಷಗಳ ನೇತೃತ್ವದಲ್ಲಿ ಹಸಿದ ಜನತೆ ಹೋರಾಟ ನಡೆಸುತ್ತಿರುವ ಸಂದರ್ಭದಲ್ಲಿ, ಅವರನ್ನು ಬಗ್ಗುಬಡೆಯಲು ಸಂಪೂರ್ಣಾನಂದರಿಗೆ ಪೋಲೀಸರ ಅತೀವ ಆವಶ್ಯಕತೆಯಿರುವ ಈ ಘಟ್ಟದಲ್ಲಿ ಪೋಲೀಸರೇ ಅನ್ನ ಸತ್ಯಾಗ್ರಹ ಹೂಡಿದರೆ ಹೇಗೆ?

ಪೋಲೀಸರಿಗೆ ತಗಲಿದ ಈ ಅಂಟುಜಾಡ್ಯವನ್ನು ಹೀಗೆಯೇ ಬಿಟ್ಟರೆ ಅದು ಸೇನೆಗೂ ಪಸರಬಹುದೇ? ಹಾಗೊಂದು ವೇಳೆ ಅದಲ್ಲಿ ಪೋಲೀಸರು ಚಳುವಳಿ ಹೂಡಿದರೆ ಅದನ್ನು ಮುರಿಯಲು ಯಾವೊಂದು ಸಾಧನವೇ ಇಲ್ಲದಂತಾಗುವುದೆಂಬ ಯೋಚನೆ ಹೈಕಮಾಂಡ್ ತಲೆ ಕಿತ್ತು ತಿನ್ನಹತ್ತಿದೆಯಂತೆ. ಆದರೆ ಚಳವಳಿ ಮುರಿಯುವುದರಲ್ಲಿ ಎತ್ತಿದ ಕೈ, ಅದಕ್ಕಾಗೇ ಹೋಂಗಾರ್ಡ್ಸ್ ಮತ್ತಿತರ "ಸ್ವಯಂಸೇವಕ"ರನ್ನು ಸಂಘಟಿಸಿದ ಕೀರ್ತಿಶಾಲಿ ಎಸ್. ಕೆ. ಪಾಟೀಲರು, ಸಂಪೂರ್ಣಾನಂದರಿಗೆ ಧೈರ್ಯ ಇತ್ತಿದ್ದಾರೆಂಬುದನ್ನು ನಾವು ಸಾಮಾನ್ಯವಾಗಿ ಗ್ರಹಿಸಬಹುದಷ್ಟೆ!

ಪೋಲೀಸರ ಅನ್ನ ಸತ್ಯಾಗ್ರಹದ ಕಾರಣವಿಷ್ಟೆ. ಅಧಿಕಾರ ಮದಾಂಧ ಪೋಲೀಸು ಉನ್ನತಾಧಿಕಾರಿಗಳು ಪೋಲೀಸರನ್ನು ನಾಯಿಗಿಂತಲೂ ಕಡೆಯೆಣಿಸಿ, ಬಡಿದು, ಒದೆದು ನಡೆಸಿಕೊಂಡು ಬರುವುದು ಬ್ರಿಟಿಷರು ನೆಹ್ರೂ ಸರಕಾರಕ್ಕೆ ಪಿತ್ರಾರ್ಜಿವಾಗಿ ಬಿಟ್ಟುಹೋದ ವ್ಯವಸ್ಥೆ. ಬ್ರಿಟಿಷರು ಬಿಟ್ಟು, ಹೋದರೂ, ಬಿಳಿ ಟೋಪಿಯವರು ರಾಜ್ಯವಾಳುವವರೆಗೆ ಏನೊಂದು ಬದಲಾವಣೆ ಕಾಣದ ಪೋಲೀಸು ಅಧಿಕಾರಿಗಳು ಪೋಲೀಸರನ್ನು ಮೃಗದಂತೆ ನೋಡುತ್ತಿದ್ದುದರ ವಿರುದ್ಧ, ಈ ಪೋಲೀಸರು ಸಂಘ ಸ್ಥಾಪಿಸಿದರು. ಅದನ್ನು ಮೆಚ್ಚದ ಅಧಿಕಾರಿಗಳು ಮತ್ತೆ ಅಧಿಕಾರ ದರ್ಪ ತೋರಿದ್ದನ್ನು ಪ್ರತಿಭಟಿಸಿ ಈ ಅನ್ನ ಸತ್ಯಾಗ್ರಹನ್ನು ನಡೆಸಲಾಗಿದೆ. ಮುಂದೇನು?

'ಭಿಲಾಯಿ'ಗೆ ಹೊಸ ಟರ್ಬೈನ್‌ಗಳು

ಭಿಲಾಯಿಯ ಉಕ್ಕಿನ ಕಾರ್ಖಾನೆಯ ಸಲುವಾಗಿ ಮೂರು ಆಧುನಿಕ ಆವಿಯ ತಿರುಗಣೆ ಯಂತ್ರಗಳನ್ನು ನೇವಾ ಯಂತ್ರಶಿಲ್ಪದ ಕಾರ್ಖಾನೆಯು ಮುಗಿಸಿದೆ. ಊದು ಕುಲುಮೆಗಳಿಗೆ ಪ್ರತಿ ನಿಮಿಷವೂ 3,250 ಘನ ಮೀಟರುಗಳಷ್ಟು ಆವಿಯನ್ನು ತುಂಬಿಸುವ 'ಸೆಂಟ್ರಿ ಫ್ಯೂಗಲ್' ಒತ್ತಡ ಯಂತ್ರಗಳನ್ನು ಈ ಯಂತ್ರಗಳು ನಡೆಸುವುವು.

ಸೋವಿಯತ್ ಎಂಜಿನಿಯರರು ಭಾರತ ದೇಶದ ಸಲುವಾಗಿ ಹೊಸ ಮಾದರಿಯ 12,000 ಕಿಲೋವಾಟುಗಳ ಆವಿಯ ತಿರುಗಣೆ ಯಂತ್ರವನ್ನು ರಚಿಸಿದ್ದಾರೆ. ಕೇಂದ್ರ ಭಾಗದ ಅತ್ಯುತ್ತಮ ವಾಯುಗತಿ ಗುಣಗಳು ಈ ಯಂತ್ರಗಳ ಕಾರ್ಯ ಸಮರ್ಥತೆಯನ್ನು-ಈ ಮೊದಲು ತಯಾರಿಸಲಾಗುತ್ತಿದ್ದ ನಮೂನೆಗಳೊಂದಿಗೆ ಹೋಲಿಸಿ ನೋಡಿದಲ್ಲಿ — ಶೇಕಡ 2.6 ರಷ್ಟು ವೃದ್ಧಿಗೊಳಿಸಿವೆ. ಈ ಹೊಸ ಯಂತ್ರವು ಹಿಂದಿನವುಗಳಿಗಿಂತಲೂ ಹಗುರವಾಗಿದು ಮತ್ತು ಗಾತ್ರದಲ್ಲಿ ಶೇಕಡ 15 ಪಾಲು ಚಿಕ್ಕದಾಗಿಯೂ ಇದೆ.

ರಷ್ಯಾದ ರಕ್ಷಣಾ ಸಚಿವರಾಗಿ ಮಾರ್ಷಲ್ ಮಾಲಿನೋವ್‌ಸ್ಕಿರವರ ನೇಮಕ

ಸೋವಿಯತ್ ಒಕ್ಕೂಟದ ಸರ್ವೋಚ್ಛ ಸೋವಿಯತ್ತಿನ ಅಧ್ಯಕ್ಷ ಮಂಡಲವು ಮಾರ್ಷಲ್ ಮಾಲಿನೋವ್‌ಸ್ಕಿಯವರನ್ನು ಸೋವಿಯತ್ ಒಕ್ಕೂಟದ ರಕ್ಷಣಾಶಾಖಾ ಸಚಿವರಾಗಿ ನೇಮಕ ಮಾಡಿದೆ.

ಸೋವಿಯತ್ ಒಕ್ಕೂಟದ ಸರ್ವೋಚ್ಛ ಸೋವಿಯತ್‌ನ ಅಧ್ಯಕ್ಷ ಮಂಡಲವು ಸೋವಿಯತ್ ಒಕ್ಕೂಟದ ಮಾರ್ಷಲ್ ಜುಕೋವ್‌ರವರನ್ನು ಸೋವಿಯತ್ ಒಕ್ಕೂಟದ ರಕ್ಷಣಾ ಶಾಖಾ ಸಚಿವ ಸ್ಥಾನದ ಅವರ ಕರ್ತವ್ಯಗಳಿಂದ ಬಿಡುಗಡೆಮಾಡಿದೆ.

ಭಾರತದ ನಟರ ದೃಷ್ಟಿಯಲ್ಲಿ ರಷ್ಯ

ಸೊವಿಯತ್ ಒಕ್ಕೂಟದಲ್ಲಿ ರಷ್ಯಾ-ಭಾರತ ಸಂಯುಕ್ತ ಚಿತ್ರ ನಿರ್ಮಾಣವಾದ "ಪರದೇಸಿ" (ಅಫನಾಸಿ ನಿಕೇತಿನ್)ನಲ್ಲಿ ತಮ್ಮ ಪಾತ್ರಗಳ ಪೂರೈಕೆಗೆ ತೆರಳಿದ್ದ ಹಿಂದಿ ನಟರಾದ ಪೃಥ್ವಿರಾಜ್ ಶ್ರೀಮತಿ ನರ್ಗಿಸ್ ಮತ್ತು ಡೇವಿಡ್‌ರವರು ಸೋವಿಯತ್ ಯೂನಿಯನ್‌ನ ಬಗ್ಗೆ ಅವರು ತಳೆದ ಅಭಿಪ್ರಾಯಗಳನ್ನು ಇಲ್ಲಿ ಕೊಡಲಾಗಿದೆ.

ಪೃಥ್ವಿರಾಜ್ "ತಮ್ಮ ನಾಡನ್ನು ಅವರು ಕಟ್ಟುತ್ತಿರುವ ರೀತಿ ನೋಡಿದರೆ, ಸೋವಿಯತ್ ಜನತೆಗೆ ಮಹತ್ತಾರವಾದ ಭವಿಷ್ಯತ್ತು ಇದೆಯೆಂದು ನಾನು ಹೇಳಬಲ್ಲೆ."

ಶ್ರೀಮತಿ ನರ್ಗಿಸ್: "ಸೋವಿಯತ್ ಮಹಿಳೆಯರಿಗೆ ನಾನು ಗೌರವವನ್ನು ಸಲ್ಲಿಸಬಯಸುತ್ತೇನೆ. ಅವರು ತುಂಬಾ ಪ್ರಗತಿಶೀಲರು,ಮತ್ತು ಮುಂದುವರಿದಿದ್ದಾರೆ. ಜೀವನದ ಸಂಸುಮಾರು ಎಲ್ಲ ಕ್ಷೇತ್ರಗಳಲ್ಲಿಯೂ ಅವರು ಪುರುಷರಿಗೆ ಸಂಗಾತಿಗಳಾಗಿದ್ದಾರೆಂಬುದನ್ನು ನಾನು ಕಾಣುತ್ತಿದ್ದೇನೆ."

ಡೇವಿಡ್: "ಸೋವಿಯತ್ ರಷ್ಯದಲ್ಲಿ ನನ್ನ ಕಣ್ಣಿಗೆ ಬೀಳದಿದ್ದುದೆಂದರೆ ಎರಡು ವಿಷಯ. ಇಲ್ಲಿ ನಾನೆಷ್ಟು ಹುಡುಕಿದರೂ ನನಗೆ "ಕಬ್ಬಿಣದ ಪರದೆ" ಕಾಣಿಸಲಿಲ್ಲ. ನಿಸ್ಸಂದೇಹವಾಗಿಯೂ ನೀವು ಸ್ಥಾಪಿಸಿಕೊಂಡಿರುವ ಮಹಾತ್ಸಾಧನೆಗಳ ಬಗ್ಗೆ ಜಂಬ ಕೊಚ್ಚಿಕೊಳ್ಳುವಂತಹ ಒಬ್ಬ ಪುರುಷನನ್ನಾಗಲೀ ಅಥವಾ ಸ್ತ್ರೀಯನ್ನಾಗಲೀ ನಾನು ನೋಡಲಿಲ್ಲ."

ಯುಗೋಸ್ಲಾವಿಯಾದಲ್ಲಿ ಲೆನಿನ್ ಸ್ಮಾರಕ

ಮಹಾ ಅಕ್ಟೋಬರ್ ಸಮಾಜವಾದೀ ಕ್ರಾಂತಿಯ ನಲವತ್ತನೆಯ ವಾರ್ಷಿಕೋತ್ಸವವನ್ನು ನಡೆಸುವ ಬೆಲ್‌ಗ್ರೇಡ್ ಜನತಾ ಸಮಿತಿಯ ಸಭೆಯು ಯುಗೋಸ್ಲಾವಿ

(ಅನೇ ಪುಟ ನೋಡಿ)

ಅಖಿಲ ಭಾರತ ಕಿಸಾನ್ ಸಭೆಯ ಅಧಿವೇಶನ

ಅಖಿಲಭಾರತ ಕಿಸಾನ್ ಸಭೆಯ 15ನೆಯ ಮಹಾಧಿವೇಶನವು ಪಶ್ಚಿಮ ಬಂಗಾಳದ ಬೋಂಗಾಂನದಲ್ಲಿ-ಕಲ್ಕತ್ತದಿಂದ 48 ಮೈಲು ದೂರ, ಭಾರತ-ಪಾಕಿಸ್ತಾನ ಸರಹದ್ದಿನಲ್ಲಿರುವ ಚಿಕ್ಕ ಪಟ್ಟಣದಲ್ಲಿ—ಜರಗಿತು. ಬೋಂಗಾಂನ್, ಸ್ವಾತಂತ್ರ್ಯ ಹೋರಾಟದ ಹಲವು ಚಾರಿತ್ರಿಕ ಘಟನೆಗಳ ತೊಟ್ಟಿಲು. 1857ರ ಪ್ರಥಮ ಸ್ವಾತಂತ್ರ್ಯ ಕ್ರಾಂತಿಯ ಕೆಂಡವನ್ನು ರಕ್ತದ ಕಾಲುವೆಯಲ್ಲಿ ಅದ್ದಿ ಆರಿಸಿದೆವೆಂಬ ಬ್ರಿಟಿಷ್ ಸಾಮ್ರಾಜ್ಯವಾದಿಗಳು ಎಣಿಸುತ್ತಿದ್ದಂತೆಯೇ, 1959-60ರಲ್ಲಿ, ದೇಶದಲ್ಲೆಲ್ಲ ಸಮರೋತ್ಸಾಹವನ್ನು ತಿರುಗಿ ಹೊಡೆದೆಬ್ಬಿಸಿದ ನೀಲಿ ಬೆಳೆಯುವ ರೈತರ ಪ್ರಚಂಡ ಹೋರಾಟದ ಕೇಂದ್ರವಾಗಿತ್ತು ಬೋಂಗಾಂನ್ ಪ್ರದೇಶ. ಅಂದಿನಿಂದ ಆ ಪ್ರದೇಶ ಸ್ವಾತಂತ್ರ್ಯ ಹೋರಾಟದ ಮುನ್ನಣಿಯಲ್ಲಿ ಉಳಿದು ಬಂದಿದೆ. 1938ರಲ್ಲಿ ಅಲ್ಲಿ ಅಖಿಲಭಾರತ ಕಿಸಾನ ಸಭೆಯ ಶಾಖೆ ಸ್ಥಾಪಿಸಲ್ಪಟ್ಟಿತು. ಕಿಸಾನ ಸಭೆಯು ಜನತೆಯ ಐಕ್ಯತೆಯ ಕೋಟೆಯಾಗಿ ಬೆಳೆಯಿತು. ಅಮಾನುಷ ಅತ್ಯಾಚಾರಗಳಿಗೆ ಕಾರಣವಾಗಿದ್ದ ಜಾತೀಯ ಕಲಹದ ಬೆಂಕಿ ಬೋಂಗಾಂನ್ ಪ್ರದೇಶಕ್ಕೆ ಹರಡದಂತೆ ಕಿಸಾನ ಸಭೆಯು ಯಶಸ್ವಿಯಾಗಿ ತಡೆದುದಲ್ಲದೆ, ಇಂದಿಗೂ ಹಿಂದೂ-ಮುಸ್ಲಿಂ ಐಕ್ಯತೆ, ಪೂರ್ವ ಪಾಕಿಸ್ತಾನದಿಂದ ವಲಸೆಬರುವ ನಿರಾಶ್ರಿತರ ಹಾಗೂ ಪ್ರಾದೇಶೀಕ ಜನರೊಳಗೆ ಪರಸ್ಪರ ಸಹಕಾರ-ಸೌಹಾರ್ದತೆ ಈ ಪ್ರದೇಶದಲ್ಲಿ ಆದರ್ಶಪ್ರಾಯವಾಗಿದೆ. ವಿಶಾಲವಾದ ಭತ್ತದ ಹೊಲಗಳು, ಅಲ್ಲಲ್ಲಿ ಗಿಡ-ಮರಗಳ ತೋಪುಗಳು, ಕಷ್ಟಪಟ್ಟು ದುಡಿಯುವ ರೈತ-ಸ್ತ್ರೀ-ಪುರುಷರು! ಈ ಪ್ರದೇಶದಲ್ಲಿಂದು ಕ್ಷಾಮದ ಲಕ್ಷಣಗಳು ಕಾಣಿಸತೊಡಗಿವೆ. 1943ರ ಭೀಕರ ಬರಗಾಲದ ಕರಿನೆರಳು ಹಾಯಹತ್ತಿದೆ. ಬೋಂಗಾನ್, ಅಕ್ಟೋಬರ 27ರಿಂದಲೇ ಯಾತ್ರಾಸ್ಥಳವಾಗಿ ಮಾರ್ಪಾಟು ಹೊಂದಿತ್ತು. ಪಶ್ಚಿಮ ಬಂಗಾಳ ಕಿಸಾನ ಸಮ್ಮೇಳನ ಆ ದಿನ ಆರಂಭವಾಯಿತು. ಅದರೊಂದಿಗೆನೇ ಕೈಗಾರಿಕೆ, ಕಲೆ, ಸಾಹಿತ್ಯ ಪ್ರದರ್ಶನ ತೆರೆಯಿತು; ಸಾಂಸ್ಕೃತಿಕ ಕಾರ್ಯಕ್ರಮಗಳು ಆರಂಭವಾದುವು. ಪಶ್ಚಿಮ ಬಂಗಾಳದ ನಾನಾ ಭಾಗಗಳಿಂದ ಪ್ರತಿನಿಧಿಗಳು ಸಂದರ್ಶಕರು, ಬಂದು ನೆರೆದಿದ್ದರು.

ಅಖಿಲ ಭಾರತ ಅಧಿವೇಶನವು ತಾ. 1ರಂದು ಬೆಳಿಗ್ಗೆ 9 ಘಂಟೆಗೆ ಧ್ವಜಾರೋಹಣ, ಹುತಾತ್ಮರಿಗೆ ಶ್ರದ್ಧಾಂಜಲಿ ಅರ್ಪಣೆ ಹಾಗೂ ರಾಷ್ಟ್ರಗೀತೆಯೊಡನೆ ಆರಂಭವಾಯಿತು.

ಸ್ವಾಗತ ಭಾಷಣ

ಸ್ವಾಗತ ಸಮಿತಿಯ ಅಧ್ಯಕ್ಷ ಭವಾನಿ ಸೆನ್ ಪ್ರತಿನಿಧಿಗಳನ್ನೂ ಸಂದರ್ಶಕರನ್ನೂ ಸ್ವಾಗತಿಸಿದರು. ಎ. ಕೆ. ಗೋಪಾಲನ್‌ರವರನ್ನು ಮುಂದಿನ ವರ್ಷಕ್ಕೂ ಅ. ಭಾ. ಕಿಸಾನ ಸಭೆಯ ಅಧ್ಯಕ್ಷರನ್ನಾಗಿ ಸರ್ವಾನುಮತದಿಂದ ಆರಿಸಲಾಯಿತು. ಅಧ್ಯಕ್ಷರು ತಮ್ಮ ಆರಂಭ ಭಾಷಣದಲ್ಲಿ, ಭಾರತ-ಪಾಕಿಸ್ತಾನ ಸರಹದ್ದಿನಲ್ಲಿ ಜರಗುವ ಈ ಸಮ್ಮೇಳನವು ಪಾಕಿಸ್ತಾನದ ಜನತೆಗೆ ಸೌಹಾರ್ದತೆಯ ಸಂದೇಶವನ್ನು ನೀಡುವಾಗಲೇ ಪಾಕಿಸ್ತಾನದ ಆಳುವವರ ಸಾಮ್ರಾಜ್ಯವಾದೀ ಪರವಾದ, ರಾಷ್ಟ್ರಘಾತುಕವಾದ ಹಾಗೂ ಭಾರತಕ್ಕೆ ವಿರೋಧವಾದ ನೀತಿಯನ್ನು ಖಂಡಿಸಿದರು. ಕಾಶ್ಮೀರದ ಆಕ್ರಮಣ ಕೊನೆಗಾಣಬೇಕು. ಗೋವ ವಿಮೋಚನೆ ಹೊಂದಬೇಕು. ಈ ಕಾರ್ಯಗಳನ್ನು ಕೈಗೂಡಿಸುವುದಕ್ಕೆ ಭಾರತದ ಜನತೆ ಒಗ್ಗಟ್ಟಾಗಿ, ವಿಶ್ವದ ಶಾಂತಿಪ್ರಿಯ ಪುರೋಗಾಮಿ ಜನತೆಯ ಬೆಂಬಲದಿಂದ ಮುನ್ನಡೆಯಬೇಕು. ಸಿರಿಯದ ಮೇಲೆ ಆಕ್ರಮಣ ನಡೆಯದಂತೆ, ಇನ್ನೊಂದು ಯುದ್ಧದ ಕಿಡಿ ಎಲ್ಲೂ ಹಾರದಂತೆ, ಭಾರತದ ಜನತೆ ಸರ್ವ ಪ್ರಯತ್ನ ನಡೆಸುವುದು. ನಮ್ಮ ದೇಶದ ಪುನರ್‌ರಚನೆಯ ಮಹತ್ಕಾರ್ಯದಲ್ಲಿ ಅಖಿಲ ಭಾರತ ಕಿಸಾನ ಸಭೆಯು ತನ್ನ ಪಾತ್ರವನ್ನು ಯಶಸ್ವಿಯಾಗಿ ಪೂರೈಸುವಂತೆ, ರೈತ ಸಂಘಟನೆಯನ್ನು ಬಲಪಡಿಸಬೇಕು. ಯೋಗ್ಯ ಭೂಸುಧಾರಣೆ, ಕೃಷಿಯ ಅಭಿವೃದ್ಧಿ, ಜನರ ಜೀವನ ಸ್ಥಿತಿಯನ್ನು ಉತ್ತಮಗೊಗೊಳಿಸುವ ಕಾರ್ಯಗಳನ್ನು ಸಾಧಿಸಲು ಅಖಿಲಭಾರತ ಕಿಸಾನ ಸಭೆಯು ಮಾರ್ಗದರ್ಶನ ನೀಡಬೇಕು ಎಂದು ಅಧ್ಯಕ್ಷರು ಹೇಳಿದರು.

ಕಾರ್ಯದರ್ಶಿಯ ವರದಿ

ಅನಂತರ ಪ್ರಧಾನ ಕಾರ್ಯದರ್ಶಿ ಪ್ರಸಾದ ರಾವ್ ಅವರ ವರದಿಯನ್ನು ಅಧಿವೇಶನದ ಮುಂದಿಟ್ಟರು. ಇಂದಿನ ಆಹಾರದ ಅಭಾವ ಹಾಗೂ ನಿತ್ಯ ಉಪಯೋಗದ ವಸ್ತುಗಳ ಬೆಲೆ ಏರಿಕೆ ದೇಶದಲ್ಲಿ ತೀವ್ರವಾದ ಕಷ್ಟಕಾರ್ಪಣ್ಯಗಳನ್ನು ಉಂಟುಮಾಡಿದೆಯೆಂದೂ, ಅದೇ ಸಮಯದಲ್ಲಿ ಸರಕಾರವು ರೈತರ ಮೇಲೆ ಹೊಸ ಹೊಸ ತೆರಿಗೆಗಳ ಹೊರೆಯನ್ನು ಹೇರುತ್ತಲೇ ಇದೆಯೆಂದೂ ಪ್ರಧಾನ ಕಾರ್ಯದರ್ಶಿಯವರು ವಿವರಿಸಿದರು. ಭೂಸುಧಾರಣೆಗಳ ಮಟ್ಟಿಗೆ ಕೇಂದ್ರ ಸರಕಾರವು ಬರೇ ಮಾತನಾಡುವುದರಲ್ಲೇ ಕಾಲಕಳೆಯುತ್ತಿದೆಯೆಂದೂ ರಾಜ್ಯ ಸರಕಾರಗಳು ತಡವರಿಸುತ್ತಿವೆ, ಅರ್ಧಂಬರ್ಧ ಶಾಸನಗಳಿಂದ ಪರಿಸ್ಥಿತಿಯನ್ನು ಮತ್ತಷ್ಟು ಕೆಡಿಸುತ್ತಿವೆ ಎಂದೂ ತಿಳಿಸಿದರು. ಸಾಗುವಳಿದಾರರಾದ ರೈತರಿಗೆ ಹೊಲದಲ್ಲಿ ಭದ್ರತೆಯನ್ನು ಕೊಡಿಸುವುದರ ಬದಲು ಒಕ್ಕಲೆಬ್ಬಿಸುವುದಕ್ಕೆ ಧಾರಾಳವಾಗಿ ಅವಕಾಶ ಕೊಡಲಾಗುತ್ತದೆ; ಉಳುವವನನ್ನು ಹೊಲದ ಒಡೆಯನಾಗಿ ಮಾಡುವುದರ ಬದಲು ಸಾಗುವಳಿದಾರರಲ್ಲದ ಭೂಮಾಲಿಕರಿಗೂ ಹೊಲವನ್ನು ವಶಪಡಿಸಿಕೊಳ್ಳುವುದಕ್ಕೆ ಆಸ್ಪದ ಕೊಡಲಾಗುತ್ತದೆ; ಹೆಚ್ಚಿನ ಪ್ರಾಂತಗಳಲ್ಲಿ ಹಿಡುವಳಿಗೆ ಪರಿಮಿತಿ ನಿರ್ಣಯವಾಗಿಲ್ಲ, ನಿರ್ಣಯ ಆಗಿರುವಲ್ಲಿ ಭೂರಹಿತರಿಗೂ ಬಡರೈತರಿಗೂ ಹಂಚುವುದಕ್ಕೆ ಹೆಚ್ಚೇನೂ ಜಮೀನು ಸಿಗಲಾರದಷ್ಟು ಹೆಚ್ಚಿನ ಪರಿಮಿತಿಯನ್ನು ನಿರ್ಣಯಿಸಲಾಗಿದೆ; ಭೂಶಾಸನಗಳನ್ನು ಜ್ಯಾರಿಗೊಳಿಸುವ ಕ್ರಮ, ನಿಯಮಗಳು ನೌಕರಶಾಹಿಯನ್ನು ಹೊಂದಿಕೊಂಡಿದ್ದು, ರೈತರಿಗೆ ವಿರೋಧವಾಗಿದೆ. ಇಷ್ಟೆಲ್ಲ ಕುಂದುಕೊರತೆಗಳಿದ್ದರೂ ಭೂಶಾಸನಗಳಲ್ಲಿ ಭೂಮಾಲಕರ ಸ್ವೇಚ್ಛಾಧಿಕಾರವನ್ನೂ ಶೋಷಣೆಯನ್ನೂ ಮೊಟಕು ಮಾಡುವ, ರೈತರಿಗೆ ಹಲಕೆಲವು ಸೌಲಭ್ಯತೆಗಳನ್ನು ಕೊಡುವ ಅಂಶಗಳಿವೆ. ಅವುಗಳನ್ನು ರೈತರ ಹಿತರಕ್ಷಣೆಗೆ ಉಪಯೋಗಿಸುವುದು ಇಂದು ರೈತ ಸಂಘಟನೆಗಳ ಮುಖ್ಯ ಕರ್ತವ್ಯವಾಗಿದೆ. ಈ ಸೌಲಭ್ಯತೆಗಳು ರೈತರ ಹೋರಾಟಗಳ ಫಲವೆನ್ನುವುದನ್ನು ಮರೆಯದೆ, ಅವುಗಳ ಸಂಪೂರ್ಣ ಪ್ರಯೋಜನ ಪಡೆಯುವುದಕ್ಕೆ ಪ್ರಯತ್ನಿಸುವುದರ ಜೊತೆಯಲ್ಲೇ ಇನ್ನಷ್ಟು ಹೆಚ್ಚಿನ ಸೌಲಭ್ಯತೆಗಳಿಗೋಸ್ಕರ ಚಳುವಳಿಯನ್ನು ಮುಂದರಿಸಬೇಕಾಗಿದೆ ಎಂದು ಪ್ರಧಾನ ಕಾರ್ಯದರ್ಶಿಯವರು ಸ್ಪಷ್ಟಪಡಿಸಿದರು.

ರೈತಸಂಘಗಳು ಭೂಮಾಲಕ—ರೈತ ವಿವಾದಗಳಲ್ಲಿ ರೈತರ ಪಕ್ಷ ವಹಿಸುವುದು, ರೈತಹಿತ ಕಾಯಿದೆಗಳ ಪ್ರಯೋಜನ ಪಡೆಯುವುದು, ಪ್ರಗತಿಶೀಲ ಭೂಸುಧಾರಣೆಗೆ ಚಳುವಳಿ ನಡೆಸುವುದು ಮಾತ್ರ ಸಾಲದು. ಗ್ರಾಮೀಣ ಜನರ ಜೀವನಕ್ಕೆ ಸಂಬಂಧಿಸಿದ ಪ್ರತಿಯೊಂದು ವಿಷಯದಲ್ಲೂ ರೈತ ಸಂಘಗಳು ಕೈಯಿಕ್ಕಬೇಕಾಗಿದೆ. ಸಹಕಾರಿ ಸಂಘಗಳನ್ನು ಏರ್ಪಡಿಸಿ ರೈತರಿಗೆ ಸುಲಭವಾದ ಸಾಲ ಮತ್ತಿತರ ಸಹಾಯಗಳು ದೊರಕುವಂತೆ ಪ್ರಯತ್ನಿಸಬೇಕು; ರಾಷ್ಟ್ರೀಯ ವಿಸ್ತರಣೆ ಯೋಜನೆಗಳ ಮೂಲಕ ಗ್ರಾಮಗಳ ಸಾರಿಗೆ—ಸಂಪರ್ಕ, ವೈದ್ಯಕೀಯ ಸಹಾಯ, ವಿದ್ಯಾಭ್ಯಾಸ ವಿಸ್ತರಣೆ ಮುಂತಾದ ಕಾರ್ಯಗಳನ್ನು ನೆರವೇರಿಸಬೇಕು; ರಚನಾತ್ಮಕ ಚಟುಪಟಿಕೆಗಳಲ್ಲಿ ಮುಂದಾಳುತನ ವಹಿಸಬೇಕು. ಇದೆಲ್ಲ ರೈತ ಸಂಘಗಳ ದಿನನಿತ್ಯದ ಚಟುವಟಿಕೆಗಳಿರಬೇಕೆಂದು ಪ್ರಧಾನ ಕಾರ್ಯದರ್ಶಿಯವರು ತಿಳಿಸಿದರು.

ಭೂಸುಧಾರಣೆ

ಪ್ರಧಾನ ಕಾರ್ಯದರ್ಶಿಯವರ ವರದಿಯನ್ನು, ಸಮ್ಮೇಳನದಲ್ಲಾದ ಚರ್ಚೆಯ ಬೆಳಕಿನಲ್ಲಿ, ಪರಿಷ್ಕರಿಸಿ ಪ್ರಕಟಿಸಲು ಅಧಿವೇಶನ ನಿರ್ಣಯಿಸಿತು. ಆದಾದ ಬಳಿಕ ನಿರ್ಣಯಗಳ ಪರಿಶೀಲನೆ ಆರಂಭವಾಯಿತು. ನಿರ್ಣಯಗಳನ್ನು ಮೂರು ಭಾಗಗಳಾಗಿ ವಿಂಗಡಿಸಿ ಮೂರು ಕಮಿಶನ್‌ಗಳಿಗೆ ಒಪ್ಪಿಸಲಾಯಿತು. ಒಂದನೆಯ ಕಮಿಶನ್ ಒಕ್ಕಲುತನ ಶಾಸನ ಭೂಸುಧಾರಣೆ, ವ್ಯವಸಾಯಿಕ ಅಭಿವೃದ್ಧಿಗಳಿಗೆ ಸಂಬಂಧಿಸಿದ ಠರಾವುಗಳನ್ನು ಎರಡನೆಯ ಕಮಿಶನು ತೆರಿಗೆ, ಆಹಾರ ಪರಿಸ್ಥಿತಿ ಮುಂತಾದ ವಿಷಯಗಳಿಗೆ ಸಂಬಂಧಿಸಿದ ಠರಾವುಗಳನ್ನು ಮೂರನೆಯ ಕಮಿಶನು ಇತರ ಠರಾವುಗಳನ್ನು ಪರಿಶೀಲಿಸಿದವು. ಪ್ರತಿಯೊಂದು ಪ್ರಾಂತದಿಂದ ಬಂದಿದ್ದ ಪ್ರತಿನಿಧಿಗಳನ್ನು ಮೂರು ಕಮಿಶನುಗಳಿಗೆ ವಿಂಗಡಿಸಿ ಸೇರಿಸಲಾಯಿತು. ಕಮಿಶನುಗಳು ಪರಿಶೀಲಿಸಿ ಸರ್ವಾನುಮತದಿಂದ ಅಂಗೀಕರಿಸಿದ ಮತ್ತು ಭಿನ್ನಾಭಿಪ್ರಾಯವಿದ್ದಲ್ಲಿ ಸೂಚಿಸಿದ ತಿದ್ದುಪಡಿಗಳನ್ನು ಬಹಿರಂಗ ಅಧಿವೇಶನವು ಚರ್ಚೆಗೆ ತೆಗೆದುಕೊಂಡಿತು.

ಒಕ್ಕಲುತನ ಕಾಯಿದೆಗಳಿಗೆ ಸಂಬಂಧಿಸಿದ ಠರಾವಿನಲ್ಲಿ: (1) ತಮ್ಮದಲ್ಲದ ಹೊಲದಲ್ಲಿ ಸಾಗುವಳಿ ಮಾಡುವ ರೈತರನ್ನು "ಒಕ್ಕಲುಗಳು" ಎಂದು ಪರಿಗಣಿಸಬೇಕು; ಅನೇಕ ತರದ ಒಕ್ಕಲುಗಳನ್ನು ಶಾಸನಗಳ ರಕ್ಷಣೆಯಿಂದ ಹೊರತು ಪಡಿಸುವ ಈಗಿನ ಸರಕಾರದ ಕ್ರಮ ಕೊನೆಗಾಣಬೇಕು. (2) ಎಲ್ಲ ಒಕ್ಕಲುಗಳಿಗೂ ಸ್ಥಿರ ಹಾಗೂ ವಾರಸುದಾರಿಕೆಯ ಹಕ್ಕನ್ನು ಕೊಡಬೇಕು. (3) ಸ್ವಂತ ಸಾಗುವಳಿಗೆ ಅದೇ ಮುಖ್ಯ ಆದಾಯ ಮಾರ್ಗವಾಗಿರುವ ಹಾಗೂ ಸ್ವಂತ ಶ್ರಮದಿಂದ ಬೇಸಾಯ ಮಾಡುವ ಚಿಕ್ಕ ಭೂಮಾಲಿಕರಿಗೆ ಮಾತ್ರ ಕೊಡಬೇಕು. (4) 1952ರ ನಂತರ ಕಾಯಿದೆಯನ್ವಯ ಶ್ರಮವಹಿಸಿ, ಖಾಸಗಿಯಾಗಿ ಅಥವಾ 'ತಾವಾಗಿ ಬಿಟ್ಟುಬಿಟ್ಟುಕೊಡು" ಎಂಬಂತೆ ಒಕ್ಕಲುಗಳಿಂದ ಹೊಲ ವಶಪಡಿಸಿಕೊಂಡಿರುವುದನ್ನೆಲ್ಲ ಪುನಃ ಪರಿಶೀಲನೆ ನಡೆಸಿ ಒಕ್ಕಲುಗಳ ಪುನರ್‌ನಿವೇಶನ ಕ್ರಮವಹಿಸಬೇಕು. (5) ಯಾವ ನೆಪದಿಂದಲೂ ಒಕ್ಕಲೆಬ್ಬಿಸದಂತೆ ಪ್ರತಿಬಂಧಿಸಬೇಕು. (6) ಪರಮಾವಧಿ ಗೇಣಿಯು ಒಟ್ಟು ಉತ್ಪತ್ತಿಯ ⅙ಕ್ಕಿಂತ ಹೆಚ್ಚು ಇರಬಾರದು. (7) ನೆರೆಹಾವಳಿ ಅಥವಾ ಇತರ ದುಷ್ಕಾಲಗಳಲ್ಲಿ ಭೂಕಂದಾಯ ವಿನಾಯತಿ ಮಾಡುವಾಗಲೆಲ್ಲ ಗೇಣಿ ವಿನಾಯಿತಿ ಕೊಡಬೇಕು: (8) ದೊಡ್ಡ ಭೂಮಾಲಕರಿಗೆ ಸಲ್ಲತಕ್ಕ ಗೇಣಿ ಬಾಕಿಯನ್ನು ರದ್ದುಗೊಳಿಸಬೇಕು. (9) ನಿಜವಾಗಿ ಸಾಗುವಳಿ ಮಾಡುವವರ ಹೆಸರುಗಳನ್ನು ಸರಕಾರಿ ದಾಖಲೆಗಳಲ್ಲಿ ಸೇರಿಸಲು ಏರ್ಪಾಡಾಗಬೇಕು. (10) ಭೂಶಾಸಗಳನ್ನು ಜ್ಯಾರಿಗೊಳಿಸುವ, ಸಾಗುವಳಿದಾರರ ದಾಖಲೆಗಳನ್ನು ಸರಿಯಾಗಿ ಇರಿಸುವಂತೆ ನೋಡಿಕೊಳ್ಳುವ ಕಾರ್ಯಗಳಲ್ಲಿ ರೈತ ಸಂಘಗಳ ಪ್ರತಿನಿಧಿಗಳನ್ನೊಳಗೊಂಡ ಸಮಿತಿಗಳ ಸಹಕಾರ ಪಡೆಯಬೇಕು—ಈ ಹತ್ತು ಕೇಳಿಕೆಗಳನ್ನು ಅಖಿಲಭಾರತ ಕಿಸಾನ ಸಭೆಯು ಸರಕಾರದ ಮುಂದಿಟ್ಟಿದೆ.

ಜಮೀನು ವಿತರಣೆ

ಜಮೀನು ಹಂಚೋಣಕ್ಕೆ ಸಂಬಂಧಿಸಿದ ನಿರ್ಣಯದಲ್ಲಿ: ಹೆಚ್ಚಿನ ಪ್ರಾಂತಗಳು ಜಮೀನು ಹಿಡುವಳಿಗೆ ಪರಿಮಿತಿಯನ್ನು ಇನ್ನೂ ನಿರ್ಣಯಿಸಿಲ್ಲವೆಂದೂ, ನಿರ್ಣಯಿಸಿರುವಲ್ಲಿ ಅದು ಬಹಳ ಜಾಸ್ತಿಯಾಗಿದೆಯೆಂದೂ ವಿಮರ್ಶಿಸಲಾಗಿದೆ. ಕೇರಳ ಸರಕಾರದ ಹೊರತು ಇತರ ರಾಜ್ಯ ಸರ್ಕಾರಗಳು ತಮ್ಮ ವಶದಲ್ಲಿರುವ ಸಾಗುವಳಿಗೆ ಯೋಗ್ಯವಾದ ಬಂಜರು ಭೂಮಿಯನ್ನು ಭೂರಹಿತರಿಗೂ ಬಡ ರೈತರಿಗೂ ಹಂಚುವುದಕ್ಕೆ ಇನ್ನೂ ಕ್ರಮ ತೆಗೆದುಕೊಂಡಿಲ್ಲವೆಂದು ಟೀಕಿಸಿ, ಭೂ ವಿತರಣೆಗೆ ಕೂಡಲೆ ಯೋಗ್ಯ ಕ್ರಮ ವಹಿಸಬೇಕೆಂದು ಒತ್ತಾಯಿಸಲಾಗಿದೆ. ಹಿಡುವಳಿಗೆ ಪರಮಾವಧಿಯನ್ನು ನಿರ್ಣಯಿಸುವ ಮತ್ತು ಭೂ ವಿತ

(೯ನೇ ಪುಟ ನೋಡಿ)

ದಂಡೇಲಿ ಪೇಪರ್ ಮಿಲ್ಸ್‌ನಲ್ಲಿ—

ಕಾರ್ಮಿಕ ಕಾನೂನು ಜಾರಿಯಲ್ಲಿಲ್ಲವೇ ?

ಉತ್ತರ ಕರ್ನಾಟಕದ "ದಂಡೇಲಿಯಲ್ಲಿ ಮೂರು ಮುಖ್ಯ ಕೈಗಾರಿಕೋದ್ಯಮಗಳಿವೆ: ಪ್ಲೈವುಡ್ ಮಿಲ್, ಪೇಪರ್ ಮಿಲ್ಸ್ ಮತ್ತು ಫೆರೊಮ್ಯಾಂಗನೀಸ್ ಫ್ಯಾಕ್ಟರಿ. ಇವುಗಳಲ್ಲಿ ಸುಮಾರು 6,000 ಕಾರ್ಮಿಕರು ದುಡಿಯುತ್ತಿದ್ದು, ಕಾರ್ಮಿಕ ಹಿತಸಾಧಿಸುವ ಯಾವೊಂದು ಫ್ಯಾಕ್ಟರಿ ಕಾನೂನುಗಳ ಲಾಭವು ಈ ಕಾರ್ಮಿಕರಿಗೆ ದೊರಕದಂತಿದೆ. ಈ ಫ್ಯಾಕ್ಟರಿಗಳಲ್ಲಿ ಜ್ಯಾರಿಯಲ್ಲಿರುವ ಕಾನೂನೆಂದರೆ ಅದು 'ಮಾಲಿಕರ ಇಚ್ಛೆ' ಮಾತ್ರ ಎಂದು ಕಾರವಾರದ "ನಾಗರಿಕ" ಪತ್ರಿಕೆ ಬರೆದಿದೆ

ಈಮಿಲ್ಲಿನಲ್ಲಿ ನಿರ್ಮಿಸಲಾಗುವ ಕಟ್ಟಡಗಳೂ, ಮತ್ತಿತರ ರಚನೆಗಳೂ, ಕೆಲಸ ಪೂರ್ತಿ ಮುಗಿಯುವ ಮೊದಲೆ ಮುರಿದು ಬೀಳುತ್ತಿವೆ. ಇದನ್ನು ಬರೆಯಲು ಕಾರಣವೆಂದರೆ ವೆಸ್ಟ್‌ಕೋಸ್ಟ್ ಪೇಪರ್‌ಮಿಲ್ಸ್‌ನ ಬಂಡವಾಳದ ಅಧಿಕಾಂಶ ಕೇಂದ್ರ ಹಾಗೂ ನಮ್ಮ ರಾಜ್ಯ ಸರಕಾರಗಳು ಹಾಕಿದ್ದುದಾಗಿದೆ. ಸರಕಾರಿ ಹಣವ ಈ ಪೋಲನ್ನು ನಿಲ್ಲಿಸಲು ಸರಕಾರ ಮುಂದೆ ಬಂದಿಲ್ಲವೇಕೇ? ಅಲ್ಲದೆ ತನ್ನ ಬಂಡವಾಳವಿರುವ ಈ ಮಿಲ್ಲಿನಲ್ಲಿ ಕಾರ್ಮಿಕರನ್ನು ಅಮಾನುಷ ರೀತಿಯಲ್ಲಿ ಯಾಕೆ ನೋಡಲಾಗುತ್ತಿದೆ? ಹಿಗಿದ್ದೂ ಕಾರ್ಮಿಕ ಹಿತ ಕಾನೂನುಗಳು ಈ ಫ್ಯಾಕ್ಟರಿಗಳಲ್ಲಿ ಜಾರಿಗೆ ಬರದಿದ್ದರೂ, ಸರಕಾರ ಹಾಗೂ ಕಾರ್ಮಿಕ ಖಾತೆ ಏನೊಂದು ಕಾರ್ಯಕ್ರಮ ಏಕೆ ತೆಗೆದುಕೊಂಡಿಲ್ಲ? ಇದಕ್ಕೆ, ಒಂದು ನಮ್ಮ ಕಾಂಗ್ರೆಸ್ ಸರಕಾರದ ಕಾರ್ಮಿಕ ದ್ರೋಹಿ ನೀತಿಯಿರಬಹುದಾದರೂ, ಇನ್ನೊಂದು ಮುಖ್ಯ ಕಾರಣ ಕಾರ್ಮಿಕ ಇಲಾಖೆಯ ಅಧಿಕಾರಿಗಳು ಈ ಮಾಲಿಕರ 'ಅತಿಥಿ'ಗಳಾಗಿರುವುದರಿಂದ, ಈ ಕಾರ್ಮಿಕ ದ್ರೋಹಿ ನೀತಿ ಹಾಗೂ ಮಾಲಿಕರ ಸರ್ವಾಧಿಕಾರ ಸುಗಮವಾಗಿ ನಡೆಯುತ್ತಿದೆ ಎನ್ನಬೇಕು. ಈ ಬಗ್ಗೆ ಪುನಃ "ನಾಗರಿಕ" ಪತ್ರಿಕೆ ಏನನ್ನು ಬರೆದಿದೆ ಎಂದು ನೋಡೋಣ.

"ನಮ್ಮ ಮಂತ್ರಿಗಳಿಗೆ ಕಾರ್ಮಿಕರ ಸಂಪರ್ಕವಿಲ್ಲ. ನಮ್ಮ ಎಂ. ಎಲ್. ಏ.ಗಳ್ಳ ಮಾಲಿಕರ ಗೆಳತನವನ್ನು ಇನ್ನಷ್ಟು ಬೆಳಿಸುವುದರಲ್ಲೇ ಆಸಕ್ತರಾಗಿದ್ದಾರೆ. ಕಾರ್ಮಿಕ ಇಲಾಖೆಯ ಅಧಿಕಾರಿಗಳು ಮಾಲಿಕರ (**ಆತ್ಮೀಯ**) ಅತಿಥಿಗಳಾಗಿ ಉಳಕೊಳ್ಳುತ್ತಾರೆ. ವಿಶ್ವಕಾರ್ಮಿಕ ನಾಯಕನೆಂದು ಹೇಳಿಕೊಳ್ಳುವ ಒಬ್ಬ ಅಸಾಮಿ ಮಾಲಿಕರಿಂದ ಸಹಸ್ರಾರು ರೂಪಾಯಿಗಳನ್ನು (**ಲಂಚವಾಗಿ**) ಪಡೆದುಕೊಂಡು ಶಾಲೆ ಕಟ್ಟಿಸುವುದರಲ್ಲಿ (ಕರಿಗಾಲಾಗಿ **ಕಾರ್ಮಿಕರಿಗೆ ದ್ರೋಹ ಬಗೆಯುವುದರಲ್ಲಿ** ತೊಡಗಿದ್ದಾನೆ.") ಇಲ್ಲಿ ಒತ್ತಕ್ಷರದಲ್ಲಿ ಬರೆದದ್ದು ನಮ್ಮ ಟೀಕೆಯಾಗಿದೆ ಅನ್ನಿ.

ಕಿತ್ತೆಸೆದ ನೌಕರನಿಗೆ ಕೆಲಸ ನೀಡಲಿ

ಈ ಹಿನ್ನೆಲೆಯಲ್ಲಿ ದಂಡೇಲಿಯ ಪೇಪರ್ ಮಿಲ್ಲಿನ ಮಾಲಿಕರು ನಡೆಸುತ್ತಿರುವ ಸರ್ವಾಧಿಕಾರದ ತಾಂಡವನ್ನು ನೋಡಿದರೆ, ಅಲ್ಲಿನ ಕೆಲಸಗಾರರ ದುಸ್ಥಿತಿಯ ಬಗ್ಗೆ ಸೂಕ್ಷ್ಮವಾದ ಅರಿವಾಗಬಹುದು. ನಮಗೆ ಬಂದ ವರದಿ ಮೇರಿಗೆ ಈ ಮಾಲಕರು ಮನಬಂದಂತೆ ಕಾರ್ಮಿಕರನ್ನು ಕೆಲಸದಿಂದ ಕಿತ್ತುಹಾಕುವ ಕಾರಸ್ಥಾನ ಹೂಡಿದ್ದಾರೆಂದು ವರದಿಯಾಗಿದೆ ಈಗಾಗಲೇ ಕಾರ್ಮಿಕ ಸಂಘದ ಕ್ರಿಯಾಶೀಲ ಕಾರ್ಯಕರ್ತರಾದ ಶ್ರೀ ಏ. ಬಿ. ಪಾಲ್. ಎಂಬವರನ್ನು ವಿನಾಕಾರಣ ಕೆಲಸದಿಂದ ತೆಗೆದು ಹಾಕಲಾಗಿದೆ. ಇನ್ನು ಹಲವಾರು ಸಂಘದ ಕ್ರಿಯಾಶೀಲ ಕಾರ್ಯಕರ್ತರಾದ ಕೆಲಸಗಾರರನ್ನು ಕೆಲಸದಿಂದ ಕಿತ್ತೆಸೆಯುವ ಹಂಚಿಕೆ ನಡೆದಿದೆ ಎಂದೂ ತಿಳಿಯಲಾಗಿದೆ. ಈ ಅನ್ಯಾಯಗಳು ಕಾರ್ಮಿಕ ಇಲಾಖೆಯ ಮೂಗಿನ ನೇರಕ್ಕೆ ನಡೆದಿದ್ದು ಕಾರ್ಮಿಕ ಇಲಾಖೆಯು,ಸಕ್ಕಾರರು ಮಾಲಿಕರೀಯುವ ಅತಿಥಿ ಸತ್ಕಾರ—ಸಂತರ್ಪಣೆಗಳಿಗೆ ಬಲಿಬಿದ್ದಿದ್ದಾರೆಂಬುದರಿಂದಲೇ ಇದು ಸಾಧ್ಯವಾಗಿದೆ.

ಅಂಕೆಯಿಲ್ಲದ ಆಡಳಿತೆ !

ಕರ್ನಾಟಕದ ಮಣ್ಣಿನಲ್ಲಿರುವ ಈ ಮಿಲ್ಲಿನಲ್ಲಿ ದಬ್ಬಾಳಿಕೆ ಅಂಕೆ ಮೀರಿದೆ. ಪಕ್ಷಪಾತ ಮೇರೆ ಮರೆತಿದೆ. ಕನ್ನಡಿಗ ಕೆಲಸಗಾರಿಗೂ, ಆಂಧ್ರ, ಕೇರಳ, ಮದ್ರಾಸಿನಿಂದ ಬಂದು ಇಲ್ಲಿ ಕೆಲಸಮಾಡುತ್ತಿರುವವರಿಗೂ ಏನೊಂದು ಸೌಕರ್ಯ, ಸೌಲಭ್ಯಗಳು ದೊರೆಯುವುದಿಲ್ಲವೆಂದು ಹಯಿಲೆದ್ದಿದೆ. ಆವರೆ ಇದಕ್ಕೆ ತದ್ವಿರುದ್ಧವಾಗಿ ಅನರ್ಹರಾಗಿದ್ದರೂ ಕೂಡಾ ಪೂರ್ವದ, ಸೌರಾಷ್ಟ್ರ, ಉತ್ತರ ಭಾರತ ಮುಂಬಾಯಿಗಳಿಂದ ಬರುವ ನೌಕರರಿಗೆ ಸರ್ವ ಸೌಲಭ್ಯ, ಸೌಕರ್ಯಗಳನ್ನು ನೀಡಲಾಗುತ್ತಿದೆ. ಇವರಿಗೆ ಇವರ ಯೋಗ್ಯತೆಗೆ ಮೀರಿದ ಸಂಬಳ, ಕೆಲಸದ ಘಂಟೆಗಳಲ್ಲಿ ಮಿತಿ, ಮತ್ತು ಇರಲು ಉತ್ತಮ ವಸತಿ ಸೌಕರ್ಯಗಳನ್ನು ನೀಡಲಾಗುತ್ತಿದೆ. ಅವರ ಕೆಲಸವನ್ನು ಖಾಯಂ ಮಾಡಲಾಗುತ್ತಿದೆ.

ಆದರೆ ಇವರನ್ನು ಬಿಟ್ಟುಳಿದ ಕನ್ನಡ ಹಾಗೂ ಮತ್ತಿತರ ಕೆಲಸಗಾರರನ್ನು ಅವರು ಯೋಗ್ಯತಾ-ವಿದ್ಯಾ ಸಂಪನ್ನರಾಗಿದ್ದರೂ ದಿನ ಕೂಲಿಯ ಮೇಲೆ ಕೆಲಸಕ್ಕಿಟ್ಟುಕೊಳ್ಳಲಾಗುತ್ತಿದೆ; ಅದೂ ಟೆಂಪರರಿ ಆಗಿ ಹೀನಾಯಮಾನವಾಗಿ ನಡೆಸಿಕೊಂಡು ಇಚ್ಛೆ ಬಂದಾಗ ಕೆಲಸದಿಂದ ಇವರನ್ನು ತಳ್ಳಿಹಾಕಲಾಗುತ್ತಿದೆ.

ಕಾರ್ಮಿಕರ ಮುಷ್ಕರ ?

ಈ ಮಿಲ್ಲಿನ ಕಾರ್ಮಿಕ ಸಂಘ ಬಹು ತಾಳ್ಮೆಯಿಂದ ನಡೆದು ಕೊಂಡು ಬಂದಿದೆ. ಎರಡು ಬಾರಿ ಮುಷ್ಕರ ಪರವಾಗಿ ಮತವಿತ್ತಿದ್ದಾರೆ. ಆದರೂ ಸಂಘದ ಪ್ರತಿನಿಧಿಗಳು ಮಾಲಿಕರನ್ನು ಕಂಡು, ವಿನಾಕಾರಣ ಕೆಲಸದಿಂದ ತೆಗೆದು ಹಾಕಿದ ನೌಕರರನ್ನು ಕೆಲಸಕ್ಕಿಟ್ಟುಕೊಳ್ಳಬೇಕೆಂದೂ, ಕಾರ್ಮಿಕರ ಮೇಲಾಗುತ್ತಿರುವ ಇನ್ನಿತರ ಅನ್ಯಾಯ ಅಕ್ರಮಗಳನ್ನು ಸರಿಪಡಿಸಬೇಕೆಂದೂ ಕೇಳಿಕೊಂಡಿರುತ್ತಾರೆ. ಆದರೆ ಮಾಲಿಕರು ತಮ್ಮ ಉದ್ದಟತನ ಬಿಟ್ಟುಕೊಡಲಿಲ್ಲ. ಕೊನೆಯದಾಗಿ ಕಾರ್ಮಿಕರು ಮುಷ್ಕರದ ನೋಟೀಸನ್ನು ಕೊಟ್ಟಿರುತ್ತಾರೆಂದು ವರದಿಯಾಗಿದೆ. ಸರಕಾರ ಈ ಕೂಡಲೇ ಮಧ್ಯೆ ಪ್ರವೇಶಿಸಬೇಕು. ಮಾಲಿಕರ ಈ ದುರ್ನೀತಿಯ ದುರಾಡಳಿತನನ್ನು ಕೊನೆಗಾಣಿಸಬೇಕು.

ನಾಗರಿಕರ ಪ್ರತಿಭಟನೆ

ದಂಡೇಲಿಯ ನಾಗರಿಕರು ಕಾರ್ಮಿಕರಿಂದೊಡಗೂಡಿ ಸಾರ್ವತ್ರಿಕ ಪ್ರತಿಭಟನೆ, ಸಭೆ ನಡೆಸಿದ್ದಾರೆ. ಲೇಬರ್ ಇಲಾಖೆಯ ಅಧಿಕಾರಿಗಳು ಇನ್ನು ಮುಂದೆ ಮಾಲಿಕರ ಅಥಿತಿಗಳಾಗಿ, ಉತ್ತಮ ಭೋಜನ ನಡೆಸಬಾರದು (ಏಕೆಂದರೆ ಇವರು ಆ ಮೇಲೆ ಹಾಗೆಯೇ ಹಿಂದೆ ಹೋಗುತ್ತಾರೆ !) ಎಂದು ಖಂಡನಾಯುತ ನಿರ್ಣಯವನ್ನು ಸಭೆಯಲ್ಲಿ ಸ್ವೀಕರಿಸಲಾಯಿತು. ನಿರ್ಣಯ ವಿಚಿತ್ರವಾಗಿ ಕಂಡು ಬಂದರೂ ಪರಿಸ್ಥಿತಿಯ ವ್ಯಗ್ರತೆಯನ್ನು ಇದು ಸೂಚಿಸುತ್ತದೆ.

ಮೇಲೆ ಹೇಳಿದ ಉದ್ಯಮಗಳಲ್ಲಿ ವಸತಿ ಸೌಕರ್ಯ, ಮಾಧ್ಯಮಿಕ ವಿಧ್ಯಾಭ್ಯಾಸ, ವೈದ್ಯಕೀಯ ಸೌಲಭ್ಯಗಳು ಎಲ್ಲಾ ಕೆಲಸಗಾರರಿಗೂ ನೀಡಲಾಗಬೇಕು; ಭೋನಸ್ಸು ಗ್ರೇಡ್‌ಪ್ರಶ್ನೆ ಹಾಗೂ ಇನ್ನಿತರ ಬೇಡಿಕೆಗಳ ಪರಿಹಾರವಾಗಬೇಕು. ವಿನಾಕಾರಣ ಕೆಲಸದಿಂದ ತೆಗೆದವರನ್ನು ಪುನಃ ನೌಕರಿಗೆ ಸೇರಿಸಿಕೊಳ್ಳಬೇಕು; ಅರಣ್ಯ ಇಲಾಖೆಯ ಇಂಜಿನಿಯರಿಂಗ್ ವಿಭಾಗದಲ್ಲಿ ರೂ 10- ಸಂಬಳ ಕಡಿತ ಮಾಡಿದುದನ್ನು ಖಂಡಿಸಿ, ಈ ಅನ್ಯಾ ಸರಿಪಡಿಸಬೇಕೆಂದ್ರು ಸಭೆಯಲ್ಲಿ ಮಂಡಿಸಿದ ನಿರ್ಣಯಗಳಲ್ಲಿ ಸರ್ವಾನುಮತದಿಂದಅಂಗೀಕೃತವಾದುವು.

—೦—

(೭ನೇ ಪುಟದಿಂದ)

ತಿಯ ವರದಿಯ ಕಾಯಿದೆ ರೂಪದಲ್ಲಿ ಬಂದರೆ ದೇಶದ ಆರ್ಥಿಕತೆಯೇ ನಾಶವಾದೀತು ಎಂಬಂತೆ ಬರೆಯುತ್ತಿವೆ. ಕಾಂಗ್ರೆಸಿನ ಶ್ರೀ ಟಿ. ಎ. ಪೈಯವರ "ಪ್ರಕಾಶ" ಪತ್ರಿಕೆ ಮೂಲಭೂತ ಭೂಸುಧಾರಣೆಗೆ ಬೆಂಬಲವಾಗಿದೆ.

ಹೇಗಿದ್ದರೂ ಜಿಲ್ಲೆಯ ಪ್ರತಿಗಾಮಿ ವರ್ಗ ಮುಖ್ಯವಾಗಿ ಹಿರಿ ಭೂಮಾಲಕ ಪ್ರತಿನಿಧಿಗಳು ಜತ್ತಿ ಸಮಿತಿಯ ವರದಿಯನ್ನು ಮನಸ್ವೀ ಟೀಕಿಸುತ್ತಿದ್ದಾರಲ್ಲದೆ, ಜತ್ತಿ ಸಮಿತಿಯ ಸದಸ್ಯರೊಬ್ಬರಾದ ಜಿಲ್ಲೆಯ ಶ್ರೀ ಬಿ. ಆರ್. ಕರ್ಕೇರರ ಮೇಲೂ ಉರಿ ಕಾರುತ್ತಿದ್ದಾರಂತೆ !

ಅಮೆರಿಕದ ಕುಹಕ ನೀತಿ

(ಕೊನೇ ಪುಟದಿಂದ)

ಸಮ್ಮೇಳನದಲ್ಲಿ, ಎರಡು ಚೀನಗಳನ್ನು ಸೃಷ್ಟಿಸುವ ಅಮೆರಿಕದ ಹೇಯಕೃತ್ಯವು ಖಂಡನೀಯವಿದೆ. ಅದು ಅಂತರ್‌ರಾಷ್ಟ್ರೀಯ ರೆಡ್‌ಕ್ರಾಸ್‌ನ ಘಟನೆಗೆ ವಿರೋಧವಿದೆ. ಅದು ಸಿಂಧುವಲ್ಲ," ಎಂದು ಹೇಳಿ ತನ್ನ ಪ್ರತಿಷೇಧವನ್ನು ತೋರಿಸಲು ಸಭಾತ್ಯಾಗ ಮಾಡಿದರು.

ಅಧ್ಯಕ್ಷತೆ ವಹಿಸಿದ್ದ ಭಾರತದ ರಾಜಕುಮಾರಿ ಅಮೃತಕೌರ್ ಅವರು: "ಸಮ್ಮೇಳನವು ಅಂಗೀಕರಿಸಿರುವ ಈ ಗೊತ್ತುವಳಿಯು ಭಾರತ ರೆಡ್‌ಕ್ರಾಸ್ ಸೊಸೈಟಿಗೆ ತೀವ್ರ ಅಗೌರವವಾಗಿದೆ. ಇದರ ಬಗ್ಗೆ ತಮ್ಮ ಬಲವಾದ ಪ್ರತಿಷೇಧವನ್ನು ವ್ಯಕ್ತ

(೫ನೇ ಪುಟ ನೋಡಿ)

ಎಚ್. ಏ. ಎಲ್. ಕಾರ್ಮಿಕರ

ಉಪವಾಸ ಮುಷ್ಕರ

ಎಚ್. ಏ. ಎಲ್. ಕಾರ್ಮಿಕರು, ಸರಕಾರ ಹಾಗೂ ಮ್ಯಾನೇಜ್‌ಮೆಂಟಿನೊಡನೆ ನಡೆಸಿಕೊಂಡು ಬಂದಿದ್ದ ಮಾತುಕತೆಯು ಪುನಃ ಒಮ್ಮೆ ನಿಂತುಹೋಗಿದೆ. ತತ್ಫಲವಾಗಿ ಕಾರ್ಮಿಕರು ತಾ. 18ರಿಂದ ಉಪವಾಸ ಮುಷ್ಕರ ಹೂಡುವ ನಿರ್ಣಯವನ್ನು ತಾ. 6ರಂದು ನಡೆದ ಸರ್ವಸದಸ್ಯರ ಬೃಹತ್ ಸಭೆಯಲ್ಲಿ ಅಂಗೀಕರಿಸಿದ್ದಾರೆ.

ಕಾರ್ಮಿಕ ಮಂತ್ರಿಗಳ ಸನ್ನಿಧಾನದಲ್ಲಿ ಕಾರ್ಮಿಕರು ಒಪ್ಪಿಸಿದ 18 ಬೇಡಿಕೆಗಳಲ್ಲಿ 5 ಕೇಳಿಕೆಗಳ ಮೇಲೆ ಪರಸ್ಪರ ಬಾಯಿ ಮಾತಿನ ಒಪ್ಪಂದವಾಗಿದ್ದರೂ, ಮ್ಯಾನೇಜ್‌ಮೆಂಟ್ ಮರುದಿನ ಇದನ್ನು ತಿರಸ್ಕರಿಸಿತೆಂದು ತಿಳಿದುಬಂದಿದೆ. ಅಷ್ಟೇ ಅಲ್ಲ, ಆಮೇಲೆ ಕಾರ್ಮಿಕರನ್ನು ಬೆದರಿಸುವ ಅನ್ಯಾಯದ, ಸುಳ್ಳು ಹೇಳಿಕೆಯೊಂದನ್ನು ಪತ್ರಿಕೆಗಳಿಗೆ ಇತ್ತು ಮ್ಯಾನೇಜ್‌ಮೆಂಟ್ ತನ್ನ ಉದ್ದಂಡತನವನ್ನು ನಾಚಿಕೆಯಿಲ್ಲದೆ ಸಾರ್ವಜನಿಕರ ಮುಂದೆಯೂ ತೋರಿಸಿದೆ. ಐದನೆ ಬಾರಿ ಮ್ಯಾನೇಜ್‌ಮೆಂಟನ್ನು ಕಂಡು ಒಪ್ಪಂದಕ್ಕೆ ಬರಲು ಕಾರ್ಮಿಕರು ಯತ್ನಿಸಿ ವಿಫಲರಾಗಿದ್ದಾರೆ.

1954ರಲ್ಲಿ ಈ ಬೇಡಿಕೆಗಳನ್ನು ಮ್ಯಾನೇಜ್‌ಮೆಂಟಿನ ಮುಂದೆ ಮಂಡಿಸಿ, ತಿರಸ್ಕೃತವಾದ ಪ್ರಯುಕ್ತ ಹೂಡಿದ ಮುಷ್ಕರವನ್ನು ಮ್ಯಾನೇಜ್‌ಮೆಂಟ್ ಮುರಿದಿತ್ತು. ಅದೇ ಆಶೆಯನ್ನು 1957ರಲ್ಲೂ ಇವರು ತಳೆದಂತೆ ಕಾಣುತ್ತದೆ. ಆದರೆ ಪರಿಸ್ಥಿತಿ ಇಂದು ಬದಲಾಗಿದೆ.

ಇಂದು ಎಚ್. ಏ. ಎಲ್. ಕಾರ್ಮಿಕ ಸಂಘದಲ್ಲಿ 8,000ಕ್ಕೂ ಮಿಕ್ಕಿ ಕೆಲಸಗಾರರು ಸದಸ್ಯರಾಗಿದ್ದಾರೆ. ಕಳೆದ ವಾರ ನಡೆದ ಸರ್ವಸದಸ್ಯರ ಸಭೆಯಲ್ಲಿ ಹಿಂದೆಂದೂ ಸೇರದಷ್ಟು ಬೃಹದ್ ಪ್ರಮಾಣದಲ್ಲಿ ಹೆಚ್ಚುಕಮ್ಮಿ ಸರ್ವಸದಸ್ಯರೂ ಬಂದು ಸೇರಿದ್ದರು. ಸಭೆಯಲ್ಲಿ ಮ್ಯಾನೇಜ್‌ಮೆಂಟಿನ ದಬ್ಬಾಳಿಕೆಯನ್ನು ಖಂಡಿಸಿ, ಇದರ ವಿರುದ್ಧ ಉಪವಾಸ ಮುಷ್ಕರ ಹೂಡುವ ನಿರ್ಣಯವನ್ನೂ ಮತ್ತಿತರ ನಿರ್ಣಯಗಳನ್ನೂ ಮಂಡಿಸಲಾಯಿತು. ಸಹಸ್ರಾರು ಮಂದಿ ಕಾರ್ಮಿಕರು ಪ್ರಚಂಡ ಕರತಾಡನದೊಂದಿಗೆ ನಿರ್ಣಯವನ್ನು ಸ್ವೀಕರಿಸಿದರು.

ಕೇಂದ್ರ ಸರಕಾರಕ್ಕೆ ಈ ಸ್ಥಿತಿ ತಿಳಿದಿಲ್ಲವೆಂದಲ್ಲ. ನೆಹ್ರೂ ಬೆಂಗಳೂರಿಗೆ ಬಂದಾಗ ಈ ಕಾರ್ಮಿಕರ ಸಂಘಕ್ಕೆ ಭರವಸೆ ಇತ್ತಿರುತ್ತಾರೆ. ಹಾಗಿದ್ದೂ ಕೇಂದ್ರ, ರಾಜ್ಯದತ್ತ ರಾಜ್ಯ ಕೇಂದ್ರದತ್ತ ಕೈತೋರುತ್ತಾ, ಈ ಮಧ್ಯೆ ಮ್ಯಾನೇಜ್‌ಮೆಂಟ್ ಸರ್ವಾಧಿಕಾರಕ್ಕೆ ಎಣೆಯಿಲ್ಲದಂಥ ಪರಿಸ್ಥಿತಿಯನ್ನು ಸರಕಾರವೇ ಸೃಷ್ಟಿಸಿರುತ್ತೆ. ಈ ಕಾರ್ಮಿಕ ದ್ರೋಹಿ, ಸಂದರ್ಭಸಾಧಕ ಧೋರಣೆ ಸರಕಾರಕ್ಕೆ ತಕ್ಕುದಲ್ಲ. ಎಚ್. ಏ ಎಲ್. ಕಾರ್ಮಿಕರ ಕೇಳಿಕೆಗಳನ್ನು ಕೂಡಲೇ ಮನ್ನಿಸಲಾಗುವಂತೆ ಕೇಂದ್ರ ಮುಂದೆ ಬರಲು ನಮ್ಮ ರಾಜ್ಯ ಸರ್ಕಾರ ಯತ್ನಿಸಲಿ.

ಕೇರಳ ಪಿ. ಎಸ್. ಪಿ.ಯ
ಅಕ್ರಮ ವರ್ತನೆ !

ಕೇರಳ ಸರಕಾರವು 7 ಲಕ್ಷ ಎಕ್ರೆ ಸರಕಾರಿ ಭೂಮಿಯನ್ನು ಭೂರಹಿತ ಕೃಷಿ ಕೂಲಿಗಾರರಿಗೆ ಹಂಚುವುದಕ್ಕೆ ನಿರ್ಣಯಿಸಿದೆ. ಈ ಭೂಮಿಯ ವಿತರಣೆಯನ್ನು ನಡೆಸುವುದಕ್ಕೆ ಎಲ್ಲ ಪಕ್ಷಗಳ ಪ್ರತಿನಿಧಿಗಳಿರುವ ಸಮಿತಿಗಳನ್ನು ರಚಿಸಬೇಕೆಂದೂ ನಿರ್ಧರಿಸಿದೆ. ಆದರೆ ಭೂವಿತರಣೆಯ ಕಾರ್ಯದಲ್ಲಿ ತಾವು ಸಹಕರಿಸಲು ಸಿದ್ಧರಿಲ್ಲವೆಂದು ಕಾಂಗ್ರೆಸ್, ಪಿ. ಎಸ್. ಪಿ, ಲೀಗ್ ಪಕ್ಷಗಳು ದುರಾಗ್ರಹ ಹೂಡಿವೆ. ಭೂಮಿಯನ್ನು ಸರಿಯಾದ ರೀತಿಯಲ್ಲಿ ಹಂಚುವುದರಲ್ಲಿ ಸರಕಾರದೊಡನೆ ಸಹಕರಿಸುವುದಿಲ್ಲ ಮಾತ್ರವಲ್ಲ, ಭೂರಹಿತರಿಗೆ ಹಂಚುವುದಕ್ಕೆಂದು ಪ್ರತ್ಯೇಕಿಸಿ ಇಟ್ಟಿರುವ ಭೂಮಿಯನ್ನು ಅಕ್ರಮವಾಗಿ ವಶಪಡಿಸಿಕೊಳ್ಳುವುದಕ್ಕೆ ಈ ಪ್ರತಿ ಪಕ್ಷಗಳು ಪ್ರಯತ್ನಿಸುತ್ತಿವೆ.

ಕಳೆದ ಏಪ್ರಿಲ್ ತಾ. 1ಕ್ಕೆ ಹಿಂದೆ ಸರಕಾರಿ ಸ್ಥಳಗಳಲ್ಲಿ ನೆಲೆಸಿರುವವರನ್ನು ಹೊರಗೆ ಹಾಕಬಾರದೆಂದೂ ಅನಂತರ ಯಾರೂ ಸರಕಾರಿ ಸ್ಥಳವನ್ನು ಆಕ್ರಮಿಸಬಾರದೆಂದೂ ಸರಕಾರ ಮೊದಲೇ ಎಚ್ಚರಿಕೆ ಕೊಟ್ಟಿದೆ.

ಆದರೆ, ಹೇಗಾದರೂ ಗಲಭೆ ಎಬ್ಬಿಸಬೇಕೆಂದು ಹಠ ತೊಟ್ಟಿರುವ ಪ್ರತಿಪಕ್ಷಗಳಿಗೆ ನ್ಯಾಯ ಬೇಕಿಲ್ಲ, ಕ್ರಮ ಬೇಕಿಲ್ಲ. ಕಾಟ್ಟಿಂಬಳ್ಳಿ ಎಂಬಲ್ಲಿರುವ ಸರಕಾರಿ ಸ್ಥಳವನ್ನು ಆಕ್ರಮವಾಗಿ ವಶಪಡಿಸುವ ಉದ್ದೇಶದಿಂದ 2000 ಪಿ. ಎಸ್. ಪಿ. 'ಸ್ವಯಂ ಸೇವಕರು' ಎಲ್ಲೆಲ್ಲಿಂದಲೋ ಬಂದು ಸೇರಿ ನವಂಬರ ತಾ|| 1ರಂದು ಮುನ್ನುಗ್ಗಿದರು. ಅವರನ್ನು ಪೋಲೀಸರು ತಡೆದಾಗ ಪಿ. ಎಸ್. ಪಿ. ಮುಂದಾಳು ಶ್ರೀ ಪಿ. ಆರ್. ಕುರುಪ್ ಎಂಬವರು ಪೋಲೀಸ್ ಅಧಿಕಾರಿಗೆ ಹೊಡೆದರೆಂದೂ 'ಸ್ವಯಂ ಸೇವಕರು' ಗಲಭೆಯೆಬ್ಬಿಸಿದರೆಂದೂ ತಿಳಿದು ಬಂದಿದೆ. ಗಲಭೆಯನ್ನು ತಣಿಸಲು ಸಾಧ್ಯವಾಗದಾಗ ಪೋಲೀಸರು ಲಾಠಿಚಾರ್ಜು ಮತ್ತು ಅಶ್ರುವಾಯು ಪ್ರಯೋಗ ಮಾಡಬೇಕಾಗಿ ಬಂತು.

ಕೇರಳದಲ್ಲಿ ಕ್ರಮ ಬದ್ಧತೆಯಿಲ್ಲ, ನೆಮ್ಮದಿಯಿಲ್ಲ, ಪೋಲೀಸರು ನಿರ್ವೀರ್ಯರಾಗಿದ್ದಾರೆ ಎಂದೆಲ್ಲ ಕಳೆದ ಎರಡು ಮೂರು ತಿಂಗಳುಗಳಿಂದ ಬೊಬ್ಬಿಡುತ್ತಿರುವವರೆಂಬುದಕ್ಕೆ ಇದೊಂದೇ ಉದಾಹರಣೆ ಸಾಕು.

—೦—

ಕಿಸಾನ್ ಸಭೆಯ ಅಧಿವೇಶನ
(೯ನೇ ಪುಟದಿಂದ)

ಲ್ಲಿ ಬಂದಿಳಿದಾಗ ಸಾವಿರಾರು ಜನ ಕಿಕ್ಕಿರಿದು ನೆರೆದು ಅವರಿಗೆ ಸ್ವಾಗತ ಬಯಸಿದರು. ವಿಮಾನ ನಿಲ್ದಾಣದಿಂದ ನಲ್ವತ್ತು ಮೈಲು ದೂರದಲ್ಲಿರುವ ಬೋಂಗಾಂವಿಗೆ ಅವರು ಮೋಟಾರಿನಲ್ಲಿ ಆಗಮಿಸಿದಾಗ ಉದ್ದಕ್ಕೂ ರಸ್ತೆಯ ಪಕ್ಕಗಳಲ್ಲಿ ಜನರು ಸೇರಿ ಸ್ವಾಗತ ನೀಡಿದರು. ಸಂಜೆ ಬೋಂಗಾಂವ್‌ನಲ್ಲಿ ಜರಗಿದ ಸಾರ್ವಜನಿಕ ಸಭೆಯಲ್ಲಿ ಎರಡು ಲಕ್ಷದಷ್ಟು ಜನರ ಭಾಗವಹಿಸಿದ್ದರು.

—ಬಿ. ವಿ. ಕಕ್ಕಿಲ್ಲಾಯ

ಕರ್ನಾಟಕ ಕಾಂಗ್ರೆಸ್—ಮೈಸೂರು ರಾಜ್ಯ

ಅರಸೀಕೆರೆಯಲ್ಲಿ ನಡೆದ 'ಮೈಸೂರು ರಾಜ್ಯದ" ಪ್ರದೇಶ ಕಾಂಗ್ರೆಸ್ಸಿನ ಹೊಸ ನಾಮಕರಣ ಉತ್ಸವವೂ ಜರಗಿತು. ಅಧಿಕೃತವಾಗಿ ನಿರ್ಣಯ ಮಂಡನೆಗೆ ಒಪ್ಪದ ಅಧ್ಯಕ್ಷ ಚೆನ್ನಯ್ಯನವರು ಈ ಬಗ್ಗೆ ಅನಧಿಕೃತ ನಿಲುವಳಿಯೊಂದನ್ನು ಮಂಡಿಸಲು ಸಮ್ಮತಿ ಇತ್ತು ಅದು ಸ್ವೀಕೃತವಾಯಿತು. ಈಗದನ್ನು ಕೇಂದ್ರದ ಪರಿಶೀಲನೆಗೆ ಒಪ್ಪಿಸಲಾಗುವುದು.

ಅಂತೂ ಮೈಸೂರೇತರ ಕಾಂಗ್ರೆಸ್ಸಿಗರ ಮತ್ತು ಮೈಸೂರಿನ ಕೆಲವರ ಒತ್ತಾಯದ ಫಲವಾಗಿ ನ್ಯಾಯವಾದ ಹೆಸರೊಂದನ್ನು ಹೊತ್ತು ಕರ್ನಾಟಕ ಪ್ರದೇಶ ಕಾಂಗ್ರೆಸಾಗುವುಹುದೆಂದು ನಾವು ಭಾವಿಸೋಣ.

ನಿಜಲಿಂಗಪ್ಪನವರ ವಿರುದ್ಧ ಕತ್ತಿ ಮಸೆಯುವ ಚೆನ್ನಯ್ಯನವರು ನಿಜಲಿಂಗಪ್ಪನವರು ಮನಸ್ಸೀ ಬಯಸುವ ಹೊಸ ರಾಜ್ಯಕ್ಕೆ 'ಕರ್ನಾಟಕ' ನಾಮಾಂಕಿತದ ಮೊದಲ ಹೆಜ್ಜೆಯಾಗಿ ಇದನ್ನು ಒಪ್ಪಿರುವರೆ? ಅಲ್ಲಾ "ಕರ್ನಾಟಕ" 'ಕರ್ನಾಟಕ'ವೆಂದು ನ್ಯಾಯವಾಗಿ, ಘಂಟಾಘೋಷವಾಗಿ ಒದರುತ್ತಿರುವ ಮೈಸೂರೇತರ ಕಾಂಗ್ರೆಸ್ಸಿಗರನ್ನು ಒಲಿಸಲು, ಈ ಕಪಟ ನಾಟಕ ಹೂಡಿರುವರೇ? ಎಂಬ ಸಂಶಯ ಬರುತ್ತಿದೆ. ಯಾಕೆಂದರೆ ಚೆನ್ನಯ್ಯನವರು ಈಗ ತನಗೇ ಮುಖ್ಯ ಮಂತ್ರಿ ಸ್ಥಾನಬೇಕೆಂದು ಹಂಬಲಿಸುತ್ತಿದ್ದಾರೆಂಬುದು ಸಾರ್ವಜನಿಕ ರಹಸ್ಯವಂತೆ. ಮೈಸೂರು ರಾಜಕೀಯಕ್ಕೆ ರಾಹು ಸಮರಾದ ಈ ಸಾಹುಕಾರರು "ಸೋತು ಗೆಲ್ಲುವುದರಲ್ಲಿ" ಬಹಳ ಪ್ರವೀಣರು. ನಂಬಿಸಿ ನಡುನೀರಲ್ಲಿ ಕೈಬಿಡುವುದರಲ್ಲಿ ಎತ್ತಿದ ಕೈ.

ಇಂತಿದ್ದು ಕರ್ನಾಟಕ ನಾಮಾಂಕಿತವನ್ನು ಮೈಸೂರು ರಾಜ್ಯಕ್ಕೆ ಇಡಬೇಕೆಂದು ಹೋರಾಡುತ್ತಿರುವ ಅಭಿಮಾನಿ ಕನ್ನಡಿಗ ಕಾಂಗ್ರೆಸ್ಸಿಗರೆಲ್ಲಾ, "ಕರ್ನಾಟಕ ಪ್ರದೇಶ ಕಾಂಗ್ರೆಸ್" ಹೆಸರಲ್ಲೇ ಸಂತೃಪ್ತಿ ಹೊಂದದೆ, ಮೈಸೂರು ರಾಜ್ಯವೆಂದಿರುವ ಈ ಶತಮೂರ್ಖತನ ಪ್ರದರ್ಶಿಸುವ ಹೆಸರನ್ನು, ಕನ್ನಡ ಜನಮನದ ಉತ್ಕಟ ಇಚ್ಛೆಯಾದ, ಕನ್ನಡ ಭಾಷೆ ಸಂಸ್ಕೃತಿಯನ್ನು ಪ್ರತಿಬಿಂಬಿಸುವ 'ಕರ್ನಾಟಕ" ನಾಮಾಂಕಿತವನ್ನಾಗಿ ಪರಿವರ್ತಿಸಲು ಹೋರಾಡಲಿ!

(೬ನೇ ಪುಟದಿಂದ)

ಪಡಿಸುವುದಕ್ಕೆ ಭಾರತ ರೆಡ್‌ಕ್ರಾಸ್ ಸೊಸೈಟಿಯ ಪ್ರತಿನಿಧಿ ತಾನು ಮತ್ತಿತರರು ಸಮ್ಮೇಳನದಿಂದ ಹೊರಗೆ ಹೋಗುವೆವು. ನಾನು ಹಲವು ವರ್ಷಗಳಿಂದ ರೆಡ್‌ಕ್ರಾಸ್ ಸಂಸ್ಥೆಯ ಕಾರ್ಯಕರ್ತೆಯಾಗಿದ್ದೆ; ಇನ್ನೂ ಹಾಗೆಯೇ ಇರುವೆನು" ಎಂದು ನುಡಿದು ಅಧ್ಯಕ್ಷ ಸ್ಥಾನವನ್ನು ತ್ಯಜಿಸಿ ಹೊರ ನಡೆದರು.

ಅವರನ್ನು ಅನುಸರಿಸಿ ರಷ್ಯಾ, ಯುಕ್ರೇನ್, ಇಂಡೊನೇಷಿಯ ಈಜಿಪ್ಟ ಮತ್ತಿತರ ಅನೇಕ ದೇಶಗಳ ಪ್ರತಿನಿಧಿಗಳು ಸಭಾತ್ಯಾಗ ಮಾಡಿದರು.

ಈ ಸಭಾತ್ಯಾಗವು "ಭಯೋತ್ಪಾದಕ"ವೆಂದು ಅಮೆರಿಕಾದ ಪ್ರತಿನಿಧಿ ಟೀಕಿಸಿದುದಕ್ಕೆ ಮತ್ತೆ ರಾಜಕುಮಾರಿ ಅಮೃತಕೌರ್ ಅವರು ಉತ್ತರಕೊಡುತ್ತ, ಅಮೆರಿಕದ ಪ್ರತಿನಿಧಿಯ ಭಾಷೆಯು ರೆಡ್‌ಕ್ರಾಸ್ ಸಂಸ್ಥೆಗೆ ಯೋಗ್ಯವಾದುದಲ್ಲವೆಂದು ಟೀಕಿಸಿದ್ದಾರೆ.

ಲೋಕದ ಜನತೆಯ ಮುಂದೆ ಅಮೆರಿಕದ ಕರಾಳ ನಿಜರೂಪವನ್ನು ಮತ್ತೊಮ್ಮೆ ಬಯಲು ಮಾಡಿದಂತಾಯಿತು.

ಶಿವರಾಂ ದೇವರಾವ್ ಉಭಯಾಕರ್ ಕಂಪೆನಿಯಲ್ಲಿ 'ಲಾಕ್ ಔಟ್' ವಿರುದ್ಧ ಮುಷ್ಕರ !

ತಾ 25—10—57ರಿಂದ ಶಿವರಾವ್ ದೇವರಾವ್ ಉಭಯಾಕರ್ ಕಂಪೆನಿಯ ಮಾಲಕರು ಅನ್ಯಾಯವಾಗಿ 'ಲಾಕ್ ಔಟ್" ಜಾರಿಗೆ ತಂದಿರುವುದರ ವಿರುದ್ಧ ಕೆಲಸಗಾರರು ಶಾಂತಿಯುತವಾಗಿ, ಕಂಪೆನಿಯ ಒಳಗೆ ಮುಷ್ಕರ ಆರಂಭಿಸಿದ್ದಾರೆ. ಈ ಲಾಕ್-ಔಟ್‌ಗೆ ಕಾರಣ, ಹೆಚ್ಚಿಸಿದ ಕೆಲಸದ ಭಾರವನ್ನು ಸ್ವೀಕರಿಸಲು ಕಾರ್ಮಿಕರು ಒಪ್ಪದಿದ್ದುದೇ ಆಗಿದೆ.

ಈ ಕಂಪೆನಿಯ ಕಾರ್ಮಿಕರ ಸಂಬಳ ತುಟ್ಟಿಭತ್ತೆ ಪ್ರಶ್ನೆಗಳ ಬಗ್ಗೆ ಕನ್ಸಿಲಿಯೇಷನ್ ವಿಚಾರಣೆ ನಡೆಯುತ್ತಿದ್ದು, ಕೆಲವು ಕೇಳಿಕೆಗಳು ಟ್ರಿಬ್ಯುನಲ್‌ನಲ್ಲೂ ಇವೆ. ಇಂಡಸ್ಟ್ರೀಯಲ್ ಟ್ರಿಬ್ಯೂನಲ್ ಆ್ಯಕ್ಟಿನ 38ನೇ ಸೆಕ್ಷನ್ನು ಮಾಲಿಕರು ಉಲ್ಲಂಘಿಸಿದ್ದಾರೆ, ಅದೇ ಆ್ಯಕ್ಟಿನ ಸೆಕ್ಷನ್ 31 (1) ರ ಪ್ರಕಾರ ಮಾಲಿಕರ ಮೇಲೆ ಈ ಕಾನೂನುಬಾಹಿರ 'ಲಾಕ್ ಔಟ್" ಮಾಡಿದುದರ ವಿರುದ್ಧ ಕ್ರಮಗಳನ್ನು ಕೈಕೊಳ್ಳಬಾರದೇಕೆಂದು, ಕನ್ಸಿಲಿಯೇಷನ್ ಆಫೀಸರರು ಮಾಲೀಕರಿಗೆ ನೋಟೀಸು ಕೊಟ್ಟಿರುತ್ತಾರೆ.

ಸರಕಾರ ಕೂಡಲೇ ಈ ಕಾನೂನು ಅತಿಕ್ರಮ ಮಾಡಿದ ಮಾಲಿಕರ ಮೇಲೆ ಕ್ರಮಕೈಗೊಳ್ಳಲಿ, ಹಾಗೂ ಈ ಲಾಕ್-ಔಟ್ ಕಿತ್ತು ಕಾರ್ಮಿಕರ ಹಿತರಕ್ಷಣೆ ನಡೆಸಲಿ

ಶ್ರದ್ಧಾಂಜಲಿ ಅರ್ಪಣೆ

ವಿಶ್ವ ಕಾರ್ಮಿಕ ಮಹಾಮಂಡಲದ (W F T U) ಅಧ್ಯಕ್ಷ **ಗಿಸೆಪ್ಪಿ ಡಿ. ವಿಟ್ಟೋರಿಯೋ** ಅವರು ನಿಧನರಾದರೆಂದು ಕೇಳಿ 'ಜನಶಕ್ತಿ' ಸಂತಾಪ ಪಡುತ್ತದೆ.

ಗಿಸೆಪ್ಪಿ ಡಿ ವಿಟ್ಟೋರಿಯೋ ಜಗತ್ತಿನಲ್ಲೇ ಪ್ರಸಿದ್ಧರಾದ ಕಾರ್ಮಿಕ ನಾಯಕರಲ್ಲೊಬ್ಬರು. ತನ್ನ ಜೀವಮಾನವನ್ನೇ ಕಾರ್ಮಿಕ ವರ್ಗದ ಹಿತಸಾಧನೆಗೆ, ವಿಮೋಚನೆಗೆ ಮುಡಿಪಾಗಿಟ್ಟು ಹೋರಾಡಿದವರು.

ಇವರ ನಿಧನದಿಂದ ಪ್ರಪಂಚದ ಶ್ರಮಜೀವಿಗಳು ಒಬ್ಬ ಧುರೀಣನನ್ನು, ಯೋಧನನ್ನು ಕಳೆದುಕೊಂಡಂತಾಗಿದೆ.

ಇವರ ಅಕಾಲ ಅಂತರ್ಧಾನದಿಂದ ಸಂತಾಪಕ್ಕೆ ಒಳಗಾಗಿರುವ ಕಾರ್ಮಿಕರ ದುಃಖದಲ್ಲಿ ಜನಶಕ್ತಿಯೂ ಸಹಭಾಗಿಯಾಗಿದೆ. ಅವರ ಸ್ಮರಣೆ ಚಿರಾಯುವಾಗಲಿ, ಅವರ ಆದರ್ಶ ಈಡೇರಲಿ ಎಂದು ಹಾರೈಸಿ, ಶ್ರದ್ಧಾಂಜಲಿ ಅರ್ಪಿಸುತ್ತದೆ.

ಗಿಸೆಪ್ಪಿ ಡಿ ವಿಟ್ಟೋರಿಯೊ ಜಿಂದಾಬಾದ್ !

ವಿಶ್ವ ಕಾರ್ಮಿಕ ಮಹಾಮಂಡಲ ಚಿರಾಯುವಾಗಲಿ !

—೦—

ಜೆಕೋಸ್ಲೊವೇಕಿಯಾದ ಪ್ರಮುಖ ಕಮ್ಯೂನಿಸ್ಟ ನಾಯಕರೂ ಮತ್ತು ರಾಷ್ಟ್ರಾಧ್ಯಕ್ಷರೂ ಆದ ಪ್ರೆಸಿಡೆಂಟ್ **ಆಂಟೋನಿ ಜೆಪೋಟೋಕಿಯವರು** ೧೩-೧೦-'೫೭ ರಂದು ತಮ್ಮ ೭೨ನೇ ವಯಸ್ಸಿನಲ್ಲಿ ಮರಣ ಹೊಂದಿದರು.

ಇವರಿಗೂ 'ಜನಶಕ್ತಿ'ಯು ತನ್ನ ಶ್ರದ್ಧಾಂಜಲಿಯನ್ನರ್ಪಿಸುತ್ತದೆ.

ಧ್ರುವವಲಯದಿಂದಾಚೆ ಕೃಷಿಕ್ಷೇತ್ರ

ಧ್ರುವವಲಯದಿಂದಾಚೆಗೆ ಇರುವ ಅನೇಕ ಸಾಮೂಹಿಕ, ರಾಜ್ಯ ಕೃಷಿಕ್ಷೇತ್ರಗಳು ಪ್ರತಿ ಎಕರೆಗೂ ಈಗ ೨೦೦ ಮೆಟ್ರಿಕ್ ಸೆಂಟ್ನರುಗಳಷ್ಟು (ಸೆಂಟ್ನರ್= ೧೧೦ ಪೌಂಡು) ಆಲೂಗಡ್ಡೆಗಳನ್ನೂ ಮತ್ತು ೨೪೫ ಮೆಟ್ರಿಕ್ ಟನ್ನುಗಳಷ್ಟು ಕೋಸುಗಡ್ಡೆಗಳನ್ನೂ ಮತ್ತು ೩೦೦ ಸೆಂಟ್ನರುಗಳಷ್ಟು ಸವಿ ಮೂಲಂಗಿಗಳನ್ನೂ ಬೆಳೆಸುತ್ತಿದೆ.

ಸುದೂರ ಉತ್ತರದಲ್ಲಿ ತರಕಾರಿ ಬೆಳೆಯಲು ಇಲ್ಲಿಯ ಕೃಷಿತೋಟವು ಪ್ರಯೋಗಗಳನ್ನು ನಡೆಸುತ್ತಾ ಬಂದಿದೆ. ಇದು ಉತ್ತರ ಅಕ್ಷಾಂಶ ೬೮°ಗಳಲ್ಲಿ ಇಪ್ಪತ್ತೈದು ವರ್ಷಗಳ ಹಿಂದೆಯೇ ಸ್ಥಾಪಿತವಾಯಿತು. ಪಶುಪ್ರಜನನದ ಸಮಸ್ಯೆಯ ಬಗ್ಗೆಯೂ, ವಿಶೇಷತಃ ಶೀತವಲಯದ ಹರಿಣಗಳ ತುಪ್ಪಳ ಕೊಡುವ ಅಮೂಲ್ಯ ಪ್ರಾಣಿಗಳ ಪ್ರಜನನದ ಸಮಸ್ಯೆಯ ಬಗ್ಗೆಯೂ, ಈ ಕೇಂದ್ರವು ಕಾರ್ಯವನ್ನು ನಡೆಸುತ್ತಿದೆ. ಹಿಮದ ಮೇಲೂ ತರಕಾರಿ ಬೆಳೆಸುವದರಲ್ಲಿ ಸೋವಿಯತ್ ಸಮಾಜವಾದಿ ವ್ಯವಸ್ಥೆಗೆ ಸಾಧ್ಯವಿದೆಯೆಂದು ಇದು ತೋರಿಸಿದಂತಾಗಿದೆ.

"ತಾಸ"

ತುಮಕೂರು ಜಿಲ್ಲಾ ರೈತ ಸಮ್ಮೇಳನ

ಜಿಲ್ಲಾ ರೈತ ಸಮ್ಮೇಳನವು ಇದೇ ತಿಂಗಳ 6 ಮತ್ತು 7ನೇ ಬುಧವಾರ ಮತ್ತು ಗುರುವಾರ ತುಮಕೂರಿನ ಶ್ರೀಮತಿ ಸಾವಿತ್ರಮ್ಮನವರ ಛತ್ರದಲ್ಲಿ ನಡೆಯಿತು. ಆರು ತಾಲ್ಲೋಕುಗಳಿಂದ ಒಟ್ಟು 315 ಪ್ರತಿನಿಧಿಗಳು ಭಾಗವಹಿಸಿದ್ದರು; ತಾಲ್ಲೋಕುಗಳಿಂದ ಪ್ರತಿನಿಧಿಗಳ ಕಾಲುನಡಿಗೆಯು ಜಾಥಾ ಹೊರಟು ಹಳ್ಳಿಗಳಲ್ಲಿ ಪ್ರಚಾರ ಮಾಡುತ್ತಾ ಬುಧವಾರ ಮಧ್ಯಾಹ್ನ ತುಮಕೂರನ್ನು ತಲುಪಿದರು. ಮುಖ್ಯ ಅತಿಥಿಗಳಾಗಿ ವಿಧಾನ ಸಭಾ ಸದಸ್ಯರಾದ ಎಂ. ಸಿ. ನರಸಿಂಹನ್ ಮತ್ತು ಕರ್ನಾಟಕ ಪ್ರಾಂತ್ಯ ಕಮ್ಯೂನಿಸ್ಟ್ ಪಕ್ಷದ ಕಾರ್ಯದರ್ಶಿ ಶ್ರೀ ಎನ್. ಎಲ್. ಉಪಾಧ್ಯಾಯರು ಭಾಗವಹಿಸಿದ್ದರು.

ಉದ್ಘಾಟನಾ ಸಮಾರಂಭವು ಬುಧವಾರ ಸಂಜೆ 6 ಘಂಟೆಯಲ್ಲಿ ಶ್ರೀ ಎಂ. ಸಿ. ನರಸಿಂಹನ್‌ರಿಂದ ನೆರವೇರಿತು. ಎನ್. ಎಲ್. ಉಪಾಧ್ಯಾಯರು ಅಧ್ಯಕ್ಷತೆ ವಹಿಸಿದ್ದರು. ಶ್ರೀ ಕೆ. ಮಲ್ಲಪ್ಪನವರು ಸ್ವಾಗತ ಭಾಷಣ ಮಾಡಿದರು.

ಕೇರಳದ ಮುಖ್ಯ ಮಂತ್ರಿ ಶ್ರೀ ಇ. ಎಂ. ಎಸ್. ನಂಬೂದಿರಿಪಾದ್, ಭಾರತ ಕಮ್ಯೂನಿಸ್ಟ್ ಪಕ್ಷದ ಕಾರ್ಯದರ್ಶಿಗಳಾದ ಶ್ರೀ ಅಜಯ ಘೋಷ್, ಅಖಿಲ ಭಾರತ ಟ್ರೇಡ್ ಯೂನಿಯನ್ನಿನ ಕಾರ್ಯದರ್ಶಿ ಶ್ರೀ ಎಸ್. ಎ. ಡಾಂಗೆ, ಪಾರ್ಲಿಮೆಂಟಿನ ಸದಸ್ಯರಾದ ಶ್ರೀ ಟಿ. ನಾಗಿರೆಡ್ಡಿ ಮತ್ತು ಶ್ರೀಮತಿ ಪಾರ್ವತಿ ಕೃಷ್ಣ ಇವರುಗಳ ಶುಭ ಸಂದೇಶಗಳನ್ನು ಸಭೆಯಲ್ಲಿ ಓದಲಾಯಿತು. ಸಮ್ಮೇಳನ ನಡೆದ ಶ್ರೀಮತಿ ಸಾವಿತ್ರಮ್ಮನವರ ಛತ್ರವು ವಿದ್ಯುದ್ದೀಪಗಳಿಂದ, ತಳಿರು ತೋರಣಗಳಿಂದ ಮತ್ತು ಕೆಂಪು ಪತಾಕೆಗಳಿಂದ ಅಲಂಕರಿಸಲಾಗಿತ್ತು. ಪ್ರತಿನಿಧಿಗಳಿಗೆ ಊಟ ವಸತಿಯೇರ್ಪಡಿಸಲಾಗಿತ್ತು.

ಗುರುವಾರ ಬೆಳಿಗ್ಗೆ 9 ಘಂಟೆಯಿಂದ ಶ್ರೀ ಎನ್. ಎಲ್. ಉಪಾಧ್ಯಾಯರ ಅಧ್ಯಕ್ಷತೆಯಲ್ಲಿ ಪ್ರತಿನಿಗಳ ಸಭೆ ಜರಗಿತು. ತಾಲ್ಲೋಕು ರೈತ ಸಮಸ್ಯೆಗಳ ಬಗ್ಗೆ ಪ್ರತಿನಿಧಿಗಳು ಮಾತನಾಡಿ, ಚರ್ಚೆ ನಡೆಯಿಸಿ ಕೆಲವು ತೀರ್ಮಾನಕ್ಕೆ ಬಂದರು.

ಜತ್ತಿ ಸಮಿತಿಯ ವರದಿ ಬಗ್ಗೆ ಕೂಲಂಕುಷವಾಗಿ ಚರ್ಚೆ ನಡೆಯಿಸಿ ಕೆಲವು ಮುಖ್ಯವಾದ ತಿದ್ದುಪಡಿಗಳು ಅವಶ್ಯಕವೆಂದು ತೀರ್ಮಾನಿಸಿದರು ಮತ್ತು ತಮ್ಮ ಸಲಹೆಗಳನ್ನು ಸೂಚಿಸಲಾಯಿತು.

ಮಧ್ಯಾಹ್ನ 2 ಗಂಟೆಗೆ ಪ್ರತಿನಿಧಿಗಳು ಸಭೆ ಸೇರಿ ತಾಲ್ಲೋಕು ಸಮಸ್ಯೆಗಳ ಬಗೆ 9 ನಿರ್ಣಯಗಳನ್ನೂ, ಜತ್ತಿ ಸಮಿತಿಯ ವರದಿ ಬಗ್ಗೆ, ಕೆಲವು ಪುರೋಗಾಮಿ ತಿದ್ದುಪಡಿಗಳನ್ನೂ ಮತ್ತು ಇತರೇ ಮೂರು ನಿರ್ಣಯಗಳನ್ನೂ ಮಂಡಿಸಲಾಯಿತು. ಇವೆಲ್ಲವೂ ಸರ್ವಾನುಮತದಿಂದ ಸ್ವೀಕೃತವಾದುವು ಮತ್ತು 15 ಜನ ಸದಸ್ಯರನ್ನೊಳಗೊಂಡ ಕಾರ್ಯಕಾರಿ ಸಮಿತಿಯೊಡನೆ "ತುಮಕೂರು ಜಿಲ್ಲಾ ರೈತ ಸಂಘ"ವನ್ನು ಸ್ಥಾಪಿಸಲಾಯಿತು.

ನಿರ್ಣಯಗಳು :

ಜತ್ತಿ ಸಮಿತಿಯ ಶಿಫಾರಸಿನ ಪ್ರತಿಗಾಮಿ ಅಂಶಗಳನ್ನು ಕಿತ್ತೆಸೆದ, ರೈತರ ಹಿತರಕ್ಷಣೆ ಮಾಡುವ ಕಾನೂನನ್ನು ಜಾರಿಗೊಳಿಸಬೇಕೆಂಬ; ಇದರಲ್ಲಿ ಮುಖ್ಯವಾಗಿ ಗೇಣಿಯ ಪ್ರಮಾಣ $\frac{1}{6}$ ಭಾಗದಷ್ಟು, ಪರಮಾವಧಿಯ ಮಟ್ಟ ಒಟ್ಟು ಆದಾಯ 4,800 ಕ್ಕೂ ಮೀರಿ ಕುಟುಂಬಕ್ಕೆ ಈಯಬಾರದು. ಜಮೀನಿನಲ್ಲಿ ದುಡಿಯುವವನನ್ನು ಮಾತ್ರ ಸ್ವಂತ ಸಾಗುವಳಿದಾರನನ್ನಾಗಿ ಪರಿಗಣಿಸಬೇಕೆಂಬ, ಸರಕಾರ ಕಾನೂನು ಮಾಡುವ ಕಾಲದಲ್ಲಿ ಈ ಅಂಶಗಳನ್ನು ಗಮನಿಸಬೇಕೆಂದು ಒತ್ತಾಯಿಸುವ ನಿರ್ಣಯಗಳನ್ನು ಸ್ವೀಕರಿಸಲಾಯಿತು.

ಅಲ್ಲದೆ ಇನಾಂ ಗ್ರಾಮಗಳಲ್ಲಿ ಭೂಮಿ ಸರ್ವೆ ಕಾಲದಲ್ಲೂ, ಗೇಣಿ ರಿಜಿಸ್ಟರು ಬರೆಯುವ ಸಂದರ್ಭದಲ್ಲೂ ರೈತರಿಗೆ ಪರಮ ದ್ರೋಹ ಬಗೆಯಲಾಗುವ ಕಾರಣ, ಈಸಂದರ್ಭದಲ್ಲಿ ರೈತ ಸಂಘಕ್ಕೆ ತಿಳಿಸಿಯೇ ಇದನ್ನು ಮುಂದುವರಿಸಬೇಕೆಂಬ, ಗೋಮಾಳದ ಭೂಮಿಯನ್ನು ಸಿರಿವಂತರು ಎಷ್ಟೋ ಕಡೆಯಲ್ಲಿ ಆಕ್ರಮಿಸಿದ್ದು, ಅವರನ್ನು ಈ ಭೂಮಿಯಿಂದ ಎಬ್ಬಿಸಿ ಇದರ ಉಪಯೋಗ ಮತ್ತು ಮಾಲಿಕತ್ವವನ್ನು ರೈತರಿಗೆ ನೀಡಬೇಕೆಂಬ, 1952ನೇ ಇಸವಿಯಿಂದೀಚೆಗೆ ಒಕ್ಕಲೆಬ್ಬಿಸಲ್ಪಟ್ಟ ರೈತರಿಗೆ ಸರ್ಕಾರ ಪುನಃ ಭೂಮಿಯನ್ನು ಬಿಡಿಸಿಕೊಡಬೇಕೆಂಬ ಮತ್ತು ಇನಾಂ ರದ್ದಿಯಾತಿ, ವ್ಯವಸಾಯದಲ್ಲಿ ಉಪಯೋಗಿಸುತ್ತಿರುವ ವಿದ್ಯುಚ್ಛಕ್ತಿ ಶುಲ್ಕ ಬಗ್ಗೆ, ಮತ್ತಿತರ ರೈತರ ಸಮಸ್ಯೆಗಳ ಬಗ್ಗೆ ಹಲವಾರು ನಿರ್ಣಯಗಳಾದುವು. ಕೊನೆಯದಾಗಿ, ಕೇರಳ ಸರಕಾರವನ್ನು ಸ್ವಾಗತೀಕರಿಸುವ, ಅಕ್ಟೋಬರ್ ಮಹಾ ಕ್ರಾಂತಿಯ 40ನೇ ವಾರ್ಷಿಕೋತ್ಸವದಂದು ಸೋವಿಯತ್ ರಷ್ಯಾವನ್ನು ಅಭಿನಂದಿಸುವ, ಪಾಶ್ಚಾತ್ಯರ ಕುಹಕಕ್ಕೆಡೆಮಾಡಕ್ಕೆ ಬಾಗದೆ ಸಿರಿಯ ನಡೆಸುತ್ತಿರುವ ಹೋರಾಟಕ್ಕೆ ಬೆಂಬಲವೀಯುವ ನಿರ್ಣಯಗಳೂ ಸ್ವೀಕರಿಸಲ್ಪಟ್ಟವು.

ಅಧಿಕಾರ ವರ್ಗಕ್ಕೆ ಚುನಾವಣೆ

ಶ್ರೀ ಕೃಷ್ಣಸ್ವಾಮಿ ಕೆ. ವಿ. ಅಧ್ಯಕ್ಷರನ್ನಾಗಿಯೂ, ಶ್ರೀ ಕೆ ಮಲ್ಲಣ್ಣ ಮತ್ತು ಶ್ರೀ ಟಿ. ಆರ್. ರೇವಣ್ಣರವರನ್ನು ಉಪಾಧ್ಯಕ್ಷರನ್ನಾಗಿಯೂ, ಶ್ರೀ ಟಿ. ಎಲ್. ತಿಮ್ಮ ಮತ್ತು ಶ್ರೀ ಹೆಚ್. ಸಿ. ಚನ್ನಪ್ಪನವರನ್ನು ಕಾರ್ಯದರ್ಶಿಗಳನ್ನಾಗಿಯೂ, ಶ್ರೀ ಎ. ಆರ್. ಅಡವೀಶ್‌ರವರನ್ನು ಖಜಾಂಚಿಗಳನ್ನಾಗಿಯೂ, ಚುನಾಯಿಸಲಾಯಿತು; ಮತ್ತು ಕಾರ್ಯಕಾರಿ ಸಮಿತಿ ಸದಸ್ಯರುಗಳಾಗಿ ಈ ಕೆಳಗಿನವರನ್ನು ಚುನಾಯಿಸಲಾಯಿತು:

ಕುಣಿಗಲ್: ಶ್ರೀಗಳಾದ ಚಿಕ್ಕಣ್ಣ ಗೌಡರು, ಸೋಮಯ್ಯನವರು. ಮಧುಗಿರಿ: ಶ್ರೀಗಳಾದ ಪಿ. ನಾರಾಯಣ ರೆಡ್ಡಿ, ರಂಗೇಗೌಡರು. ಗುಬ್ಬಿ: ಶ್ರೀಗಳಾದ ಹೆಚ್. ವಿ. ಪುಟ್ಟಸ್ವಾಮಯ್ಯ, ಹೆಚ್. ಟಿ. ಸಿದ್ದರಾಮಯ್ಯ. ಪಾವಗಡ: ಶ್ರೀಗಳಾದ ಪಿ. ತಿಪ್ಪೇಸ್ವಾಮಿ, ಶಂಕರನಾರಾಯಣ ರಾವ್. ತುಮಕೂರು: ಶ್ರೀಗಳಾದ ವಿ. ಚಿಕ್ಕವೀರಯ್ಯ, ಟಿ. ಗುರುಸಿಂಹೆ ಇನ್ನೂ ಐದು ಜನ ಸದಸ್ಯರ ಹೆಸರುಗಳನ್ನು ಕಾದಿಡಲಾಯಿತು.

ರೈತರಂಗ

ಪ್ರಚಂಡ ಮೆರವಣಿಗೆ

ಸಂಜೆ 4 ಗಂಟೆಗೆ ಪ್ರತಿನಿಧಿಗಳು ಊರಿನ ಪ್ರಮುಖ ಬೀದಿಗಳಲ್ಲಿ ಮೆರವಣಿಗೆ ಹೊರಟರು. ಅಕ್ಟೋಬರ್ ಮಹಾ ಕ್ರಾಂತಿ ದಿನಾಚರಣೆಯ ಅಂಗವಾಗಿ ತುಮಕೂರು ಮುನಿಸಿಪಲ್ ಕೆಲಸಗಾರರು ಇವರೊಡನೆ ಭಾಗಿಗಳಾಗಿದ್ದರು. "ಉಳುವವನಿಗೆ ಹೊಲ," "ರೈತರನ್ನು ಒಕ್ಕಲೆಬ್ಬಿಸುವುದನ್ನು ನಿಲ್ಲಲಿ" "ಸಾಮಾನ್ಯ ಜನರ ಮೇಲಿನ ತೆರಿಗೆ ಕಡಿಮೆಯಾಗಲಿ" "ರೈತ-ಕಾರ್ಮಿಕರ ಸ್ನೇಹ ಬಲಗೊಳ್ಳಲಿ" "ಯುದ್ಧ ಬೇಡ ಶಾಂತಿ ಬೇಕು" "ಅಕ್ಟೋಬರ್ ಮಹಾ ಕ್ರಾಂತಿ ಚಿರಾಯುವಾಗಲಿ" "ಟಿ. ಟಿ. ಕೆ. ಯನ್ನು ಹೊರ ದೂಡಿರಿ" ಮುಂತಾದ ಘೋಷಣೆಗಳನ್ನು ಮಾಡುತ್ತಾ, ಪ್ಲಕಾರ್ಡುಗಳನ್ನು ಮತ್ತು ಕೆಂಬಾವುಟಗಳನ್ನು ಹಾರಿಸುತ್ತಾ ಪ್ರಚಂಡ ಮೆರವಣಿಗೆ ನಡೆಯಿತು.

ಸಂಜೆ 6-30 ಘಂಟೆಗೆ ಬಹಿರಂಗ ಸಭೆ ಜರಗಿತು. ರೈತ ಸಂಘದ ಅಧ್ಯಕ್ಷರಾದ ಶ್ರೀ ಕೆ. ವಿ. ಕೃಷ್ಣಸ್ವಾಮಿಯವರು ಅಧ್ಯಕ್ಷತೆ ವಹಿಸಿದ್ದರು. ಶ್ರೀಗಳಾದ ಎಂ. ಸಿ. ನರಸಿಂಹನ್ ಮತ್ತು ಎನ್. ಎಲ್. ಉಪಾಧ್ಯಾಯ ಮತ್ತಿತರರೂ ಭಾಷಣ ಮಾಡಿದರು.

ರಾತ್ರಿ 8 ಘಂಟೆಯಿಂದ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಏರ್ಪಡಿಸಲಾಗಿತ್ತು. ಈ ಕಾರ್ಯಕ್ರಮದ ಮುಖ್ಯ ಅಂಗವಾಗಿ ಆಂಧ್ರದಿಂದ ಬಂದಿದ್ದ ಬುರ್ರ ಕಥಾದವರು, "ರೈತ ವಿಜಯ" ಎಂಬ ಕಥೆಯನ್ನು ಹಾಡಿನ ರೂಪದಲ್ಲಿ ಹಾಡಿ ತೋರಿಸಿದರು. ಶ್ರೀ ಮಲ್ಲೇಶಯ್ಯನವರಿಂದ ಪಿಟೀಲು ವಾದನವೂ ಶ್ರೀ ಟಿ. ವಿ. ರಾಜುರವರಿಂದ ಭಾವಗೀತೆಗಳನ್ನೂ ಮತ್ತು ಶಿಟ್ಟಹಳ್ಳಿಯವರಿಂದ ಯಕ್ಷಗಾನವೂ ನಡೆಯಿತು.

ಸ್ವಾಗತ ಸಮಿತಿಯ ಕಾರ್ಯದರ್ಶಿಗಳಾದ ಶ್ರೀ ಟಿ. ಎ. ಮಂಜುನಾಥ್‌ರವರ ವಂದನಾರ್ಪಣೆಯೊಂದಿಗೆ ಕಾರ್ಯಕ್ರಮಗಳು ಮುಕ್ತಾಯವಾದುವು.

—oo—

ಓದುಗರ ಓಲೆ

ಸ್ವಾಮಿ,

ಟ್ರಾಕ್ಟರಿನಿಂದ ಒಂದು ಎಕರೆ ಜಮೀನನ್ನು ಉಳುಮೆ ಮಾಡಿಸಲು ಇಪ್ಪತ್ತೈದು ರೂಪಾಯಿಗಳು ಮಾಡಿರುವುದರಲ್ಲಿರುವ ಏನೆಂದು ರೈತರ ಹಿತಸಾಧನೆಗೆ ಅರ್ಥವಾಗುತ್ತಿಲ್ಲ. ಕೇವಲ ಟ್ರಾಕ್ಟರಿನಿಂದ ಉಳುಮೆಗಾಗಿ ಇಪ್ಪತ್ತೈದು ರೂಪಾಯಿಗಳು ಕೊಡಬೇಕಾದಲ್ಲಿ, ಇತರೇ ಖರ್ಚುಗಳು ಎಷ್ಟು ಆಗುತ್ತೆ! ಮತ್ತು ಬೆಳೆ ನಮ್ಮ ಕೈಸೇರಬೇಕಾದರೆ ಎಷ್ಟುಕಾಲ ಹಿಡಿಯುತ್ತೆ! ನಮ್ಮ ಜಮೀನುಗಳ ಎಷ್ಟು ಮಾತ್ರ ಫಲವತ್ತಾಗಿದೆ, ಎಂಬುದರ ಬಗ್ಗೆ ವ್ಯವಸಾಯದ ಇಲಾಖೆಯ ಡೈರೆಕ್ಟರ್‌ರವರು ಊಹಿಸಲು ಸಹಾ ಅಶಕ್ತರಾಗಿರಬಹುದು. ಇಲ್ಲವಾದರೆ ಜವಾಬ್ದಾರಿಯುತರಾದ ಡೈರೆಕ್ಟರ್‌ರವರು ಯಾಕೆ ಸರಿಯಾದ ಸಲಹೆಗಳನ್ನು ಕೊಟ್ಟು ರೈತರಿಗೆ ಅನ್ಯಾಯವಾಗದಂತೆ ನೋಡಬಾರದು?

ಫಲವತ್ತಾದ ಜಮೀನುಗಳು ಒಳ್ಳೆ ಬೆಳೆ ತೆಗೆಯುತ್ತಿರುವ ಆಂಧ್ರ ಪ್ರದೇಶದಲ್ಲಿ ಎಕರೆ ಒಂದಕ್ಕೆ ಟ್ರಾಕ್ಟರಿನಿಂದ ಉಳುಮೆಗೆ ೧೨ ರೂ. ಯಂತೆ ನಿಗದಿ ಮಾಡಿರುವಾಗ, ಇಲ್ಲಿ ಈ ರೀತಿ ಉಳುಮೆ ಮಾಡಿಸಲು ದಿನದಿನಕ್ಕೂ ಬೆಲೆಯನ್ನು ಹೆಚ್ಚಿಸುತ್ತ ಬರುವುದು ನ್ಯಾಯವಲ್ಲ.

ರೈತರು ಸುಖವಾಗಿದ್ದಲ್ಲಿ ದೇಶವುಸಮೃದ್ಧಿಯಾಗಿ, ಯಾವ ಕೊರತೆಯೂ ಇಲ್ಲದೆ, ಇರುತ್ತೆ ಎಂಬ ಹಳೆಯ ಗಾದೆಯನ್ನು ಸುಳ್ಳಿನ ಕಂತೆಯೆಂದು ಯಾರು ತಾನೆ ಹೇಳಬಲ್ಲರು! ಆದರೆ ಈಗಿನ ನಮ್ಮ ಬಡ ರೈತರ ಸ್ಥಿತಿ ಏನಾಗಿದೆ! ಎಂಬುದು ತಾವು ಗಮನಿಸಿ, ತಾವುಗಳು, ಕೊಟ್ಟಿರುವ ಓಟಿನ ಚೀಟಿಗಳ ಕಡೆಗೆ ಗಮನ ಸೆಳೆದು, ಬಡ ರೈತರಾದ ನಮಗೆ, ಸಹಾಯ ಮಾಡಬೇಕಾಗಿ ಕೋರುತ್ತೇವೆ.

ರೈತರ ಅಭಿವೃದ್ಧಿಗಾಗಿ ಎಷ್ಟೋ ಯೋಜನೆಗಳಲ್ಲಿ ಇದೂ ಒಂದು ಆಗಿರುತ್ತೆ, ಆದ್ದರಿಂದ ರೈತರಿಗೆ ಅನಾನುಕೂಲ ಮಾಡುವುದು ಸರಿಯಲ್ಲವೆಂದು ಇಲಾಖೆಯ ಡೈರೆಕ್ಟರ್‌ರವರಿಗೆ ತಿಳಿಸುತ್ತೇವೆ. ಕನಿಷ್ಟ ಪಕ್ಷ ಒಂದು ಎಕರೆ ಉಳುಮೆಗೆ ಹನ್ನೆರಡು ರೂಪಾಯಿನಂತೆ [12-0-0] ಬಡ ರೈತರಿಗೆ ಸಕಾಲಕ್ಕೆ ಟ್ರಾಕ್ಟರುಗಳಿಂದ ಸಹಾಯವಾಗಲೂ ಆಜ್ಞೆ ಹೊರಡಿಸಿರೆಂದು ಮೈಸೂರು ರಾಜ್ಯದ ವ್ಯವಸಾಯ ಶಾಖೆಯ ಮಾನ್ಯ ಸಚಿವರಲ್ಲಿ ಕೋಲಾರದ ಬಡ ರೈತರೆಲ್ಲಾ ಒಗ್ಗಟ್ಟಾಗಿ ದಸ್ಕತು ಮಾಡಿದ ಈ ಮೇಲಿನ ಮನವಿಯನ್ನು ಸಲ್ಲಿಸಿದ್ದಾರೆ. ಮತ್ತಿತರ ಸಂಬಂಧಪಟ್ಟ ವ್ಯವಸಾಯ ಇಲಾಖೆಯ ಅಧಿಕಾರಿಗಳಿಗೂ ಈ ಬಗ್ಗೆ ತಿಳಿಸಿದ್ದಾರೆ. ಮಾನ್ಯ ಮಂತ್ರಿಗಳು ಈ ರೀತಿ ರೈತರ ಸುಲಿಗೆ ನಡೆಸುವುದನ್ನು ಇನ್ನಾದರೂ ನಿಲ್ಲಿಸುವರೆ? ಆಂಧ್ರದಲ್ಲಿ ಟ್ರಾಕ್ಟರು ಉಳುಮೆಗೆ ರೂ 12 ಇರುವಾಗ ನಮ್ಮ ಅನ್ನಕ್ಕಿಲ್ಲದ ಬಡರೈತರಿಂದ ರೂ 25/- ವಸೂಲು ಮಾಡುವ ಈ ಅನ್ಯಾಯದ ಸೂರೆಯನ್ನು ನಿಲ್ಲಿಸುವರೆ? ಅಥವಾ ನಮ್ಮ ರೈತರು ಸಿರಿವಂತರೆಂದು ಒಂದು ವೇಳೆ ಈ ಸಚಿವರು ಭಾವಿಸಿದ್ದರೆ ಅಂಥಾ ವಿಕಲ್ಪಮತಿಯನ್ನು ಇನ್ನಾದರೂ ಸರಿಗೊಳಿಸುವರೆ ?

ಬಡರೈತರು, ಕೋಲಾರ

ಮಂಗಳೂರು ಪತ್ರ

ಕ್ರಾಂತಿ ದಿನದ ಸಂಭ್ರಮದ ಆಚರಣೆ

ನವಂಬರ—7. ರಷ್ಯದ ಸಮಾಜವಾದಿ ಕ್ರಾಂತಿಯ ನಲವತ್ತನೇ ವರ್ಧಂತಿ ಮಂಗಳೂರಿನಲ್ಲಿ ಅತ್ಯಂತ ಸಂಭ್ರಮದಿಂದ—ಕಳೆದ ಹತ್ತು ವರ್ಷಗಳಲ್ಲಿ ಇಷ್ಟು ವಿಜೃಂಭಣೆಯಿಂದ ಕ್ರಾಂತಿ ದಿನಾಚರಣೆ ನಡೆದುದಿಲ್ಲ—ಆಚರಿಸಲಾಯಿತು. ಪ್ರಾತಃಕಾಲ ವಿವಿಧ ಪ್ರದೇಶಗಳಿಂದ ಪ್ರಭಾತ ಫೇರಿಗಳು ಹೊರಟು ಬಂದು ಕೇಂದ್ರ ಮೈದಾನದಲ್ಲಿ ಸೇರಿತು. ಶ್ರೀ ಸಿ. ಎಂ. ನಾರಾಯಣಮೂರ್ತಿಯವರಿಂದ ಧ್ವಜ ವಂದನೆ ನಡೆಯಿತು.

ಸಂಜೆ 3 ಗಂಟೆಗೆ ವಿವಿಧ ಪ್ರದೇಶಗಳಿಂದ ಮೆರವಣಿಗೆಗಳು ಹೊರಟವು. ಈ ದಿನಾಚರಣೆಗೆ ಬೇಕಾಗಿ 6,000 ಕಾಗದದ ಕೆಂಬಾವುಟಗಳನ್ನು ಮಾಡಿಸಲಾಗಿತ್ತು. ಮೆರವಣಿಗೆಗಾರರಲ್ಲಿ ಪ್ರತಿಯೊಬ್ಬರ ಕೈಯಲ್ಲೂ ಕೆಂಬಾವುಟಗಳಿದ್ದು — ಮೆರವಣಿಗೆ ಚಲಿಸವಾಗ ಕೆಂಬಾವುಟದ ತೆರೆಗಳೇ ಚಲಿಸುವುವೋ ಎಂಬಂತೆ ಕಾಣುತ್ತಿತ್ತು. ಸಾವಿರಾರು ಮಜೂರರು-ಸಾರ್ವಜನಿಕರು ಚಿಕ್ಕ ಮಕ್ಕಳ ಆದಿಯಾಗಿ ಈ ಮೆರವಣಿಗೆಯಲ್ಲಿ ಭಾಗವಹಿಸಿದ್ದರು. ವಿಶೇಷತಃ ಸ್ತ್ರೀ ಮಜೂರರು ಘೋಷಣೆಗಳನ್ನು ಹೇಳುತ್ತ ಬಹು ಸಂಖ್ಯೆಯಲ್ಲಿ ಈ ಮೆರವಣಿಗೆಗೆ ಬಂದಿದ್ದರು. ಬೋಳಾರ, ಜಪ್ಪು, ಕಂಕನಾಡಿ, ಪಡೀಲು, ಕುಲಶೇಖರ, ಕೊಂಚಾಡಿ, ದೇರೆಬೈಲ್, ಉರ್ವ, ಬೋಳೂರು, ಕುದ್ರೋಳಿ ಹೀಗೆ ಹಲವು ಕಡೆಗಳಿಂದ ಬಂದ ಈ ಮೆರವಣಿಗೆಗಳು ಕೇಂದ್ರ ಮೈದಾನವನ್ನು ತಲುಪಿದವು.

ಆಕಾಶವು ಮೋಡಗಳಿಂದ ತುಂಬಿದ್ದರೂ, ಮಳೆ ಬರುವ ಚಿನ್ಹೆಗಳಿದ್ದರೂ ಕೇಂದ್ರ ಮೈದಾನದ ಸಭೆ ಅತಿ ಯಶಸ್ವಿಯಾಗಿತ್ತು.

ಪ್ರಾರಂಭದಲ್ಲಿ ಶ್ರೀ ಬಿ. ನಾರಾಯಣರವರು ಸಭಿಕರನ್ನು ಸ್ವಾಗತಿಸಿದರು.

ಸಭೆಯ ಅಧ್ಯಕ್ಷತೆಯನ್ನು ಜಿಲ್ಲಾ ಸಮಿತಿಯ ಕಾರ್ಯದರ್ಶಿ ಶ್ರೀ ಎ. ಕೃಷ್ಣ ಶೆಟ್ಟರು ವಹಿಸಿದ್ದರು.

ಅಕ್ಟೋಬರ ಕ್ರಾಂತಿಯ ಮಹತ್ವ, ಅದು ಲೋಕದ ಮರ್ಧಿತ ಜನತೆಯ ಮೇಲೆ ಬೀರಿದ ಪ್ರಭಾವ, ಸಮಾಜವಾದಿ ಪದ್ಧತಿಯ ಶ್ರೇಷ್ಟತೆ, ರಷ್ಯಾ ಭಾರತಗಳೊಳಗೆ ಗಾಢವಾಗುತ್ತಿರುವ ಮೈತ್ರಿ, ಇವನ್ನೆಲ್ಲ ವಿವರಿಸಿ ಶ್ರೀಗಳಾದ ಎ. ಶಾಂತರಾಮ್ ಪೈ, ಕೆ. ಮೋನಪ್ಪ ಶೆಟ್ಟಿ, ಎಚ್. ಉಮಾನಾಥ ನ್ಯಾಕ್, ಬಿ. ಲಿಂಗಪ್ಪ ಸುವರ್ಣ ಮೊದಲಾದವರು ಭಾಷಣವಿತ್ತರು. ರಷ್ಯನ್ ಜನತೆಗೆ ಶುಭಾಶಯ ನೀಡುವ ಠರಾವೊಂದನ್ನು ಸಭೆ ಅಂಗೀಕರಿಸಿತು.

ಭಾರತ ರಷ್ಯಾ ಸಾಂಸ್ಕೃತಿಕ ಸಂಘದಲ್ಲಿ

ಭಾರತ-ರಷ್ಯಾ ಸಾಂಸ್ಕೃತಿಕ ಸಂಘದ ಆಶ್ರಯದಲ್ಲಿಯೂ ಗಣಪತಿ ಹೈಸ್ಕೂಲಿನಲ್ಲಿ ಕ್ರಾಂತಿ ದಿನದ ಸಂಬಂಧವಾಗಿ 'ರಷ್ಯಾ-ಭಾರತ ಮೈತ್ರಿ' ದಿನವನ್ನು ಅಂದೇ ಸಂಜೆ ಆಚರಿಸಲಾಯಿತು. ಜಿಲ್ಲಾ ಬೋರ್ಡಿನ ಅಧ್ಯಕ್ಷ ಶ್ರೀ ಬಿ. ಮಂಜಯ್ಯ ಹೆಗ್ಡೆಯವರು ಅಧ್ಯಕ್ಷತೆ ವಹಿಸಿದ್ದರು.

ಸಂಘದ ಅಧ್ಯಕ್ಷ ಡಾ॥ ಯಂ. ಉಮೇಶರಾಯರು ಸಭಿಕರನ್ನು ಸ್ವಾಗತಿಸಿದ ಬಳಿಕ ಕಸ್ತೂರಿಬಾ ಮೆಡಿಕಲ್ ಕಾಲೇಜಿನ ನಿವೃತ್ತ ಡೀನ್ ಡಾ॥ ಮಂಗೇಶರಾವ್ ಎಫ್. ಆರ್. ಸಿ. ಎಸ್. ಇವರು ರಷ್ಯದ ಕ್ರಾಂತಿಯು ಮಾನವ ಸಮುದಾಯದ ಏಳಿಗೆಗಾಗಿ ಹೇಗೆ ಕಾರ್ಯ ಕೈಗೊಂಡಿದೆಯೆಂದೂ ಇಂದು ರಷ್ಯಾ ವೈಜ್ಞಾನಿಕವಾಗಿ, ಸಾಂಸ್ಕೃತಿಕವಾಗಿ ಔದ್ಯೋಗಿಕವಾಗಿ ಹೇಗೆ ಲೋಕದ ಇತರ ಎಲ್ಲ ರಾಷ್ಟ್ರಗಳನ್ನು ಮೀರಿಸಿದೆ ಎಂದೂ, ಶೋಧನೆಗಳನ್ನು ಸಂಸ್ಕೃತಿಯನ್ನು, ಉತ್ಪಾದನೆಯನ್ನು, ಕೆಲವರ ಲಾಭಕ್ಕಾಗಿ ಉಪಯೋಗಿಸುವ ಸಮಾಜ ಪದ್ಧತಿಯಡಿಯಲ್ಲಿ ಹೀಗೆ ಅದ್ಭುತ ಪ್ರಗತಿ ಸಾಧಿಸಲು ಸಾಧ್ಯವಿಲ್ಲವೆಂದೂ ಹೇಳಿದರು. ಭಾರತದ ಜನತೆ ರಷ್ಯದ ಜನತೆಯ ಶಿಸ್ತು, ಅವರ ಆತ್ಮ ವಿಶ್ವಾಸ ದೇಶಕ್ಕಾಗಿ, ಅವರು ಮಾಡುವ ತ್ಯಾಗ ಇವುಗಳಿಂದ ಪಾಠ ಕಲಿಯಲಿಕ್ಕಿದೆ ಎಂದೂ ತಿಳಿಸಿದರು.

ಶ್ರೀ ಎ. ಶಾಂತಾರಾಮ ಪೈಯವರು ತನ್ನ ಸೋವಿಯತ್ ಸಂದರ್ಶನವನ್ನು ವಿವರಿಸಿ ರಷ್ಯದ ಜನತೆ ಭಾರತವ ಜನತೆಯನ್ನು ಅತ್ಯಂತ ಸೌಹಾರ್ದತೆಯಿಂದ, ವಿಶ್ವಾಸದಿಂದ ಕಾಣುತ್ತಿದ್ದಾರೆಂದೂ, ಭಾರತದ ಪ್ರಧಾನಿಯವರು ರಷ್ಯದಲ್ಲಿ ಅತ್ಯಂತ ಹೆಚ್ಚು ಪರಿಚಯವುಳ್ಳವರೆಂದೂ, ಭಾರತದ ಶಾಂತಿನೀತಿಯನ್ನು ರಷ್ಯನರು ಅತಿಯಾಗಿ ಮೆಚ್ಚುವರೆಂದೂ ತಿಳಿಸಿದರು.

ಸಭಾಧ್ಯಕ್ಷರು ಮಾತನಾಡುತ್ತಾ, ರಷ್ಯದ ಕ್ರಾಂತಿ ದಿನವನ್ನು ನಾವೇಕೆ ಆಚರಿಸಬೇಕೆಂಬ ಪ್ರಶ್ನೆಯುದ್ಭವಿಸುವುದು ಸಹಜ. ಆದರೆ ಮಾನವತೆಯ ಮುನ್ನಡೆಯನ್ನು ಸಾಧಿಸಿದ ಸಂಭವ ಎಲ್ಲಿ ನಡೆದರೂ ಅದನ್ನು ಪ್ರತಿಯೊಬ್ಬರೂ ಆಚರಿಸಬೇಕಾದುದು ಅಗತ್ಯ" ಎಂದು ಹೇಳಿ, ರಷ್ಯ—ಭಾರತಗಳ ಮೈತ್ರಿ ಇನ್ನಷ್ಟು ವೃದ್ಧಿಯಾಗಲಿ! ಎಂದು ಹಾರೈಸಿದರು.

ಡಾ॥ ಎಂ. ಎಸ್. ಶಾಸ್ತ್ರಿಗಳು ವಂದನಾರ್ಪಣೆ ಮಾಡಿದರು. ನಂತರ ಚಲಚಿತ್ರ ಪ್ರದರ್ಶನ ನಡೆಯಿತು.

ಇಂಡಸ್ಟ್ರಿಯಲ್ ಟ್ರಿಬ್ಯೂನಲ್‌ನ ಆಗಮನ

ಜಿಲ್ಲೆಯ ಸಂಘಟಿತ ಮಜೂರರ ಒತ್ತಾಯದ ಪರಿಣಾಮವಾಗಿ ಮೈಸೂರು ಸರಕಾರ ನಿಯಮಿಸಿದ್ದ ಇಂಡಸ್ಟ್ರಿಯಲ್ ಟ್ರಿಬ್ಯುನಲ್ ಕಳೆದ ಅಕ್ಟೋಬರ್ 29-30 ರಂದು ಮಂಗಳೂರಿಗೆ ಆಗಮಿಸಿ ಹಲವು ಕೈಗಾರಿಕಾ ವಿವಾದಗಳ ಪ್ರಥಮ ಪರಿಶೀಲನೆ ನಡೆಸಿತು.

ವಿಜಾರ್ ಗೇರುಬೀಜ ಕಾರ್ಖಾನೆಯ 1,125 ಮಜೂರರ 1955ರ ಬೋನಸಿನ, ಬಗ್ಗೆ ದುರ್ಗಾ [ಪರಮೇಶ್ವರಿ ಮೋಟಾರ್ ಸರ್ವೀಸಿನ ರನ್ನಿಂಗ್ ಸ್ಟಾಫಿನ ಪ್ರಾವಿಡೆಂಟ್ ಫಂಡ್ ಕುರಿತಾದ, ಮಂಗಳೂರಿನ 31 ಹೆಂಚಿನ ಕಾರ್ಖಾನೆಗಳ ಮಜೂರರ ಮೂಲಕೂಲಿಯಲ್ಲಿ ಹೆಚ್ಚಳವಾಗಬೇಕೆಂಬ ಮಂಗಳೂರಿನ 26 ನೇಯ್ಗೆ ಕಾರ್ಖಾನೆಗಳ ಕೂಲಿ ಭಡತಿ, ಬೋನಸ್ ಪ್ರಶ್ನೆ, ಕಲ್ಯಾಣಪುರದ ವಿಜಯ ಹಂಚಿನ ಮಜೂರರ ಕೂಲಿ [illegible]ಧರಿಯ ಕುರಿತು, ಮೆಹರ್‌ಲಂ[illegible]೦ ಮಾಲಿಕರ-ಟ್ಯಾಕ್ಸಿ ಡ್ರೈವರ್‌ಗಳ ಬೋನಸಿನ ಪ್ರಶ್ನೆ, ಈ ಎಲ್ಲ ವಿವಾದಗಳ ಕುರಿತು ಟ್ರಿಬ್ಯುನಲ್ ಕೆಲವು ಪರಿಶೀಲನೆಗಳನ್ನು ನಡೆಸಿತು.

ಕನಿಷ್ಟ ಕೂಲಿ ಸಲಹಾ ಬೋರ್ಡಿಗೆ ಕಾರ್ಮಿಕ ಪ್ರತಿನಿಧಿ

ಮೈಸೂರುರಾಜ್ಯದ ಕನಿಷ್ಟವೇತನ ಸಲಹಾಸಮಿತಿಗೆ ದ. ಕ. ಮುನಿಸಿಪಲ್ ಮತ್ತು ಲೋಕಲ್ ಬೋರ್ಡ್ ವರ್ಕರ್ಸ್ ಯೂನಿಯನ್ನಿನ ಕಾರ್ಯದರ್ಶಿ ಶ್ರೀ ಕೆ. ಮೋನಪ್ಪ ಶೆಟ್ಟರನ್ನು ಸರಕಾರ ನೇಮಕ ಮಾಡಿದೆಯಾಗಿ ತಿಳಿದು ಬಂದಿದೆ.

ಪ್ರಾಂತ ರೈತ ಸಮ್ಮೇಳನಕ್ಕೆ ಸಿದ್ಧತೆಗಳು

ಇದೇ ತಾ॥ 16-17ರಂದು ಬೆಂಗಳೂರಿನಲ್ಲಿ ಜರುಗಲಿರುವ ಕರ್ನಾಟಕ ಪ್ರಾಂತ ರೈತರ ಪ್ರಥಮ ಸಮ್ಮೇಳನಕ್ಕೆ ಜಿಲ್ಲಾ ರೈತಸಂಘದ ಆಶ್ರಯದಲ್ಲಿ ಬಿರುಸಿನ ಸಿದ್ಧತೆಗಳು ನಡೆಯುತ್ತಿವೆ. ಅಲ್ಲಲ್ಲಿ ರೈತರ ಸಭೆಗಳು ಜರುಗುತ್ತಿವೆ. ಪ್ರತಿನಿಧಿಗಳನ್ನು ಆರಿಸಲಾಗುತ್ತಿದೆ.

ಇದೇ ವೇಳೆ ಮೂರ್ತೆಯವರ ಸಂಕಷ್ಟಗಳನ್ನು ಸರಕಾರಕ್ಕೆ ನಿವೇದಿಸಲಿಕ್ಕೆ ಇದೇ ಸಮಯ ಜಿಲ್ಲೆಯ ಮೂರ್ತೆಯವರ ಶಿಷ್ಟ ಮಂಡಲವೊಂದು ಬೆಂಗಳೂರಿಗೆ ತೆರಳುವ ನಿರೀಕ್ಷೆಯಿದೆ.

೧೬ ಲಕ್ಷ ಅಕ್ರಮ ಚಿನ್ನದ ಪತ್ತೆ!!

ಮಂಗಳೂರಿನ ಬಂದರದಲ್ಲಿ ಅರಬಸ್ಥಾನದಿಂದ ಅಕ್ರಮವಾಗಿ ಬಂದುದೆಂದು ಹೇಳಲಾದ ಸುಮಾರು 16 ಲಕ್ಷ ರೂ. ಬೆಲೆ ಬಾಳುವ ಚಿನ್ನವನ್ನು ಮುಂಬೈಯಿಂದ ಈ ಪತ್ತೆ ಹಚ್ಚಲು ವಿಶೇಷವಾಗಿ ಬಂದ ಅಧಿಕಾರಿಗಳೊಬ್ಬರು ಪತ್ತೆ ಹಚ್ಚಿದುದು ನಗರದಲ್ಲಿ ಜನರ ಕೌತುಕವನ್ನು ಕೆರಳಿಸಿದೆ. ಯಾಕೆಂದರೆ ಇಂತಹ ಅಕ್ರಮದ ಚಿನ್ನ ವ್ಯಾಪಾರ ಹಲವು ಕಾಲದಿಂದ ಇಲ್ಲಿ ನಡೆದುಕೊಂಡು ಬಂದಿದೆಯೆಂದೂ "ಗಣ್ಯ"ರೆಂದು ಪರಿಗಣಿಸಲ್ಪಡುವ ಕೆಲ ವ್ಯಕ್ತಿಗಳು ಇಂತಹ ವ್ಯಾಪಾರದಲ್ಲಿ ಆಸಕ್ತಿಯುಳ್ಳವರೆಂದೂ ಜನ ಆಡಿಕೊಳ್ಳುತ್ತಿದ್ದಾರೆ. ಅರಬಸ್ಥಾನದಲ್ಲಿ ಚಿನ್ನ ತೊಲೆಗೆ 55ರೂಗಳಿದ್ದರೆ ಭಾರತದಲ್ಲಿ ಅದರ ಬೆಲೆ 106 ರೂ. ಚಿನ್ನ ತರುವ ದಳ್ಳಾಳಿಗೆ ತೊಲೆಗೆ 10 ರೂ. ಕಮಿಷನ್ ಸಿಗುವುದೆಂದೂ ಉಳಿದ ಹಣ ಈ ವ್ಯಾಪಾರದಲ್ಲಿ ತೊಡಗುವ ಸ್ಥಳೀಕ ವ್ಯಾಪಾರಿಗಳಿಗೆಂದೂ, ಅವರು ಈ ಚಿನ್ನವನ್ನು ಕಾರುಗಳ ಮೂಲಕ ರಾಜ್ಯದ ಒಳಪ್ರದೇಶಗಳಿಗೆ ಕೊಂಡು ಹೋಗಿ ಮಾರುವರೆಂದೂ ಹೇಳಲಾಗಿದೆ. ಭಾರತದ ರೂಪಾಯಿಗೆ ಅರಬ ದೇಶಗಳಲ್ಲಿ ವಿನಿಮಯದ ದರ 1-12-0 ಎಂದೂ ಈ ದಳ್ಳಾಳಿಗಳು ಈ ರೂಪಾಯಿಯಿಂದಲೂ ಇನ್ಮಡಿ ಲಾಭ ಗಳಿಸುವರೆಂದು ಸುದ್ದಿಯಿದೆ.

ಹೇಗಿದ್ದರೂ ಕೇಂದ್ರ ಸರಕಾರ ಜಿಲ್ಲೆಯ ಕೆಲ "ಗಣ್ಯ" ಮುಖಂಡರುಗಳ ಮೇಲೆ ಕಣ್ಣಿಡಬೇಕಾದುದೂ, ಅಂತಹವರಿಗೆ ಈಗ ಇರುವ ಆಸ್ತಿಪಾಸ್ತಿಗಳು ಎಲ್ಲಿಂದ ಹೇಗೆ ಬಂದುವು ಎಂದು ವಿಚಾರಣೆ ನಡೆಸುವುದೂ ಅಗತ್ಯ.

ಮಾದರಿ ಪಂಚಾಯತ್ ಬೋರ್ಡ್

"ಜಿಲ್ಲೆಯ ಪ್ರಮುಖ ಪಂಚಾಯತ್ ಬೋರ್ಡುಗಳಲ್ಲಿ ಉಳ್ಳಾಲ ಪಂಚಾಯತ್ ಬೋರ್ಡು ಮಾದರಿಯಾಗಿದೆ" ಎಂಬುದಾಗಿ ನಿವೃತ್ತ ಜಿಲ್ಲಾಧಿಕಾರಿ ಶ್ರೀ ಎಚ್. ನರಸಿಂಹ ಐ. ಎ. ಎಸ್. ಇವರು ಕಳೆದ ತಾ॥ 1 ರಂದು ಉಳ್ಳಾಲ ಪಂಚಾಯತ್ ಬೋರ್ಡಿನವರು ಕಟ್ಟಿಸಿದ ಮಾರು ಸಂಕೆಗಳ ಉದ್ಘಾಟನಾ ಸಮಾರಂಭದಂದು ಭಾಷಣ ಮಾಡುತ್ತಾ ಹೇಳಿದರು. ಸಭೆಯ ಅಧ್ಯಕ್ಷತೆಯನ್ನು ಜಿ. ಬೊ. ಅಧ್ಯಕ್ಷ ಶ್ರೀ ಬಿ. ಮಂಜಯ್ಯ ಹೆಗ್ಡೆಯವರು ವಹಿಸಿದ್ದರು. ಪಂಚಾಯತ್ ಬೋರ್ಡಿನ ಅಧ್ಯಕ್ಷ ಶ್ರೀ ಎ. ಕೃಷ್ಣಶೆಟ್ಟರು ಪಂಚಾಯತ್ ಬೋರ್ಡಿನ ವರದಿಯನ್ನು ಸಭೆಯ ಮುಂದಿಟ್ಟರು.

ಕಮ್ಯೂನಿಸ್ಟ್ ಪಾರ್ಟಿಯ ಮನವಿ

ಈ ಸಭೆಯಲ್ಲಿ ಕೋಟೆಕಾರ್ ಸರ್ಕಲ್ ಕಮ್ಯೂನಿಸ್ಟ್ ಪಾರ್ಟಿಯ ಪರವಾಗಿ ಸರ್ಕಲ್ ಸಮಿತಿಯ ಕಾರ್ಯದರ್ಶಿ ಶ್ರೀ ಕೊರಗಪ್ಪ ರೈಯವರು ಜಿಲ್ಲಾ ಬೋರ್ಡು ಅಧ್ಯಕ್ಷರಿಗೆ ಮನವಿಯೊಂದನ್ನು ಅರ್ಪಿಸಿ, ಕೋಟೆಕಾರ್ ಸರ್ಕಲಿನಲ್ಲಿ ಆಗಬೇಕಾದ ಕೆಲವು ಅವಶ್ಯಕ ಕೆಲಸಗಳನ್ನು ಕೂಡಲೆ ನಡೆಸಬೇಕೆಂದು ವಿನಂತಿಸಿಕೊಂಡಿದ್ದಾರೆ.

ಜತ್ತಿ ಸಮಿತಿ ವರದಿಗೆ ಎಂ. ಎಲ್. ಎ. ಗಳ ವಿರೋಧ?

ಜತ್ತಿ ಸಮಿತಿಯ ವರದಿಯನ್ನು ಚರ್ಚಿಸಲು ಜಿಲ್ಲೆಯ ಕಾಂಗ್ರೆಸ್ ಎಂ. ಎಲ್. ಎ. ಮತ್ತು ಎಂ. ಪಿ. ಗಳ ಸಭೆಯೊಂದು ಇತ್ತೀಚೆಗೆ ಗುಪ್ತವಾಗಿ ಸೇರಿ ಈ ವರದಿಯನ್ನು ಟೀಕಿಸಿದೆಯೆಂದೂ, ಪ್ರಗತಿಪರ ಭೂಸುಧಾರಣೆಯನ್ನು ತರಲು ಇವರು ವಿರೋಧವಿದ್ದಾರೆಂದೂ, ಈ ಬಗ್ಗೆ ಸದ್ಯವೇ ಮಂಗಳೂರಿಗೆ ಬರಲಿರುವ ರಾಜ್ಯದ ಮುಖ್ಯಮಂತ್ರಿಗಳಿಗೆ ಮನವಿಯರ್ಪಿಸಲಿರುವರೆಂದೂ ಗೊತ್ತಾಗಿದೆ.

ಜಿಲ್ಲೆಯ ಕಾಂಗ್ರೆಸ್ ಎಂ. ಎಲ್. ಎ. ಗಳಲ್ಲಿ ಒಬ್ಬಿಬ್ಬರನ್ನು ಬಿಟ್ಟರೆ ಉಳಿದವರೆಲ್ಲ ಹಿರಿ ಭೂಮಾಲಕ ವರ್ಗಕ್ಕೆ ಸೇರಿದವರು, ಇಲ್ಲವೇ ಅವರ ಹಿತರಕ್ಷಿಸುವವರು. ದಕ್ಷಿಣದಿಂದ ಲೋಕಸಭೆಗೆ ಆರಿಸಿಬಂದ ಶ್ರೀ ಕೆ. ಆರ್. ಆಚಾರ್ಯರಂತೂ ಒಕ್ಕಲು ಹಿತ ಕಾಯಿದೆಯನ್ನೇ ನಖಶಿಖಾಂತ ವಿರೋಧಿಸುವವರು. ಹೀಗಿರುತ್ತಾ ಈ "ಜನ ಪ್ರತಿನಿಧಿ" ಗಳು ತಮ್ಮ ವರ್ಗದ ಹಿತ ರಕ್ಷಣೆಗೆ ದೇಶದ ಆರ್ಥಿಕ ಪ್ರಗತಿಗೆ ಅತ್ಯವಶ್ಯವಾಗಿರುವ ಭೂಸುಧಾರಣೆಯನ್ನು ವಿರೋಧಿಸುತ್ತಿರುವುದು ನಾಚಿಕೆಗೇಡು. ಇತ್ತೀಚೆಗೆ ಭೂಸುಧಾರಣೆಯ ಬಗ್ಗೆ ಬೆಂಗಳೂರಿನಲ್ಲಿ ಕೇಂದ್ರ ಮಂತ್ರಿ ಶ್ರೀ ಯಸ್. ಕೆ. ಡೇಯವರು ಹೇಳಿದ ಮಾತುಗಳನ್ನಾದರೂ ಇವರು ಲಾಲಿಸಬೇಕು.

ಇಲ್ಲಿನ ಕೆಲವು ಪತ್ರಿಕೆಗಳು—ಮುಖ್ಯವಾಗಿ ಕಾಂಗ್ರೆಸನ್ನು ಸಮರ್ಥಿಸುವ ಮೂರು (ಜ್ಯೋತಿ, ರಾಷ್ಟ್ರಬಂಧು, ಮತ್ತು ಉಡುಪಿಯ ನವಯುಗ) ಪತ್ರಿಕೆಗಳು ಹಾಗೂ ಶ್ರೀ ಕಡೆಂಗೋಡ್ಲುರವರ "ರಾಷ್ಟ್ರಮತ" ಭೂಸುಧಾರಣೆಯಾದರೆ, ಜತ್ತಿ ಸಮಿ

(೮ನೇ ಪುಟ ನೋಡಿ)

ಮುಖ್ಯೋಪಾಧ್ಯಾಯರು ಪೋಸ್ಟ್ ಮಾಸ್ಟರ್ ಆದರೆ........?

ಬಂಗಾರಪೇಟೆ ತಾಲ್ಲೂಕು ಕ್ಯಾಸಂಬಳ್ಳಿ ಹೋಬಳಿ ಸುಂದರಪಾಳ್ಯ ಗ್ರಾಮದಲ್ಲಿ ಮೂರುಜನ ಮೇಷ್ಟ್ರುಗಳು ಇರುವ ಒಂದು ಅಪ್‌ಗ್ರೇಡೆಡ್ ಶಾಲೆಯ ವಿದ್ಯಾಭ್ಯಾಸ ಕ್ರಮ ಎಂತಹ ಸ್ಥಿತಿಯಲ್ಲಿರುತ್ತೆಂಬುದನ್ನು ತಿಳಿಸಿದರೆ ಹಾಸ್ಯಾಸ್ಪದವಾದೀತು! ಇದಕ್ಕೆ ಕಾರಣ ಈ ಶಾಲೆಯ ಪ್ರಮುಖೋಪಾಧ್ಯಾಯರು ಅಲ್ಲಿನ ಪೋಸ್ಟ್‌ಮಾಸ್ಟರ್ ಕೂಡಾ ಆಗಿರುವುದರಿಂದ ಸ್ಕೂಲನ್ನು ತೆರೆಯುವಾಗ ಅರ್ಧಗಂಟೆ ವಿಳಂಭವಾಗಿಯೂ ಬಿಡುವಾಗ ಮುಕ್ಕಾಲು ಗಂಟೆ ಮುಂಚಿತವಾಗಿಯೂ ಬಿಡುವ ಸಂಪ್ರದಾಯ ಬಗ್ಗಿ ಹೋಗಿರುವುದರಿಂದಾಗಿದೆ.

ಈ ಭ್ರಾಂಚ್ ಪೋಸ್ಟಾಫೀಸಿನಲ್ಲಿ ಮೊದಲು ಅಂದರೆ ಈ ಪೋಸ್ಟ್ ಮಾಸ್ಟರ್-ಸ್ಕೂಲ್ ಮಾಸ್ಟರ್ ಗಿಂತ ಮೊದಲು 10-30 ಗಂಟೆಯಿಂದ 2-30ವರೆಗೆ ಕೆಲ್ಸ ಕಾರ್ಯಗಳನ್ನು ಸರಿದೂಗಿಸಿಕೊಳ್ಳಲುಬಹಳ ಸೌಕರ್ಯವಾಗಿತ್ತು. ಇದನ್ನು ನೋಡಲಾರದೆಯೊ ಏನೊ ಅಂಚೆ ಇಲಾಖೆಯವರು ಈ ಸ್ಕೂಲ್ ಮಾಸ್ಟರ್ ಅವರಿಗೆ ಅಂಚೆ ಕೆಲ್ಸ ವಹಿಸಿ ರೈತರಿಗೆ ವಿಪರೀತ ತೊಂದರೆಗೆ ಅವಕಾಶ ಕಲ್ಪಿಸಿಕೊಟ್ಟಂತಿದೆ. ಬಂದ ಕಾಗದಗಳನ್ನು ಸರಿಯಾಗಿ ತಲುಪಿಸುವುದಿಲ್ಲ, ಕಾಲಕ್ಕೆ ಸರಿಯಾಗಿ ಕೇಳಿದರೆ ನನ್ನ ಸೌಕರ್ಯಕ್ಕನುಗುಣವಾಗಿ ನಾನುಕೊಡ್ತೇನೆ, ನಿಮಗೆ ತೊಂದರೆಯಾಗುವುದಾದರೆ "ಪೋಸ್ಟ್‌ಮಾಸ್ಟರ್ ಜನರಲ್ಲರಿಗೆ ಕಂಪ್ಲೇಂಟ್ ಕೊಡಿ, ಅಂತ ಹೇಳ್ತಾರೆ. ಶಾಲೆಯ ಹೊತ್ತಿನಲ್ಲಿ ಪೋಸ್ಟಾಫೀಸಿನ ಕೆಲ್ಸಗಳನ್ನು ಅಂದರೆ ಲೆಕ್ಕಪತ್ರಗಳನ್ನಿಡುವ ಕೆಲ್ಸ ಮಾಡುವುದರಿಂದ ಇವರ ಹೆಡ್ಮಾಸ್ಟರ್‌ಗಿರಿಯ ಕಾಲದಲ್ಲಿ ಅಲ್ಪಸ್ವಲ್ಪ ಕಲಿತಿದ್ದ ಹುಡುಗರು ಮರೆತುಹೋಗುವ ಸ್ಥಿತಿಯಲ್ಲಿರುತ್ತಾರೆ. 'ಸ್ಕೂಲನ್ನಾದರೂ ಸರಿಯಾಗಿ ನಡೆಸಯ್ಯ ಮಹಾರಾಯ" ಅಂದ್ರೆ ಡಿ. ಪಿ. ಐ.ರವರ ಕೈತೋರಿಸಿ "ನಿಮಗಷ್ಟು ಧೈರ್ಯವಿದ್ದಲ್ಲಿ ಕಂಪ್ಲೇಂಟ್ ಕೊಡ್ರಯ್ಯ ಒಂದು ಕೈನೋಡೇಬಿಡ್ತೇನೆ" ಎಂದು ಮೀಸೆ ಬೇರೆ ತೀಡುವ ಪ್ರದರ್ಶನ ಸರ್ವಸಾಧಾರಣವಾಗಿಬಿಟ್ಟಿದೆ. ಮತ್ತೊಂದು ವಿಶೇಷವೆಂದರೆ ಹೆಂಗಸರು, ನಂಟರು, ಪೋಸ್ಟಾಫೀಸಿನಲ್ಲಿ ಏನಾದರು ಬೇಕಾದರೆ ಅಥವಾ ರಿಜಿಸ್ಟರ್ ಇತ್ಯಾದಿ ಮಾಡಬೇಕಾದಲ್ಲಿ ಅವರಿಗೆ ಯಾವ ವಿಧವಾದ ಕಾಲಪರಿಮಿತಿಯ ಕಾನೂನು ಅನ್ವಯಿಸುವುದಿಲ್ಲ. ಇದು ಇವರ ಅನೇಕ ವೈಚಿತ್ರ್ಯ—ವಿನ್ಯಾಸಗಳಲ್ಲೊಂದಾಗಿದೆ.

ಈ ಪೋಸ್ಟಾಫೀಸಿನಲ್ಲಿ ಜನರಿಗಾಗುತ್ತಿರುವ ತೊಂದರೆಗಳನ್ನು ಗಮನಿಸಿ ಗ್ರಾಮ ಪಂಚಾಯ್ತಿಯವರು ಸಹ ಒಂದು ನಿರ್ಣಯ ಮಾಡಿ ಸಂಬಂಧಪಟ್ಟ ಇಲಾಖೆಗೆ ಕಳುಹಿಸಿದ್ದರೂ ಈವರೆವಿಗೂ ಸಾರ್ವಜನಿಕವಾಗಿ ವಿಚಾರಣೆ ನಡೆದೇ ಇರುವುದಿಲ್ಲ. (ಎಂದೋ ಗೋಪ್ಯವಾಗಿ ನಡೆದು ಕೊಂಡು ಹೋಯಿತಂತೆ) ಈಗಾಗಿ ಈ ಗ್ರಾಮದ ಕೊ-ಆಪರೇಟಿವ್ ಸೊಸೈಟಿಗೆ ಬರುತ್ತಿದ್ದಂತಹ ಅಕ್ಕಿಯ ಒಂದು "ಕೋಟಾ' ಲ್ಯಾಪ್ಸ್ ಸಹ ಆಯಿತು. ಈ ಸ್ಕೂಲ್ ಮಾಸ್ಟರ್, ಪೋಸ್ಟ್‌ಮಾಸ್ಟರ್ ಆಗಿದ್ದುದರಿಂದ ಈಗ ಪ್ರತಿಯೊಬ್ಬರೂ ಈ ಪೋಸ್ಟಾಫೀಸಿನಿಂದ ನಮಗಾಗುತ್ತಿರುವ ಉಪಯೋಗವಾದರೂ ಏನ ? ಎಂದು ತಲೆಕೆಡಿಸಿಕೊಳ್ಳುತ್ತಿರುತ್ತಾರೆ. ಆದುರಿಂದ ವಿದ್ಯಾಭ್ಯಾಸ ಕ್ಷೇತ್ರದಲ್ಲಿನ ಈ ಅತಿಕ್ರಮ ಅಕ್ರಮಗಳನ್ನು ವಿದ್ಯಾ ಇಲಾಖೆಯವರು ಗಮನಿಸಿ ಈ ಅಂಚೆ ಇಲಾಖೆಯಿಂದ ಜನರಿಗಾಗುತ್ತಿರುವ ಅಸೌಕರ್ಯವನ್ನು ತಪ್ಪಿಸಲು ಸಂಬಂಧಪಟ್ಟ ಇಲಾಖೆಯವರು ಸಾವಕಾಶ ಮಾಡದೆ ಕ್ರಮ ಕೈಕೊಳ್ಳುವರೇ?

ಈ ಪೋಸ್ಟಾಫೀಸು ಜನರ ಅನುಕೂಲಕ್ಕೆ ಅಥವಾ ಒಬ್ಬನ ಜೀವನ ಸಾಗಿಸುವುದಕ್ಕೊ? ಒಂದೋ ಇವರು ಮುಖ್ಯೋಪಾಧ್ಯಾಯರಾಗಿರಬೇಕು. ಇಲ್ಲವೆ ಪೋಸ್ಟು ಮಾಸ್ಟರಾಗಿರಬೇಕು. ಇತ್ತ ಶಾಲೆ ಕೆಲಸಕಾರ್ಯಗಳಿಗೂ ಖೋತಾ, ಅತ್ತ ಪೋಸ್ಟಾಫೀಸಿನಲ್ಲೂ ಅವ್ಯವಸ್ಥೆ, ಇನ್ನು ಮುಂದೆ ನಡೆಯದಂತೆ ಸಂಬಂಧಪಟ್ಟ ವಿದ್ಯಾಧಿಕಾರಿಗಳು ಕಣ್ಣು ತೆರೆದ, ವಿಚಾರಿಸುವರೆ?

ಪ್ರಾಂತೀಯ ಸುದ್ದಿ ಸಂಗ್ರಹ

ಭದ್ರಾವತಿ

ರಷ್ಯಾದ ಪ್ರಥಮ ಸಮಾಜವಾದಿ ಅಕ್ಟೋಬರ್ ಮಹಾಕ್ರಾಂತಿಯ 40ನೇ ವಾರ್ಷಿಕೋತ್ಸವವನ್ನು 10—11—57 ರಂದು ಭದ್ರಾವತಿ ಕಮ್ಯೂನಿಸ್ಟ್ ಪಕ್ಷವು ಆಚರಿಸಿತು. ಬೆಂಗಳೂರಿನ ಕಮ್ಯೂನಿಸ್ಟ್ ನಾಯಕ ಹಾಗೂ ಕಾರ್ಮಿಕ ಮುಖಂಡ ಐ. ಮರಿದಾಸ್‌ರವರು 'ಹಾಲಪ್ಪ ಸರ್ಕಲ್ ಮೈದಾನಿನಲ್ಲಿ ನಡೆದ ಈ ಬಹಿರಂಗ ಸಭೆಯಲ್ಲಿ, ಮಹಾಕ್ರಾಂತಿಯ ಮಹತ್ವದ ಬಗ್ಗೆ ಭಾಷಣ ಮಾಡಿದರು. ಸಭಾಧ್ಯಕ್ಷತೆಯನ್ನು ಶಿವಮೊಗ್ಗದ ಶ್ರೀ ಬಸವರಾಜ್ ವಹಿಸಿದ್ದರು.

ಹಾಸನ

40 ವರುಷಗಳ ಹಿಂದೆ ನವಂಬರ ಏಳರಂದು ರಷ್ಯಾದ ಶ್ರಮಜೀವಿ ವರ್ಗ ನಡೆಸಿದ ಯಶಸ್ವೀ ಮಹಾ ಕ್ರಾಂತಿಯ ವಾರ್ಷಿಕೋತ್ಸವವನ್ನು ಹಾಸನ ಕಮ್ಯೂನಿಸ್ಟ್ ಪಕ್ಷವು ವಿಜ್ರಂಭಣೆಯಿಂದ ಆಚರಿಸಿತು.

ಈ ಐತಿಹಾಸಿಕ ಕ್ರಾಂತಿಯ ನಂತರದ ನಲ್ವತ್ತು ವರ್ಷಗಳಲ್ಲಿ ವಿಶ್ವದ ಪ್ರಗತಿಗಾಮಿ ಚಳವಳಿಯ ಮುನ್ನಡೆ ಮತ್ತು ಸಮಾಜವಾದಿ ಶಕ್ತಿಯ ಬೆಳವಣಿಗೆಯಲ್ಲಿ ನವಂಬರ ಏಳರ ಪಾತ್ರದ ಬಗ್ಗೆ ಭಾಷಣಕರ್ತರಾದ ಬೆಂಗಳೂರಿನ ಕಾರ್ಮಿಕ ಮುಖಂಡ ಕಾ॥ ಐ. ಮರಿದಾಸ್ ವಿವರಪೂರ್ಣ ಭಾಷಣವಿತ್ತರು. ಸಭಾಧ್ಯಕ್ಷತೆಯನ್ನು ಹಾಸನದ ಪ್ರಮುಖ ವಕೀಲರಾದ ಶ್ರೀ ಎಚ್. ಎಸ್. ಮುರುಗಪ್ಪನವರು ವಹಿಸಿದ್ದರು.

'ಅಕ್ಟೋಬರ್ ಮಹಾಕ್ರಾಂತಿ ಚಿರಾಯುವಾಗಲಿ!' 'ಜಾಗತಿಕ ಶಾಂತಿ ವೃದ್ಧಿ ಹೊಂದಲಿ!' 'ಭಾರತ-ಸೋವಿಯತ್ ಮೈತ್ರಿ ದೃಢಗೊಳ್ಳಲಿ !' ಮತ್ತು 'ಭಾರತ ಕಮ್ಯೂನಿಸ್ಟ್ ಪಕ್ಷ ಝಿಂದಾ ಬಾದ್ !!' ಘೋಷಣೆಗಳೊಂದಿಗೆ ಸಭೆಯು ಮುಕ್ತಾಯವಾಯಿತು.

ಬೆಂಗಳೂರು

ವಿಶ್ವದ ಇತಿಹಾಸದ ಗತಿಯನ್ನೇ ಬದಲಿಸಿದ ರಷ್ಯಾದ ಪ್ರಥಮ ಸಮಾಜವಾದಿ ಮಹಾಕ್ರಾಂತಿಯ 40ನೇ ವಾರ್ಷಿಕೋತ್ಸವವನ್ನು ಭಾರತ ಕಮ್ಯೂನಿಸ್ಟ್ ಪಕ್ಷದ ಬೆಂಗಳೂರು ಜಿಲ್ಲಾ ಸಮಿತಿಯ ಆಶ್ರಯದಲ್ಲಿ ಆಚರಿಸಲಾಯಿತು.

ಇಂದು ಎರಡೆರಡು ಉಪಗ್ರಹಗಳನ್ನು ಆಕಾಶದಲ್ಲಿ ತೇಲಬಿಟ್ಟಿರುವ ಸೋವಿಯತ್ ರಷ್ಯಾದ ಮಹಾಸಾಧನೆ, ಸೋವಿಯತ್ ಜನತೆಯ ಜೀವನದ ರಾಜಕೀಯ ಆರ್ಥಿಕ, ಸಾಮಾಜಿಕ ಹಾಗೂ ಸಾಂಸ್ಕೃತಿಕ ಕ್ಷೇತ್ರದಲ್ಲಿ ಸರ್ವತೋಮುಮ್ಮುಖ ಅಭಿವೃದ್ಧಿ, ವಿಶ್ವದಲ್ಲಿ ಸಾಮ್ರಾಜ್ಯಶಾಹಿಗಳ ದುರಾಕ್ರಮಣಕ್ಕೆ ಬಾರಿ ಬಾರಿಗೆ ತಡೆ ಹಾಕುವುದರಲ್ಲಿ ಹಾಗೂ ವಿಶ್ವಶಾಂತಿಯನ್ನು ಚಿರಾಯುಗೊಳಿಸುವುದರಲ್ಲಿ, ಅಕ್ಟೋಬರ್ ಮಹಾಕ್ರಾಂತಿಯ ಪಾತ್ರವನ್ನು ವಿವರಿಸಲಾಯಿತು.

ಈ ಸಾಧನೆಗಳನ್ನು ಸಾಧಿಸುವಾಗ ಸೋವಿಯತ್ ಜನತೆಯ ಜೀವನ-ಮರಣದ ನಡುವಿನ ಹೋರಾಟ ಸೋವಿಯತ್ ಶ್ರಮಜೀವಿ ವರ್ಗ, ರೈತಾಪಿ, ವಿದ್ಯಾರ್ಥಿ, ಪ್ರೊಫೆಸರ್‌ಗಳೂ ಕೂಡಿ ಸೋವಿಯತ್ ರಷ್ಯಾದ ಸಮಾಜವಾದಿ ಸಮಾಜವನ್ನು ಕಟ್ಟಲು, ದೇಶದ ಆರ್ಥಿಕ ಪುನರ್‌ರಚನೆಯ ಕಾರ್ಯದಲ್ಲಿ ನೀಡಿದ ಬಲಿದಾನ, ತ್ಯಾಗ; ಸಹಿಸಿದ ಹಸಿವು, ತೃಷೆ, ಹಾಗೂ ತಮ್ಮ ಶತ್ರುಗಳೊಡನೆ ನಡೆಸಿದ ಭೀಕರ ಕದನಗಳನ್ನು ಕುರಿತು ಡಾ॥ ಕೆ. ಟಿ. ಬೆಹನನ್‌ರವರು ಇಂಗ್ಲಿಷಿನಲ್ಲಿ ಉತ್ತಮ ಭಾಷಣ ಮಾಡಿದರು. ಭಾಷಣದ ಅನುವಾದವನ್ನು ಕಾ॥ ಎಂ ಎಸ್. ಕೃಷ್ಣನ್‌ರವರು ಗೈದರು. ಕೊನೆಗೆ ಜಿಲ್ಲಾ ಕಾರ್ಯದರ್ಶಿ ಕಾ॥ ಸೂರ್ಯನಾರಾಯಣ ರಾವ್‌ರವರೂ ಮಾತಾಡಿದರು.

ಸಭೆಯ ಅಧ್ಯಕ್ಷತೆಯನ್ನು "ಜನಶಕ್ತಿ" ಪತ್ರಿಕೆಯ ಸಂಪಾದಕರಾದ ಕಾ॥ ಸಿ. ಆರ್. ಕೃಷ್ಣರಾವ್‌ರವರು ವಹಿಸಿದ್ದರು.

ಉಡುಪಿ

ಉಡುಪಿಯ ಮಜೂರ ಸಂಘಗಳು ಮತ್ತು ಕಮ್ಯೂನಿಸ್ಟ್ ಪಾರ್ಟಿಯ ಸಂಯುಕ್ತ ಆಶ್ರಯದಲ್ಲಿ ರಷ್ಯನ್ ಕ್ರಾಂತಿಯ 40ನೇ ವಾರ್ಷಿಕೋತ್ಸವವನ್ನು ವಿಜೃಂಭಣೆಯಿಂದ ಆಚರಿಸಲಾಯಿತು.

ನಗರದ ಎಲ್ಲೆಡೆಗಳಲ್ಲಿರುವ ಮಜೂರರ ಕೇಂದ್ರಗಳಲ್ಲಿ ದಾರಿಯುದ್ದಕ್ಕೂ ಶೃಂಗರಿಸಲ್ಪಟ್ಟ ದೃಶ್ಯಗಳು ಕಂಡುಬರುತ್ತಿದ್ದವು. ಸಂಜೆ 5-30ಕ್ಕೆ ಎಡೆಬಿಡದೆ ಮಳೆ ಸುರಿಯುತ್ತಿದ್ದರೂ ಮಜೂ[illegible]ರ [illegible]ಕತ್ ಮೆರವಣಿಗೆಯೊಂದು [illegible] ಹೊ[illegible]ಷಣೆಗಳೊಂದಿಗೆ ನಗರದಲ್ಲಿ ಸುತ್ತಾಡಿ ರಥಬೀದಿಗೆ ಬಂದು ತಲಪಿತು.

ರಥಬೀದಿಯಲ್ಲಿ ಸಾರ್ವಜನಿಕ ಸಭೆಯು ಶ್ರೀ ರಾಮಮೋಹನ ಹೆಗ್ಡೆಯವರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀ ಸಿಂಪ್ಸನ್ ಸೋನ್ಸರು ಮತ್ತು ಅಧ್ಯಕ್ಷರು ಕ್ರಾಂತಿಯ ಮಹತ್ವವನ್ನು ವಿವರಿಸಿ ಆ ಕ್ರಾಂತಿಯ ನಂತರ ಲೋಕದಲ್ಲಿ ಆಗಿರುವ ಮಹತ್ವದ ಬದಲಾವಣೆಗಳನ್ನೂ ರಷ್ಯವು ಸಾಧಿಸಿದ ಅದ್ಭುತ ಪ್ರಗತಿಯನ್ನು ತಿಳಿಸಿದ ನಂತರ ಧನ್ಯವಾದ ಸಮರ್ಪಣೆಯೊಂದಿಗೆ ಸಭೆ ಚದರಿತು.

ಜಿಲ್ಲಾ ಮೋಟಾರು ಕಾರ್ಮಿಕರ ಸಂಘ ಸ್ಥಾಪನೆ

ತುಮಕೂರು ಜಿಲ್ಲಾ ಮೋಟಾರ್ ಕೆಲಸಗಾರರ ಸಂಘವನ್ನು ಸ್ಥಾಪಿಸಲು ತಾ: 10—11—57ನೇ ಭಾನುವಾರ ರಾತ್ರಿ 7 ಘಂಟೆಗೆ ಎನ್. ರುದ್ರಯ್ಯನವರ ಛತ್ರದಲ್ಲಿ ಶ್ರೀ ಪುಟ್ಟಣ್ಣ (ಎಂ.ಎಲ್.ಎ) ಅವರ ಅಧ್ಯಕ್ಷತೆಯಲ್ಲಿ ಸಭೆ ಸೇರಿದ್ದರು. ಸಭೆಯಲ್ಲಿ ಶ್ರೀ ಕೆ. ವಿ ಕೃಷ್ಣಸ್ವಾಮಿ, ಶ್ರೀಗಳಾದ, ಮಂಜುನಾಥ್, ಜನಾಬ್ ಅವಿಾರ್, ಟಿ. ಎಲ್. ತಿಮ್ಮಪ್ಪ, (ಮುನ್ಸಿಪಲ್ ಕೌನ್ಸಿಲರ್) ಮಲ್ಲಣ್ಣ, (ಲಾಯರ್) ಇವರುಗಳು ಸಂಘದ ಅವಶ್ಯಕತೆಯ ಬಗೆ ಮೋಟಾರ್ ಕೆಲಸಗಾರರಿಗೆ ರಜಾ, ಕೆಲಸದ ಭದ್ರತೆ, ಕಾರ್ಮಿಕರ ಹಕ್ಕುಗಳು ಕಾಯಿಲೆಯಾದವರಿಗೆ ಸಂಬಳ ಸಹಿತ ರಜಾ, ಬೋನಸ್ ಮತ್ತು ಕೋಲಾರ ಮತ್ತಿತರೆ ಕಡೆಗಳಲ್ಲಿ ಸಂಘಟನೆಯಿಂದ ಮೋಟಾರ್ ಕೆಲಸಗಾರರು ಸಾಧಿಸಿರುವ ವಿಜಯಗಳನ್ನು ವಿವರಿಸಿದ ನಂತರ ಅಧ್ಯಕ್ಷರು ಕೆಲವು ಮಾತುಗಳನ್ನು ಹೇಳಿದರು. ನಂತರ 1000ಕ್ಕೂ ಮಿಕ್ಕಿ ಬಂದಿದ್ದ ಕೆಲಸಗಾರರು ಕೂಲಂಕುಷವಾಗಿ ಚರ್ಚಿಸಿದ ನಂತರ ಈ ಕೆಳಕಂಡ ನಿರ್ಣಯಗಳನ್ನು ಮಾಡಲಾಯಿತು.

ಐದು ಜನ ಗೌರವ ಸದಸ್ಯರುಗಳನ್ನು ತೆಗೆದುಕೊಳ್ಳಬೇಕು. ಇವರಲ್ಲಿ ಅಧ್ಯಕ್ಷರನ್ನಾಗಿ ಶ್ರೀ ಜಿ. ಎನ್. ಪುಟ್ಟಣ್ಣನವರನ್ನೂ, ಉಪಾಧ್ಯಕ್ಷರನ್ನಾಗಿ ಶ್ರೀ ಸಿ.ಆರ್. ಕಂತಪ್ಪ (ಡ್ರೈವರ್)ನವರನ್ನೂ, ಜನರಲ್ ಸೆಕ್ರೆಟರಿಗಳನ್ನಾಗಿ ಕೆ. ವಿ. ಕೃಷ್ಣಸ್ವಾಮಿಯವರನ್ನೂ, ಸಹಕಾರ್ಯದರ್ಶಿಗಳನ್ನಾಗಿ ಬಸವರಾಜುರವರನ್ನೂ, ಖಜಾಂಚಿಗಳನ್ನಾಗಿ ಸಿದ್ದಪ್ಪನವರನ್ನೂ ಮತ್ತು 14 ಜನ ಸದಸ್ಯರನ್ನೊಳಗೊಂಡ ಕಾರ್ಯಕಾರಿ ಸಮಿತಿಯನ್ನು ಚುನಾಯಿಸಲಾಯಿತು.

....ಲೆನಿನ್ ಸ್ಮಾರಕ

(೨ನೇ ಪುಟದಿಂದ)

ಯದ ರಾಜಧಾನಿಯಲ್ಲಿ ವ್ಲಾದಿಮಿರ್ ಇಲ್ಯಿಚ್ ಲೆನಿನ್‌ರವರ ಸ್ಮಾರಕವೊಂದನ್ನು ನಿರ್ಮಿಸಿತೆಂದು "ಬೋರ್ಬಾ" ಪತ್ರಿಕೆ ವರದಿ ಮಾಡುತ್ತದೆ. ಬೆಲ್ಗ್ರೇಡ್ ನಗರವನ್ನು ಜೆಮುನ್ ನಗರದೊಂದಿಗೆ ಕೂಡಿಸುವ ಹೆದ್ದಾರಿಗೆ ಲೆನಿನ್‌ರವರ ಹೆಸರು ಕೊಡಬೇಕೆಂದು ಸಹ ನಿರ್ಣಯವನ್ನು ಮಾಡಲಾಯಿತು. ದೆದಿನ್‌ಸ್ಕಿ ಸಾಲು ಮರಗಳ ವಿಶಾಲ ವೀಥಿಗೂ ಕೂಡ ಅಕ್ಟೋಬರ್ ಕ್ರಾಂತಿಯ ಹೆಸರು ಕೊಡಬೇಕೆಂದು ಕೂಡ ನಿರ್ಣಯಿಸಲಾಗಿದೆ.

ಭಗೀರಥ ಸಾಧನೆ !

"ಗೋಪಾಲ್"

ನೀಲಾನಂತ ಗಗನ ಗರ್ಭವ
ಭೇದಿಸಿಹ ಸಾಧನೆ !
ಅಂತರಿಕ್ಷದ ಅಂತರಾಳವ ಹೊಕ್ಕು
ನೋಡುವ ಸಾಧನೆ !
ಬ್ರಹ್ಮಾಂಡದೆದೆ ಬಗಿದು ಕಾಣುವ
ಇದು ಭಗೀರಥ ಸಾಧನೆ !
—ಉಪಗ್ರಹದನುಪಮ ಶೋಧನೆ !
ಈ ರೂಪದರ್ಶನ
ಇದು ಹೊಸ ನಿದರ್ಶನ
ನರ—ನಿಸರ್ಗ ಶಕುತಿಯ ಘರ್ಷಣ !
ಅಂಬರಲೆಯಲಿ ಹುಟ್ಟುಹಾಕುವ
ಅಂಬಿಗನ ಪ್ರದರ್ಶನ—
ಅದು ಬಹು ಭೀಷಣ !
ವಿಶ್ವವನೆ ವಿಸ್ಮಯದಿ ಚೆಲ್ಲಿತು
ಮೊದಲ ಕ್ರಾಂತಿಯ ಘೋಷಣೆ
ಸಮಾನ ತತ್ವದ ಸಂಸ್ಥಾಪನೆ !

ಅಂದು ಬಿತ್ತಿದ ಬೀಜ ಬಿರಿದು
ಇಂದು ಇತ್ತಿದೆ ಫಲವಿದೊ !
ವಿಜ್ಞಾನದಲು ಉದ್ಭ್ರಾಂತಿ ತೋರಿದೆ
ಉಪಮಾತೀತ ಮಾನವ ಛಲವಿದೊ !
ದಿಗಂತದಾಚೆಗೂ ಅದು ಹಾರಿದೆ
ದಿನಮಣಿಯ ದಿಂಙ್ಮೂಢಗೊಳಿಸಿದೆ
ನಭದನೆತ್ತಿಯಲಿ ಕೆಂಬಾವುಟವೇರಿದೆ!
ಕೇಳಿರೊ! ಕರೆದಿಹನಾತನ
ಬರ್ಬರನೆಂದು!
ನವಸಮಾಜ ಸಾಧಿಸಿ
ರೂಸೀ ಬಂಧು!
ಹೊಸ ಇತಿಹಾಸ ರಚಿಸಿದ
ಇನ್ನೊಂದು!
ಚಂದ್ರನ ಕೋರಿದ 'ಶಿಶು'ವಾಗ
'ಶಿಶು ಚಂದ್ರನ' ಹಾರಿಸಿ ತಾನೀಗ
ನಿಜ ಚಂದ್ರನ ಮುಟ್ಟಲಿದೆ ಬೇಗ!

ಭಾರತದ ರೈತರ ಜೀವನಸ್ಥಿತಿ ಉತ್ತಮಗೊಳ್ಳಲಿ !

(೩ನೇ ಪುಟದಿಂದ)

ಣೆರ ಮಾಡುವ ವಿಚಾರದಲ್ಲಿ ಸರ್ಕಾರವು ಈ ಕೆಳಗಿನ ಕ್ರಮವನ್ನು ಅನುಸರಿಸಬೇಕೆಂದು ಕಿಸಾನ ಸಭೆಯು ಕೇಳಿಕೊಳ್ಳುತ್ತದೆ. 1. ಇನ್ನುಮುಂದೆ ಪಡೆಯುವ ಹಿಡುವಳಿಗೆ ಮಾತ್ರವಲ್ಲ, ಈಗ ವಶದಲ್ಲಿರುವ ಹಿಡುವಳಿಗೂ ಸ್ವಂತ ಸಾಗುವಳಿಯ ಹಿಡುವಳಿಗೂ ಪರಮಾವಧಿ ನಿರ್ಣಯವಾಗಬೇಕು. ಪರಮಾವಧಿಗೆ ಒಳಪಟ್ಟು ಒಕ್ಕಲುತನ ಮಾಡುವ ರೈತರಿಂದ ದೊಡ್ಡ ಭೂಮಾಲಿಕರು ಜಮಿನನ್ನು ವಶಪಡಿಸಿಕೊಳ್ಳದಂತೆ ಪ್ರತಿಬಂಧಿಸಬೇಕು. 2. ಹೆಚ್ಚಿನ ಜಮೀನು ಕೆಲವೇ ಭೂಮಾಲಿಕರ ಗುತ್ತಿಗೆಯಾಗಿರುವುದನ್ನೂ ಜಮೀನು ಕೆಲವೇ ಮಂದಿಯ ಸ್ವಾಧೀನದಲ್ಲಿ ಸಂಗ್ರಹವಾಗುವುದನ್ನೂ ತಡೆದು, ಭೂ ರಹಿತರಿಗೂ ಬಡ ರೈತರಿಗೂ ವಿತರಣೆ ಮಾಡಲು ಸಾಕಷ್ಟು ಜಮೀನು ಒದಗುವಂತೆ ಪರಮಾವಧಿಯನ್ನು ನಿರ್ಣಯಿಸಬೇಕು. 3. ಯಾವ ತರದ ಜಮೀನನ್ನಾದರೂ- ಕಬ್ಬು ಬೆಳೆಯುವ, ಹಣ್ಣು ಹಂಪಲು ಬೆಳೆಯುವ, ಚೆನ್ನಾಗಿ ಆಡಳಿತ ನಡೆಸಲ್ಪಡುವುದೇ ಮೊದಲಾದವುಗಳೆಂದು — ಪರಿಮಿತಿಯಿಂದ ವಿನಾಯತಿಗೊಳಿಸಬಾರದು. 4. ಪರಿಮಿತಿಯನ್ನು "ಸ್ಟಾಂಡರ್ಡ್ ಎಕ್ರೆ" ಗಳಲ್ಲಿ ನಿರ್ಣಯಿಸಬೇಕು ; ಹಾಗೆ ನಿರ್ಣಯಿಸುವಾಗ ಜಮೀನಿನ ಗುಣ, ನೀರಾವರಿ ಅನುಕೂಲತೆ, ಮಾರುಕಟ್ಟೆಯ ಸೌಕರ್ಯ, ಜಮೀನಿನಲ್ಲಾಗುವ ಬೆಳೆ ಇತ್ಯಾದಿಗಳನ್ನೆಲ್ಲ ಗಣನೆಗೆ ತೆಗೆದುಕೊಳ್ಳಬೇಕು. 5. ಪರಿಮಿತಿಯ ನಿರ್ಣಯವನ್ನು ಸೋಲಿಸುವ ಉದ್ದೇಶದಿಂದ ಭೂಮಾಲಿಕರು ಮಾಡಬಹುದಾದ ಭೂ ವಿನಿಮಯಗಳನ್ನು ರದ್ದುಗೊಳಿಸಬೇಕು. 6. ಪರಿಮಿತಿಯನ್ನು ನಿರ್ಣಯಿಸುವ ಮತ್ತು ಭೂ ವಿತರಣೆ ಮಾಡುವ ಕಾರ್ಯದಲ್ಲಿ ರೈತ ಸಮಿತಿಗಳ ಸಹಕಾರ ಪಡೆಯಬೇಕು. 7. ಜಮೀನನ್ನು ಪಡೆಯುವ ರೈತರೂ ಕೃಷಿ ಕೂಲಿಗಾರರೂ ನೇರವಾಗಿ ಸರ್ಕಾರಕ್ಕೆ ಗೇಣಿ ಸಲ್ಲಿಸಬೇಕು; ಗೇಣಿಯು ಆರನೆ ಒಂದಂಶಕ್ಕಿಂತ ಹೆಚ್ಚಿರಬಾರದು. 8. ಸರಕಾರದ ಬಂಜರು ಜಮೀನನ್ನು ಭೂರಹಿತರಿಗೆ ಹಂಚಬೇಕು.

ತೆರಿಗೆಯ ಭಾರ

ತೆರಿಗೆಯ ಭಾರ ಹೆಚ್ಚಾಗುತ್ತಿರುವುದನ್ನು ಕುರಿತು ಅಖಿಲ ಭಾರತ ಕಿಸಾನ ಸಭೆಯು ಅಂಗೀಕರಿಸಿರುವ ನಿರ್ಣಯದಲ್ಲಿ : ಸರಕಾರವು ಬಡಜನರ ಮೇಲೆ ಹೆಚ್ಚು ತೆರಿಗೆ ಹೊರಿಸುವ ಧೋರಣೆಯನ್ನು ಬಿಟ್ಟುಬಿಡಬೇಕೆಂದೂ, ಯೋಜನೆಗೆ ಅವಶ್ಯವಿರುವ ಬಂಡವಾಳವನ್ನು ಪಡೆಯುವುದಕ್ಕೆ ವಿದೇಶೀ ಗುತ್ತೇದಾರರು ದೇಶದಿಂದ ಹೊರಗೆ ರವಾನಿಸುವ ಲಾಭಾಂಶವನ್ನು ಕಡಿತ ಮಾಡಬೇಕು, ದೇಶೀ ಗುತ್ತೇದಾರ ಬಂಡವಾಳಗಾರರ ಲಾಭವನ್ನು ಪರಿಮಿತಗೊಳಿಸಬೇಕು, ವಿದೇಶ ವ್ಯಾಪಾರವನ್ನು ಸರಕಾರ ನಡೆಸಬೇಕು, ಷೆಡ್ಯೂಲ್ ಬ್ಯಾಂಕುಗಳನ್ನು ರಾಷ್ಟ್ರೀಕರಿಸಬೇಕು, ಜಮೀನ್ದಾರರಿಗೆ ಕೊಡುವ ಪರಿಹಾರವನ್ನು ಕಡಿತ ಮಾಡಬೇಕು ಎಂದೂ ಕಿಸಾನ ಸಭೆ ಕೇಳಿಕೊಳ್ಳುತ್ತದೆ. ಅಲ್ಲದೆ, 1. ಈಗಿನ ಬಹುತರದ ಭೂ ಕಂದಾಯದ ಬದಲು, ಒಂದು ಕನಿಷ್ಟ ಮಿತಿಗಿಂತ ಕೆಳಗಿನದಕ್ಕೆ ವಿನಾಯತಿ ಕೊಡುವುದರೊಂದಿಗೆ ಒಂದೇ ರೀತಿಯ ಮೆಟ್ಟಲು-ಮೆಟ್ಟಲಾಗಿ ಏರುವ ಕಂದಾಯವನ್ನು ನಿರ್ಣಯಿಸಬೇಕು. 2. ಕಡಿಮೆ ಆದಾಯದವರಿಗೆ ರಿಯಾಯಿತಿ ಸಿಗುವಂತೆ ಈಗಿನ ತೆರಿಗೆಗಳನ್ನು ಕಡಿಮೆ ಮಾಡಬೇಕು, 'ಬೆಟರ್‌ಮೆಂಟ್ ಲೆವಿ'ಗಳನ್ನು ರದ್ದು ಮಾಡಬೇಕು. 4. ಅತ್ಯಾವಶ್ಯಕ ನಿತ್ಯ ಉಪಯೋಗದ ವಸ್ತುಗಳ ಮೇಲೂ ಕಚ್ಚಾ ಮಾಲುಗಳ ಮೇಲೂ ಮಾರಾಟ ತೆರಿಗೆ ರದ್ದು ಮಾಡಬೇಕು.

ಆಹಾರ ಪರಿರಿಸ್ಥಿತಿ

ಆಹಾರ ಪರಿಸ್ಥಿತಿಯ ಬಗ್ಗೆ ಅಂಗೀಕರಿಸಲ್ಪಟ್ಟ ಗೊತ್ತುವಳಿಯಲ್ಲಿ : ದೇಶದಲ್ಲೆಲ್ಲ ಆಹಾರದ ಅಭಾವ ಹಾಗೂ ಬೆಲೆ ಏರಿಕೆ ತೀವ್ರವಾಗಿರುವುದನ್ನು ಕಿಸಾನ ಸಭೆಯು ಗಮನಿಸುತ್ತದೆ, ಮಾತ್ರವಲ್ಲ ಅನೇಕ ಪ್ರದೇಶಗಳಲ್ಲಿ ಬರಗಾಲದ ಪರಿಸ್ಥಿತಿ ತಲೆದೋರಿರುವುದನ್ನು ಗಣನೆಗೆ ತೆಗೆದುಕೊಳ್ಳುತ್ತದೆ. ಈ ದುಸ್ಥಿತಿಗೆ ಸರಕಾರದ ಧೋರಣೆಗಳೇ ಮುಖ್ಯ ಕಾರಣವೆಂದು ಕಿಸಾನ ಸಭೆಯು ಅಭಿಪ್ರಾಯ ಪಡುತ್ತದೆ. ಆಹಾರದ ಪರಿಸ್ಥಿತಿಯನ್ನು ಸುಧಾರಿಸುವುದಕ್ಕೆ ಸರಕಾರವು 1. ಬರಗಾಲ ಪರಿಸ್ಥಿತಿ ತಲೆದೋರಿರುವ ಪ್ರದೇಶಗಳನ್ನು ಕ್ಷಾಮ ಪ್ರದೇಶಗಳು ಎಂದು ಸಾರಬೇಕು. 2. ಕ್ಷಾಮ ಪ್ರದೇಶಗಳಲ್ಲಿ ಕೆಲಸ ಮಾಡಬಲ್ಲವರಿಗೆ ಕೆಲಸ ಮತ್ತು ರೇಶನು ಹಾಗೂ ಕೆಲಸ ಮಾಡಲು ಸಾಧ್ಯವಿಲ್ಲದವರಿಗೆ ಉಚಿತ ಆಹಾರ ಪೂರೈಸಲು ಕ್ರಮ ತೆಗೆದುಕೊಳ್ಳಬೇಕು. 3. ಬರಗಾಲ ಪ್ರದೇಶಗಳಲ್ಲಿ ತಕಾವಿ ಹಾಗೂ ದುಷ್ಕಾಲ ಪರಿಹಾರ ಸಾಲ-ಸಹಾಯಗಳನ್ನು ಒದಗಿಸಬೇಕು. 4. ಸಣ್ಣ ನೀರಾವರಿಗಳನ್ನು ಸಂಪಡಿಸುವುದಕ್ಕೂ ಹೆಚ್ಚಿಸುವುದಕ್ಕೂ ಕೂಡಲೆ ಕ್ರಮ ವಹಿಸಬೇಕು. 5. ದೊಡ್ಡ ದಾಸ್ತಾನುಗಾರರ, ಜಮೀನ್ದಾರರ ಮತ್ತು ವ್ಯಾಪಾರಿಗಳ ವಶದಲ್ಲಿರುವ ಆಹಾರ ಧಾನ್ಯ ಸಂಗ್ರಹಗಳನ್ನು ಸರಕಾರ ವಶಪಡಿಸಿಕೊಳ್ಳಬೇಕು. 6. ಪ್ರತಿ 500 ಕುಟುಂಬಗಳಿಗೆ ಒಂದರಂತೆ ಕಡಿಮೆ ಬೆಲೆಯ ಧಾನ್ಯದ ಅಂಗಡಿಗಳನ್ನು ತೆರೆಯಬೇಕು. 7. ಆಹಾರ ಸಮಿತಿಗಳ ರಚನೆ, ರಾಜ್ಯ ಮತ್ತು ಕೇಂದ್ರ ಸರ್ವ ಪಕ್ಷ ಸಮ್ಮೇಳನಗಳೇ ಮೊದಲಾದವುಗಳನ್ನು ಏರ್ಪಡಿಸಬೇಕು-ಇತ್ಯಾದಿ.

ಈ ಠರಾವುಗಳಲ್ಲದೆ ಹಳ್ಳಿಗಳ ಜನರಿಗೆ ಸುಲಭದಲ್ಲಿ ಸಾಲ ಒದಗಿಸುವುದು, ಹಿಡುವಳಿಗಳ ಸಂಯೋಜನೆ, ನೆರೆ ಹಾವಳಿಯ ನಿವಾರಣೆ, ಆಡಳಿತೆಯ ಪ್ರಜಾ ಪ್ರಭುತ್ವೀಕರಣ ಮೊದಲಾದ ವಿಚಾರಗಳನ್ನು ಕುರಿತೂ ನಿರ್ಣಯಗಳನ್ನು ಅಖಿಲ ಭಾರತ ಕಿಸಾನ ಸಭೆಯು ಅಂಗೀಕರಿಸಿದೆ.

ಘಟನೆಯ ತಿದ್ದುಪಡಿ

ಕಿಸಾನ ಸಭೆಯು ಘಟನೆಯ ಕೆಲವು ಅಂಶಗಳನ್ನು ತಿದ್ದುಪಡಿ ಮಾಡುತ್ತ, ಬಾವುಟವು ಕೆಂಪು ಬಣ್ಣದ್ದಿದ್ದು ಅದರಲ್ಲಿ ಕುಡುಗೋಲು ಮಾತ್ರ ಇರುವುದೆಂದು ನಿರ್ಣಯವಾಯಿತು. ಪ್ರತಿವರ್ಷ ...ನೇ ತಾ॥ 31ಕ್ಕೆ ಸದಸ್ಯರನ್ನು ಸೇರಿಸುವ ಅವಧಿ ಮುಕ್ತಾಯವಾಗುವುದೆಂದೂ ಚಂದಾ ಶುಲ್ಕವು ಕನಿಷ್ಟ ಪಕ್ಷ 10 ನಯಾ ಪೈಸಾ ಮತ್ತು ಅದರಲ್ಲಿ ಹತ್ತನೆ ಒಂದು ಭಾಗ ಅಖಿಲ ಭಾರತ ಕಿಸಾನ ಸಭೆಗೆ ಸಲ್ಲತಕ್ಕದ್ದೆಂದೂ ನಿರ್ಣಯವಾಯಿತು.

ಸಮ್ಮೇಳನದ ಅಂಗವಾಗಿ ತಾ॥ 3ರಂದು ಸಂಜೆ ಪ್ರಚಂಡ ಮೆರವಣಿಗೆ ನಡೆಯಿತು. ಕೇಂದ್ರ ಕಿಸಾನ ಕೌನ್ಸಿಲಿನ ಸದಸ್ಯರಾದ ಕೇರಳದ ಮುಖ್ಯಮಂತ್ರಿ ಇ. ಎಂ. ಎಸ್. ನಂಬೂದ್ರಿಪಾದ್‌ರವರು ಅಂದು ಮುಂಜಾನೆ ಡಂಡಂ ವಿಮಾನ ನಿಲ್ದಾಣವ

(೫ನೇ ಪುಟ ನೋಡಿ)

ಬೆಂಗಳೂರು

ಭಾರತ-ರಷ್ಯಾ ಸಾಂಸ್ಕೃತಿಕ ಸಂಘದ ಆಶ್ರಯದಲ್ಲಿ

ನವೆಂಬರ್ ಕ್ರಾಂತಿ ದಿನಾಚರಣೆ

ಬೆಂಗಳೂರಿನ ಭಾರತ-ರಷ್ಯಾ ಸಾಂಸ್ಕೃತಿಕ ಸಂಘದ ಆಶ್ರಯದಲ್ಲಿ ಅಕ್ಟೋಬರ್ ಮಹಾಕ್ರಾಂತಿಯ ನಲ್ವತ್ತನೆಯ ವಾರ್ಷಿಕೋತ್ಸವವನ್ನು ನಂವೆಬರ 7ರಂದು ವೈಭವದಿಂದ ಆಚರಿಸಲಾಯಿತು. ಅಂದು ಸಂಜೆ ಕನ್ನಡ ಸಾಹಿತ್ಯ ಪರಿಷತ್ತು ತಳಿರುತೋರಣಗಳಿಂದ ಅಲಂಕರಿಸಲಾಗಿದ್ದು, ಸಭೆಯಲ್ಲಿ ಭಾಗವಹಿಸಲು ಜನ ಕಿಕ್ಕಿರಿದು ನೆರೆದಿದ್ದರು.

ಮಾಜಿ ಮುಖ್ಯ ಮಂತ್ರಿಗಳೂ ವಿಧಾನ ಸಭಾ ಸದಸ್ಯರೂ ಆದ ಶ್ರೀ ಕೆ. ಹನುಮಂತಯ್ಯನವರು, ಸಭಾಧ್ಯಕ್ಷತೆ ವಹಿಸಿದ್ದರು. ವೇದಿಕೆಯ ಮೇಲೆ ಭಾರತ-ರಷ್ಯಾ ಧ್ವಜಗಳು ಕಂಗೊಳಿಸುತ್ತಿದ್ದುವು.

ಕಾರ್ಯದರ್ಶಿ ಶ್ರೀ ಸಿದ್ದರಾಮಣ್ಣನವರು ಅತಿಥಿಗಳನ್ನೂ ಸಭಿಕರನ್ನೂ ಸ್ವಾಗತಿಸಿದರು.

ಅಕ್ಟೋಬರ್ ಮಹಾಕ್ರಾಂತಿಯ ಮಹತ್ವ, ಸೋವಿಯತ್ ಯೂನಿಯನಿನ ಅದ್ಭುತ ಪ್ರಗತಿ, ಭಾರತ—ರಷ್ಯಾ ಮೈತ್ರಿಯ ಕುರಿತು ಡಾ॥ ಭೋಲಾ ಡಿ. ಪಂತ್ ಮತ್ತು ಡಾ॥ ಕೆ. ಟಿ. ಬೆಹನನ್ ಭಾಷಣ ಮಾಡಿದರು. ನಂತರ ರಷ್ಯಾದ ರಾಯಭಾರಿ ಕಛೇರಿಯ ಪ್ರತಿನಿಧಿಯಾದ ಮಾನ್ಯ ಶ್ರೀ ಕುಡಿನೋವ್‌ರವರು ಭಾಷಣ ಮಾಡಿದರು. ಆರಂಭದಲ್ಲಿ ಹಿಂದಿಯಲ್ಲೂ ನಂತರ ಇಂಗ್ಲಿಷಿನಲ್ಲಿಯೂ ಅವರು ಮಾತನಾಡಿದರು.

ಭಾರತ-ರಷ್ಯ ಸಾಂಸ್ಕೃತಿಕ ಸಂಘದ ಉಪಾಧ್ಯಕ್ಷರಾದ ಶ್ರೀ ಸಿದ್ದಿಕಿಯವರು ವಂದನಾರ್ಪಣೆ ಮಾಡಿದರು. ರಾಷ್ಟ್ರಗೀತೆಯ ನಂತರ ಸಭೆ ಮುಕ್ತಾಯವಾಯಿತು. ರಾತ್ರಿ 8-30ಕ್ಕೆ ಚಲಚ್ಚಿತ್ರ ಪ್ರದರ್ಶನ ನಡೆಯಿತು.

ಕರ್ನಾಟಕ ರೈತ ಸಮ್ಮೇಳನ

(೩ನೇ ಪುಟದಿಂದ)

ಬಲವಾದ ರೈತಸಂಘಗಳನ್ನು ಕಟ್ಟಲು ಸಾಧ್ಯವಿದೆ.

1944ರಲ್ಲಿ, ಉತ್ತರ ಕನ್ನಡ ಜಿಲ್ಲೆಯಲ್ಲಿ ರೈತ ಸಂಘಟನೆ ಆರಂಭವಾಯಿತು. ಕೆಂಪು ಬಾವುಟದಡಿಯಲ್ಲಿ ಹೋರಾಟಗಳು ನಡೆದವು. ಉಗ್ರ ದಬ್ಬಾಳಿಕೆಯನ್ನೆದುರಿಸಬೇಕಾಯಿತು. ಅನೇಕರು ಜೈಲಿಗೆ ಹೋದರು. ರೈತ ನಾಯಕರಾದ ಗಣಮಹಾಬಲನಾಯ್ಕರು ನಾಸಿಕ್ ಜೈಲಿನಲ್ಲಿ 1949ರಲ್ಲಿ ಪೋಲೀಸರ ಗುಂಡಿಗೆ ಆಹುತಿಯಾಗಿ ಹುತಾತ್ಮರಾದರು. ಕಾರವಾರದಲ್ಲಿ ರೈತಸಂಘಟನೆಗೆ ನಿರಂತರ ದುಡಿದ ರೈತ ಮುಖಂಡ ಪುರುಷೋತ್ತಮ ಜೋಗ್ ನಾಯ್ಕರು ರೈತರ ಸೇವೆಯಲ್ಲೇ ಕಳೆದ ವರ್ಷ ಮಡಿದರು. ಕಾರವಾರದ ರೈತರ ಹೋರಾಟ ಚಿರಸ್ಮರಣೀಯವಾಗಿದೆ. ಬಿಜಾಪುರದ ಗಣಿ ಮತ್ತಿತರ ಕಡೆಗಳಲ್ಲೂ ರೈತರು ಗಣನೀಯ ಹೋರಾಟ ನಡೆಸಿದ್ದಾರೆ. 1952-53ರಲ್ಲಿ ಕ್ಷಾಮ ಬಂದಾಗ ಕೋಲಾರ ಜಿಲ್ಲೆ, ಬಿಜಾಪುರ, ಬೆಳಗಾಂ ಮುಂತಾದ ಕಡೆಗಳಲ್ಲಿ ಪ್ರಬಲ ಚಳುವಳಿ ನಡೆದಿತ್ತು. 1957ರಿಂದ ಕೋಲಾರದ ರೈತರು ಜೋಡಿ ಪದ್ಧತಿಯ ರದ್ದಿಗಾಗಿ ಹೋರಾಟ ನಡೆಸಿ ಸರಕಾರ ಜೋಡಿ ಇನಾಂ ರದ್ದು ಶಾಸನ ತರುವಂತೆ ಒತ್ತಾಯಪಡಿಸಿರುತ್ತಾರೆ. ಅದೇ ಸಮಯದಲ್ಲೇ ದ. ಕ. ಜಿಲ್ಲೆಯಲ್ಲಿ ಗೇಣಿ ಶಾಸನಕ್ಕೂ, ಒಕ್ಕಲೆಬ್ಬಿಸುವುದರ ವಿರುದ್ಧವೂ ಹಲವು ವರ್ಷಗಳಿಂದ ಚಳುವಳಿ ನಡೆದಿದೆ. ಕುಣಿಗಲ್ ತಾಲ್ಲೂಕು ಮತ್ತಿತರ ಕಡೆಗಳಲ್ಲೂ ಹೋರಾಟ ನಡೆದಿದೆ. ಹೀಗೆ ನಮ್ಮ ಪ್ರಾಂತದಲ್ಲಿ ಅನೇಕ ಕಡೆಗಳಲ್ಲಿ ಅಖಿಲ ಭಾರತ ಕಿಸಾನ್ ಸಭೆಯ ನೇತೃತ್ವದಲ್ಲಿ ಸಂಘಟನೆಗಳಾಗಿವೆ ಮತ್ತು ಹೋರಾಟಗಳು ನಡೆದಿವೆ. ಆದರೆ ಇವೆಲ್ಲಾ ಸ್ಥಳೀಯ ಹೋರಾಟಗಳಾಗಿದ್ದುವು. ಕೇಂದ್ರ ಸಂಸ್ಥೆಯೊಂದು ಇಲ್ಲದಿದ್ದುದೇ ಇದಕ್ಕೆ ಕಾರಣ. ಈ ನ್ಯೂನತೆಯನ್ನು ನಿವಾರಿಸುವುದು ಅತ್ಯಗತ್ಯ. ಈ ಸಮ್ಮೇಳನವಲ್ಲಿ ಪ್ರಾಂತದ ರೈತ ಚಳುವಳಿಯನ್ನು ಪ್ರತಿಬಿಂಬಿಸುವ ಒಂದು ಬಲವಾದ ಪ್ರಾಂತ ರೈತ ಸಂಘಟನೆಯು ಸ್ಥಾಪನೆಯಾಗುವುದು ಅಗತ್ಯ.

ನಾಡಿನ ಅಭಿವೃದ್ಧಿಗೆ, ಪ್ರಜಾಪ್ರಭುತ್ವ ಚಳುವಳಿಗೆ ಭೂ ಸಮಸ್ಯೆಯನ್ನು ಬಗೆಹರಿಸುವುದು ಅತ್ಯಗತ್ಯ.

ಸಮ್ಮೇಳನವು ನಮ್ಮ ಮುಂದಿರುವ ಸಮಸ್ಯೆಗಳನ್ನು ಚರ್ಚಿಸಿ, ಜಮೀನ್ದಾರರ ಮಿತಿಮೀರಿದ ಗೇಣಿ, ಸಾಹುಕಾರರ ಸಾಲ, ಸರಕಾರದ ತೆರಿಗೆಗಳಿಂದ, ಅಧಿಕಾರಿಗಳ ಲಂಚಗುಳಿತನಗಳಿಂದ ಬೆಂದು ಬೆಂಡಾಗಿರುವ ಕರ್ನಾಟಕದ ರೈತರಿಗೆ ಯೋಗ್ಯ ಮಾರ್ಗದರ್ಶನ ಮಾಡುವುದೆಂದೂ ನಾಡಿನಾದ್ಯಂತ ರೈತ ಚಳುವಳಿ ಬೆಳೆಯುವಂತೆ ಕಾರ್ಯಕ್ರಮವನ್ನು ತೆಗೆದುಕೊಳ್ಳುವುದೆಂದೂ ನಾವು ಹಾರೈಸುತ್ತೇವೆ.

—೦—

ಕರ್ನಾಟಕ ತೋಟ ಕೆಲಸಗಾರರ ಪ್ರಥಮ ಸಮ್ಮೇಳನ

ಕರ್ನಾಟಕ ಪ್ರೊವಿನ್ಸಿಯಲ್ ಪ್ಲಾಂಟೇಶನ್ ಕೆಲಸಗಾರರ ಪ್ರಥಮ ಸಮ್ಮೇಳನ ಸಕಲೇಶ್‌ಪುರದಲ್ಲಿ ಡಿಸಂಬರ 11 ಮತ್ತು 12ರಲ್ಲಿ ನಡೆಯುವುದು. ಇದರ ಪ್ರಚಾರಕ್ಕೋಸ್ಕರ 7—11—51ರಿಂದ ಪ್ಲಾಂಟೇಶನ್ ಭಾಗವಾದ ಚಿಕ್ಕಮಗಳೂರು ಜಿಲ್ಲೆ ಮತ್ತು ಹಾಸನ್ ಜಿಲ್ಲೆಯ ನಾನಾ ಭಾಗಗಳಲ್ಲಿ ಸಭೆಗಳನ್ನು ನಡೆಸಲು ಪ್ರಚಾರ ವ್ಯಾನ್ ಸಹಿತ, "ಕರ್ನಾಟಕ ಪ್ರೊವಿನ್ಸಿಯಲ್ ಪ್ಲಾಂಟೇಶನ್ ವರ್ಕರ್ಸ್" ಯೂನಿಯನ್ ಕಾರ್ಯಕರ್ತರು ಹೊರಟು ಅಲ್ಲಲ್ಲಿ ಸಭೆಗಳನ್ನು ನಡೆಸುತ್ತಿದ್ದಾರೆ.

ಇದೇ ತಿಂಗಳ ತಾ॥ 10ರಂದು ಕಾಡುಮನೆಯಲ್ಲಿ ಮತ್ತು ತಾ 11ರಲ್ಲಿ ಬೆಳಿಗೆ ಅರೆಹಳ್ಳಿಲ್ಲಿ ಕಾ॥ ಎಂ. ವಿ. ಭಾಸ್ಕರ್‌ರವರ ಅಧ್ಯಕ್ಷತೆಯಲ್ಲೂ ಅದೇ ದಿನ ಸಂಜೆ ಕಲ್ಲಕುಂದದಲ್ಲಿ ಕಾ॥ ಎಸ್. ಎಂ. ಜೋನ್ ಟೈಲರ್‌ರವರ ಅಧ್ಯಕ್ಷತೆಯಲ್ಲೂ ಸಭೆಗಳು ನಡೆದವು. ಭಾಷಣಕರ್ತರು ಮುಂದಿನ ತಿಂಗಳಲ್ಲಿ ನಡೆಯುವ ಸಮ್ಮೇಳನಕ್ಕೆ ಬೇಕಾದ ಸಲಕರಣೆಗಳನ್ನು ಒದಗಿಸುವುದಲ್ಲದೆ, ಪ್ರತಿಯೊಬ್ಬರೂ ಸಮ್ಮೇಳನದಲ್ಲಿ ಭಾಗವಹಿಸಲು ಕೇಳಿಕೊಂಡರು.

ಬೆಂಗಳೂರು ಕಾರ್ಪೊರೇಷನ್ ಚುನಾವಣೆ

ಕಾರ್ಮಿಕ ಕ್ಷೇತ್ರದಲ್ಲಿ ಕಾಂಗ್ರೆಸ್ಸಿಗೆ ಸೋಲು ?

ನಾಲ್ಕು ವರುಷಗಳ ನಂತರ ಬೆಂಗಳೂರು ಕಾರ್ಪೊರೇಷನ್ ಚುನಾವಣೆ ಇಂದು ಬರುತ್ತಿದೆ. ಕಳೆದ ವರ್ಷವೇ ನಡೆಯಬೇಕಾಗಿದ್ದ ಈ ಚುನಾವಣೆಯನ್ನು ಕಾಂಗ್ರೆಸ್ ಪಕ್ಷದವರು ಚಿತಾವಣೆ ನಡೆಸಿ ಒಂದು ವರ್ಷ ಜೀವದಾನ ಪಡೆದರು. ಕ್ಷೇತ್ರ ವಿಂಗಡನೆಯ ಹೆಸರಿನಲ್ಲಿ ಮುಂದೆ ಹಾಕಲಾಗಿದ್ದ ಈ ಚುನಾವಣೆಯು ಡಿಸೆಂಬರ್ ತಿಂಗಳಲ್ಲಿ ನಡೆಯಲಿದೆ. ಕ್ಷೇತ್ರ ವಿಂಗಡಣೆ ಮಾಡುವಾಗ ಕಾಂಗ್ರೆಸ್ ಆಡಳಿತಗಾರರು ತಮ್ಮ ಮನಬಂದಂತೆ ಮಾಡಿರುವುದೇ ಅಲ್ಲದೆ, ತಮ್ಮ ಹಿತಕ್ಕನುಗುಣವಾಗಿ ಮಾಡಿಕೊಂಡಿದ್ದಾರೆಂದು ವಿರೋಧ ಪಕ್ಷಗಳವರಿಂದ ಗಂಭೀರವಾದ ಆರೋಪ ಬಂದಿದೆ. ಬೆಂಗಳೂರು ನಗರದ ನಾಗರಿಕರಿಗೆ ಈ ಚುನಾವಣೆ ಬಹಳ ಮುಖ್ಯಸ್ವದ್ದಾಗಿದೆ.

ಕರ್ನಾಟಕದ ರಾಜಧಾನಿಯಾದ ಬೆಂಗಳೂರು ನಗರ ತೀವ್ರವಾಗಿ ವಿಸ್ತಾರಗೊಳ್ಳುತ್ತಿದೆ. ಹೊಸ ಹೊಸ ಬಡಾವಣೆಗಳು ಉದ್ಭವಿಸುತ್ತಿವೆ. ನಗರ ವಿಸ್ತಾರಗೊಳ್ಳುತ್ತಿದ್ದಂತೆಯೇ ಅನೇಕ ಸಮಸ್ಯೆಗಳುಂಟಾಗಿವೆ. ಮುಖ್ಯವಾಗಿ ನೀರಿನ ಸರಬರಾಜು ವ್ಯವಸ್ಥೆ, ಸ್ಯಾನಿಟರಿ ವ್ಯವಸ್ಥೆ, ರಸ್ತೆಗಳ ರಿಪೇರಿ ವ್ಯವಸ್ಥೆ ಇವು ಅತ್ಯಂತ ಜರೂರಾಗಿವೆ. ಅಲ್ಲದೆ ಇಂದಿನ ಕಾರ್ಪೊರೇಷನ್ ಸ್ವಾಯತ್ತ ಆಡಳಿತಾಧಿಕಾರವನ್ನು ಪಡೆಮ ಕೊಳ್ಳುವ ಮುಖ್ಯ ಪ್ರಶ್ನೆಯೂ ಸಹ ಇದೆ. ಪ್ರಬಲವಾದ ವಿರೋಧ ಪಕ್ಷವು ಇಲ್ಲದಿರುವುದರಿಂದಾಗಿ ಕಾರ್ಪೊರೇಷನ್ ಆಡಳಿತೆಯು ಅವ್ಯವಸ್ಥೆಯಿಂದ ಕೂಡಿದ್ದಾಗಿದೆ. ಅನೇಕ ಸಭೆಗಳು ಕೋರಂ ಇಲ್ಲದೆ ಮುಂದೆ ಹೋಗುತ್ತಿದೆ. ಇಂಥ ಹೀನ ಸ್ಥಿತಿ ಕೊನೆಗಾಣುವುದು ಅಗತ್ಯ.

ಕಾರ್ಮಿಕ ಕ್ಷೇತ್ರಕ್ಕೆ ಮೀಸಲಾಗಿರುವ ನಾಲ್ಕು ಸ್ಥಾನಗಳಿಗೆ ಈ ತಿಂಗಳ ಅಂತ್ಯದಲ್ಲಿ ಚುನಾವಣೆ ನಡೆಯಲಿದೆ. ಕಳೆದ ಚುನಾವಣೆಗಳಲ್ಲಿ ಟೆಕ್ಸ್‌ಟೈಲ್ಸ್-ನಾನ್ ಟೆಕ್ಸ್‌ಟೈಲ್ಸ್, ನಾಲ್ಕು ಕಾರ್ಮಿಕ ಕ್ಷೇತ್ರಗಳಲ್ಲೂ ಕಾಂಗ್ರೆಸ್ಸಿಗೆ ಸೋಲಾಗಿತ್ತು. ಈ ಬಾರಿಯೂ ಸಹ ಸೋಲು ಖಂಡಿತ.

ಕಾರ್ಮಿಕ ಕ್ಷೇತ್ರದಲ್ಲಿ ನಾನ್ ಟೆಕ್ಸ್‌ಟೈಲ್ ಕ್ಷೇತ್ರಕ್ಕೆ ಕಮ್ಯೂನಿಸ್ಟ್ ಪಾರ್ಟಿಯ ಬೆಂಗಳೂರು ಜಿಲ್ಲಾ ಸಮಿತಿಯ ಸದಸ್ಯರೂ, ಪ್ರಮುಖ ಟ್ರೇಡ್ ಯೂನಿಯನ್ ಕಾರ್ಯಕರ್ತರೂ, ಕಾರ್ಪೊರೇಷನ್ ಕೆಲಸಗಾರರ ಸಂಘದ ಕಾರ್ಯದರ್ಶಿಗಳಾದ ಶ್ರೀ ಡಿ. ಎಸ್. ಶ್ರೀರಾಮುಲುರವರು ಮತ್ತು ಟ್ರೇಡ್ ಯೂನಿಯನ್ ಕಾರ್ಯಕರ್ತರಾದ ಶ್ರೀ ಪಲನಿವೇಲುರವರು ಸ್ಪರ್ಧಿಸಿದ್ದಾರೆ. ಅಧಿಕ ಸಂಖ್ಯೆಯಲ್ಲಿ ಕಾರ್ಮಿಕರು ಇವರಿಗೆಬೆಂಬಲವಿತ್ತು ಆರಿಸಿ ಬರುವುದರಲ್ಲಿ ಸಂದೇಹವಿಲ್ಲ.

ಉಳಿದ ಸಾರ್ವತ್ರಿಕ ಕ್ಷೇತ್ರದಲ್ಲಿ ಕಾಂಗ್ರೆಸ್ಸನ್ನು ಎದುರಿಸಲು ನಾಗರಿಕರ ಸಂಯುಕ್ತ ರಂಗವನ್ನು ರಚಿಸಲಾಗುತ್ತಿದೆ. ಸಂಯುಕ್ತ ರಂಗದ ಉಮೇದುವಾರರುಗಳು ಅಧಿಕ ಸಂಖ್ಯೆಯಲ್ಲಿ ಆರಿಸಿ ಬರಲೆಂದು ಹಾರೈಸುತ್ತೇವೆ.

—೦—

ರಷ್ಯದ ಕ್ರಾಂತಿ ದಿನಾಚರಣೆ

ಚಿಕ್ಕಮಗಳೂರು ಕಮ್ಯೂನಿಸ್ಟ್ ಶಾಖೆಯ ಆಶ್ರಯದಲ್ಲಿ ರಷ್ಯನ್ ಕ್ರಾಂತಿಯ40 ನೇ ವರ್ಧಂತಿಯಂಗವಾಗಿ ಚಿಕ್ಕಮಗಳೂರು ಜೈಲ್ ರೋಡಿನಲ್ಲಿರುವ "ಮಲ್ಲೇಗೌಡ ಓವೆಲ್"ನಲ್ಲಿ 7-11-57ರಂದು ಸಾಯಂಕಾಲ 6ಘಂಟೆಗೆ ಸರಿಯಾಗಿ, ಕಾ॥ ಯಂ. ವಿ. ಸುಬ್ಬಯ್ಯನವರ ಅಧ್ಯಕ್ಷತೆಯಲ್ಲಿ ಬಹಿರಂಗ ಸಭೆ ನಡೆಯಿತು.

ಪ್ರಥಮವಾಗಿ ಕಾ॥ಬಿ. ವೀರಣ್ಣನವರು ಮತ್ತು ಚಿಕ್ಕಮಗಳೂರು ಶಾಖೆಯ ಕಾರ್ಯದರ್ಶಿಯವರಾದ ಕಾ॥ ಯಂ. ವಿ. ಭಾಸ್ಕರ್‌ರವರು, 1917ರಲ್ಲಿ ಮಜೂರ ವರ್ಗದ ಯಶಸ್ವೀ ಕ್ರಾಂತಿಯ ನಂತರ ಅಲ್ಲಿಯ ಸಾಧನೆಗಳನ್ನು ವಿವರಿಸಿ ಭಾಷಣ ವಿತ್ತರು.

ಅತಿಥಿ ರಾಷ್ಟ್ರಕ್ಕೆ ಅಪಮಾನವೆಸಗಿದ

ಅಮೆರಿಕದ ಕುಹಕ ನೀತಿ !

ಹೊಸ ದೆಹಲಿಯಲ್ಲಿ ನಡೆದ ಅಂತರ್ ರಾಷ್ಟ್ರೀಯ ರೆಡ್‌ಕ್ರಾಸ್ ಸಮ್ಮೇಳನದ ಕೊನೆಯ ಹಂತದಲ್ಲಿ ಅಮೆರಿಕದ ಪ್ರತಿನಿಧಿಯು ತನ್ನ ಕುಹಕ ನೀತಿಯನ್ನು ಪ್ರಕಟಿಸಿದ್ದು ಖಂಡನೀಯವಿದೆ.

ರೆಡ್‌ಕ್ರಾಸ್ ಸಮ್ಮೇಳನದಲ್ಲಿ "ಚೀನಾ ಪ್ರಜಾ ರಾಜ್ಯದ ಪ್ರತಿನಿಧಿ"ಯಾಗಿ ಫರ್ಮೋಸಾದ ಪ್ರತಿನಿಧಿಯನ್ನು ಒಳಬಿಡಬೇಕೆಂದು ಅಮೆರಿಕ ಠರಾವು ಮಂಡಿಸಿತು; ತನ್ನ ಅನುಯಾಯಿಗಳ ಬೆಂಬಲದಿಂದ ಆ ಠರಾವನ್ನು ಮಂಜೂರು ಮಾಡಿಸಿಕೊಂಡಿತು.

ರೆಡ್‌ಕ್ರಾಸ್ ಸಂಸ್ಥೆಯೊಳಗೆ ಶೀತಯುದ್ಧದ ರಾಜಕೀಯವನ್ನು, ಮನೆ ಮುರುಕ ನೀತಿಯನ್ನು, ಬಗಲ ಬಚ್ಚರನ್ನು ನುಸುಳಿಸುವ ಯತ್ನವನ್ನು ಅಮೆರಿಕ ನಡೆಸಿತು. ಸಮ್ಮೇಳನಕ್ಕೆ ಅತಿಥಿಯಾಗಲೊಪ್ಪಿದ್ದ ಭಾರತಕ್ಕೆ ಅಗೌರವವನ್ನು ತೋರಿಸಿತು.

ಫರ್ಮೋಸಾದ ಪ್ರತಿನಿಧಿಯನ್ನು ಒಳಬಿಡುವ ಠರಾವು ಮಂಜೂರಾದೊಡನೆ ಜನತಾ ಚೀನದ ಪ್ರತಿನಿಧಿ ಮಂಡಲದ ನಾಯಕ ರಾಯಭಾರಿ ಪಾನ್‌ಟ್ಸುಲಿ, "ಈ ಘನವಾದ ಅಂತರ್‌ರಾಷ್ಟ್ರೀಯ ಮಾನವತಾ

(೧ನೇ ಪುಟ ನೋಡಿ)

REG. No. M. 6867

Edited Printed and Published by C. R. Krishna Rao, at Janashakthi Printers, L—59, K. V. Temple St., Sultanpet Bangalore—2 phone: 3810